ಬೇರ್‌ಲ-ಚಿಗ್‌ರ್

ಬೈತಡ್ಕ ಜಾನಕಿ ಬೆಳ್ಯಪ್ಪ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಬೇರ್ಲ ಚಿಗರ್ – 1

ಬೇರ್‌ಲಿ ಚಿಗ್‌ರ್

ಬೈತಡ್ಕ ಜಾನಕಿ ಬೆಳ್ಯಪ್ಪ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

‘BERLI CHIGRU' a collection of folk songs in Arebhase language written by Bythadka Janaki Belliappa, Racecourse Road, Madikeri. Published by ‘Karnataka Arebhase Samskrithi Mathu Sahitya Academy’

ಬೆಲೆ : ರೂ. 70/- Price : Rs. 70/-

ಪ್ರಕಟಣೆ : 2015

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಡಾ. ಪೂವಪ್ಪ ಕಣಿಯೂರು
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀ ಮೋಹನ ಸೋನ
ಶ್ರೀಮತಿ ಸಂಗೀತ ರವಿರಾಜ್

ಪ್ರಕಟಣೆ : **ರಿಜಿಸ್ಟ್ರಾರ್**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಕಾಫಿ ಕೃಪ ಬಿಲ್ಡಿಂಗ್,
ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223075

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್, ಮಡಿಕೇರಿ.
Ph : 08272-224919, 9448135592

ಅಧ್ಯಕ್ಷರ ಮಾತ್

ಅರೆಭಾಷಿಕರ ಬಾಳ ದಿನದ ಕನಸ್ ಆಗಿದ್ದ ಅಕಾಡೆಮಿ ಆಕಿರಿಗೂ ಕರ್ನಾಟಕ ಘನ ಸರಕಾರ ಮಾನ್ಯತೆ ಮಾಡಿ ಅರೆಭಾಷೆ ಸಂಸ್ಕೃತಿ ಸಾಹಿತ್ಯ ಅಕಾಡೆಮಿನ ಸ್ಥಾಪನೆ ಮಾಡಿಯೊಳೊ.

ಅರೆಬಾಸೆ ಸಂಸ್ಕೃತಿ ಸಾಹಿತ್ಯ ಜಾನಪದನ ಉಳಿಸಿ ಬೆಳ್ಸಿಕೆ ಸರಕಾರ ಸಮಿತಿ ರಚನೆ ಮಾಡಿಯೊಳೊ. ಅರೆಬಾಸೆಲಿ ಪುಸ್ತಕ ಬಾಳ ಕಮ್ಮಿಯಿದ್ದ್ ಅಕಾಡೆಮಿ ಅರೆಬಾಸೆ ಪುಸ್ತಕ ಪ್ರಕಟಣೆಗೆ ಆದ್ಯತೆ ಕೊಟ್ಟದೆ. ಈ ಒಂದ್ ಅವಕಾಸನ ಬಳ್ಸಿಕಂಡ್ ಲೇಖಕರ್ ಅರೆಬಾಸೆಲಿ ಕಥೆ, ಕವನ, ಅನುವಾದ ಕತೆಗ, ಸಂಸ್ಕೃತಿಗೆ ಸಂಬಂದಪಟ್ಟ ಲೇಖನಗಳ್ನ ಬರೆಯೊಕೂತ ಮನವಿ ಮಾಡ್ತಾವೊಳೆ.

ಸುರೂಲಿ ಐದ್ ಪುಸ್ತಕಗಳ್ನ ಪ್ರಕಟಣೆ ಮಾಡಿಕೆ ನಮ್ಮ ಸಮಿತಿ ತೀರ್ಮಾನ ಮಾಡಿಯೊಳೊ, ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ದುಲೆ. ಲೇಖಕರ್ ಅವರ ಸೃಜನ ಶೀಲತೆನ ಈ ಲೇಖನಲಿ ತೋರ್ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಓರಗೆ ಹಚ್ಚಿಯೊಳೊ.

ಈ ನಿಟ್ಟ್‌ಲಿ ಹಿರಿಯವು ಆದ ಮತ್ತೆ ಅಕಾಡೆಮಿನ ಹಳೆ ಸಮಿತಿ ಸದಸ್ಯರ್ ಆದ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವು "ಬೇರ್‌ಲಿ ಚಿಗ್‌ರ್"ಂತೇಳ್ವ ಪುಸ್ತಕನ ಬರ್ದೊಳೊ. ಲೇಖಕಿಯವು ಜಾನಪದ, ಭಕ್ತಿಗೀತೆ, ಭಾವಗೀತೆ, ಸೋಬಾನೆ ಮತ್ತೆ ಹಬ್ಬ ಹರಿದಿನಗಳ್‌ಲಿ ನಡೆಯುವ ನಮ್ಮ ಆಚರಣೆಗಳ ಪೂರಕವಾಗಿ ಪುಸ್ತಕನ ಬರ್ದೊಳೊ. ಈ ಪುಸ್ತಕ ಮುದ್ರಣ ಕಾರ್ಯಕ್ಕೆ ಸಹಾಯ ಮಾಡ್ದ ಡಾ. ಕೋರನ ಸರಸ್ವತಿಯವ್ಕೂ ಮತ್ತೆ ಪುಸ್ತಕ ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

ಲೇಖಕಿನ ಆತ್ಮದ ನುಡಿ

ಬೇರ್‌ಲಿ ಚಿಗ್‌ರ್ ನನ್ನ ಮನ್‌ಸ್‌ನ ಕನ್‌ಸ್. ಇದ್ ಕೃತಿರೂಪಲಿ ಜನಪದ ಸಾಹಿತ್ಯಕ್ಕೆ ಸೇರ್‌ಕಂಡ್ ಹೊರಗೆ ಬಂದುಟು. ಸುರುನ ಕೃತಿ ಹತ್ತ್ ಕುಟುಂಬ ಹದ್‌ನೆಂಟ್ ಗೋತ್ರಗಳಿಗೆ ಸೇರ್ದ ಅರೆಭಾಷೆ ಮಾತಾಡ್‌ವ ಗೌಡ ಜನಾಂಗದ ಹಿರಿಯೊವು ಉಳಿಸಿಕಂಡ್ ಬಂದ ಸಂಸ್ಕೃತಿ ಪರಿಚಯದ ಸೋಬಾನೆ ಸಂಗ್ರಹ ಹಸೆಮಣೆ 13.06.2000. ಎರಡನೇ ಕೃತಿ ಜನಾಂಗದ ಆಚರ್‌ಣೆಗಳ ಸಂಗ್ರಹ ಅಕ್ಷಯ 07–03–2009 ಹಸೆಮಣೆ ದ್ವಿತಿಯ ಮುದ್ರಣ 2010 ಮುಗ್ದ್ ಮೂರನೆ ಮುದ್ರಣಕ್ಕೆ ನಿತ್ತಿರ್‌ವ ಈ ಸಂದರ್ಭಲಿ ಅರೆಭಾಷೆ ಸಂಸ್ಕೃತಿ ಮತ್ತೆ ಜನಪದ ಆಟಗಳ್‌ನ ಯಾವ ರೀತಿ ಪರಂಪರಾಗತ ವಾಗಿ ಉಳ್‌ಸಿಕಂಡ್ ಬರೊಕುತೇಳ್ದೊರ್‌ನ ಅಳಿತಾಯಿರ್‌ವ ಹುತ್ತೆರಿ ಕೋಲಾಟ, ಜೋಗಿಯಾಟ, ಬೆಳ್‌ಕಾಟಗಳ್‌ನ ಮೂಲ ಸಂಸ್ಕೃತಿ ತೇಳಿ ನಮ್ಮ ಹಿರಿಯರ್ ಆಡ್ತಾಯಿದ್ದದನ್ನ ಗ್ಯಾನ ಮಾಡಿ ಕಂಡ್ ನನ್ನದೇ ಆದ ಕಲ್ಪನೆಗೆ ತಂದ್ ಅರೆಭಾಷೆಲಿ ರಚನೆ ಮಾಡ್ತಾ ಈಗ ಇದ್ ಕೃತಿ ರೂಪಕ್ಕೆ ಬಂದ್ "ಬೇರ್‌ಲಿ ಚಿಗ್‌ರ್" ತೇಳ್‌ವ ಹೆಸ್‌ರ್‌ಲಿ ನಿತ್ತುಟ್ಟು. ಇದ್ ಮೂರನೆ ಕೃತಿ ನನ್ನದ್ ತೇಳಿಕೆ ಹೆಮ್ಮೆಆದೆ.

ಒಂದು ಜನಾಂಗದ ಸಂಸ್ಕೃತಿ ಜನಪದ ಆಟಗ ಅಳ್ದ್ ಹೋಗ್ತಾಯಿರ್‌ವ ವಿಸಯಗತ ಹೇಳಿಕೆ ಬ್ಯಾಸರ ಆಗ್ತಾಯಿದ್ದರೂ ಅಳ್ತ್‌ಲೆತೇಳ್‌ವ ಕುಸಿನ ವಿಸಯನ ಹೇಳಿಕೆ ಆಗದಂತ ಪರಿಸ್ಥಿತಿ ನಮ್ಮ ಜನಪದ ಕಲೆಲಿ ಅಡ್‌ಂಗಿಟ್ಟು. ಕಾರಣ ಆಧುನಿಕ ಯುಗಲಿ ನಗರೀಕರಣದ ಸಮಸ್ಯೆ ಎತ್ತೋ ಸಾಗ್ತಾಯಿರ್‌ವ ನಮ್ಮ ಸಂಸ್ಕೃತಿ ಆಗುಟ್ಟು. ಇಂತಹ ಸಂದರ್ಭನ ಹೆಂಗೆ ಉಳ್ಸಿಕಂಡ್ ಹೋಕುತೇಳಿ ಸರ್ಕಾರ ಜನಪದ ಕಲೆಗೆ ಬಹಳ ವರ್ಷಗಳ್‌ಂದ ಸಾಕಷ್ಟ್ ಪ್ರೋತ್ಸಾಹ ಕೊಡ್ತಾ ಬರ್ತಾವುಟ್ಟು . ಅದ್ಕಾಗಿ ನಾವ್‌ಗೆ ಈಗ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿತೇಳಿ ಬಂದುಟು. ಅದರ್ನ ನಾವು ಉಳ್ಸಿಕಣಕು. ಪ್ರಥಮಬಾರಿಗೆ ನಾನ್ ಅಕಾಡೆಮಿಗೆ ಪ್ರಥಮ ಮಹಿಳಾ ಸದಸ್ಯೆ ಆಗಿ ಬಂದರೂ ಅದರ್ನ ಹೆಂಗೆ ಹೆಗಲ್‌ಗೆ ತಕೊಂಬದು ತೇಳ್‌ಕಂಡ್ ಇರುವ ಹೊತ್ತಿಗೆ ಚಿಗ್‌ರ್‌ಲೆ ಮುರ್‌ಟಿಹೋಕನ ಆದ ಬ್ಯಾನೆಂದ ಜಾಗೃತ ಆದ ನನ್ನ ಮನ್ಸ್ ಮತ್ತೆ ಪೆನ್ನ್ ಕೆಲ್ಸ್‌ನ ಎಲ್ಲೂ ನಿಲ್ಸದೆ ಮುಂದುವರ್ಸಿಕಂಡೆ ಬಾತ್.

ವಿಶಾಲಾಗಿ ಹರ್‌ಂಡಿದ ಆಲದಮರ ಹತ್ತ್ ಕುಟುಂಬ ಹದಿನೆಂಟ್ ಗೋತ್ರದ ಗೌಡ ಜನಾಂಗ. ಇದರಡಿಲಿ ಜನಪದ ಆಟಗಳ್‌ನ ಆಡ್ತಾಯಿದ್ದವು

ಹಿರಿಯರ್ ಇದ್ ನನ್ನ ಕನ್‌ಸ್‌ನ ಮೊಕ ಪುಟ. ಹೊಸ ಚಿಗ್‌ರ್ ಬಂದ್ ಮಂಜ್, ಬಿಸಿಲ್, ಗಾಳಿಗೆ ಮಿಂಚ್‌ಕನ ಎಷ್ಟ್ ಪೊರ್ಲು ಕಂಡದೆನೋ, ಹಂಗೆ ಪೊರ್ಲುನ ಈ ಸಂಸ್ಕೃತಿ ಇದರೊಳಗೆ ಅಡ್‌ಂಗಿಟ್ಟು. ಇದೀಗ ಕವ್‌ಲೊಡ್‌ದ್ ಕನ್ನಡನಾಡ್‌ನ ಬ್ಯಾರೆ ಬ್ಯಾರೆ ಕಡೆ ಹೋಗ್ತಾವುಟ್ಟು. ಮೂಲ ಕನ್ನಡದ ಭಾಷೆ ಆದ ನಾವಾಡ್‌ವ ಅರೆಭಾಷೆ ಕನ್ನಡಕ್ಕಿಂತ ಸುಲ್‌ಬ ಕವನ ಹಾಡ್ ರಚನೆ ಮತ್ತೆ ಹಾಡ್‌ದು ಮಾತಾಡ್‌ವ ರೀತಿಸನ. ಈ ಭಾಷೆನ ಪರಿಚಯ ಕನ್ನಡನಾಡನ ಎಲ್ಲವುಕು ಆಕು. ನಾನ್ ಸುರುಮಾಡ್‌ಕನ ಇಷ್ಟೆಲ್ಲಾ ನನ್ನ ಕಲ್ಪನೆಲಿ ಇತ್ತ್‌ಲೆ . ದಿನಗ ಉರುಳಿದಂಗೆ ಸಾರ್ವಜನಿಕವಾಗಿ ಬೊಳಿಗೆ ಬಾಕೆ ನಮ್ಮ ಯುವ ಜನಾಂಗಕ್ಕೆ ಅರ್ಥ ಆಗುವ ರೀತಿಲಿ ಸರಳವಾಗಿ ಕೆಲು ಮೂಲಗಳ್‌ನ ಮನ್ಸ್‌ಲಿ ಮಡ್ಕಂಡ್ ಉಳ್‌ದ ಎಲ್ಲಾ ವಿಷಯಗಳ್‌ನ ಇಲ್ಲಿ ತುಂಬಿಸಿದ್ ನನ್ನ ಮನ್ಸ್ ಮತ್ತೆ ಪೆನ್ನ್. ಅದರ್‌ಂದ ಇಲ್ಲಿ ಮೂಲಸಂಗ್ರಹದೊಟ್ಟಿಗೆ ಭಾಷಾ ಕಲ್ಪನೆ, ಅನುಭವ ಮತ್ತೆ ಅರೆಬಾಷೆ ಬೆಳವಣಿಗೆನ ಅನಿವಾರ್ಯತೆ ಇಲ್ಲಿ ತುಂಬಿಟ್ಟು.

ಕನ್ನಡ ಸಾಹಿತ್ಯ ಪರಿಷತ್ ಕೊಡಗ್ ಜಿಲ್ಲೆಂದ ಸಾಹಿತ್ಯ ಕ್ಷೇತ್ರಲಿ 2006ರ್‌ಲಿ ಗೌರಮ್ಮ ಪ್ರಶಸ್ತಿ, 2010ರ್‌ಲಿ ಅಂತರಾಷ್ಟ್ರೀಯ ಮಹಿಳಾದಿನಾಚರಣೆ ದಿನ ಜಿಲ್ಲೆಲಿ ಜಾನಪದ ಕಲಾವಿದೆಯಾಗಿ ಮತ್ತೆ 2011ರ್‌ಲಿ ನಾಲ್ಕ್ ಪ್ರಶಸ್ತಿಗಳೊಟ್ಟಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದಿನ ಸಾಹಿತ್ಯ ಕ್ಷೇತ್ರಲಿ ರಾಜ್ಯ ಸರ್ಕಾರಂದ ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ, ಕೊಡಗ್ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡ್‌ಕಂಡ ನಾನ್ ತಿರ್‌ಗಿ ಅವುಕೆ ಕೊಡ್ದು ತಾದರೆ ಅದ್ ಬೇರಲಿಚಿಗರ್.

ಮತ್ತೊಮ್ಮೆ ಕೃತಿಲಿರ್‌ದು ಕಾರ್ಯಲಿ ಬರೊಕುತೇಳಿ ಹಾರೈಸ್‌ತ್ತಾ ಎಲ್ಲವೂ ಸೇರಿ ನಾವ್‌ಗೆ ಸಿಕ್ಕಿದಂತ ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಉಳಿಸಿಕಂಡ್, ಸಂಸ್ಕೃತಿನ ಸಾಹಿತ್ಯರೂಪಲಿ ಬೆಳ್‌ಸಿಕೆ ನನ್ನ ಈ ಕೃತಿಗಳ್‌ನ ಅರ್ಪ್‌ಸ್ತಾವಳೆ. ನನ್ನ ಕೃತಿನ ಪೊರ್ಲಾಗಿ ಮುದ್ರಿಸಿಕೊಟ್ಟ ಶ್ರೀ ಕೃಷ್ಣ ಕಂಪ್ಯೂಟರ್ಸ್ ಮಾಲೀಕ ಮತ್ತೆ ಸಿಬ್ಬಂದಿಗಳಿಗೆ ನನ್ನ ಶುಭ ಹಾರೈಕೆಗ.

– ಬೈತಡ್ಕ ಜಾನಕಿ ಬೆಳ್ಯಪ್ಪ

ಒಳ ಪುಟಲಿ

ವಾಲಗವೂದುವೆ

ವಾಲಗವೂದುವೆ । ವಾಲಗವೂದುವೆ।
ಸ್ವಾಮಿಗಿಂದ್ ವಾಲಗವೂದುವೆ ॥

ಸೂರ್ಯಂಗು ಚಂದ್ರಂಗು । ಉರಿವ ಜ್ಯೋತಿಗು
ಭೂಮಿಗು ಬಾನಿಗು । ಎಂಟ್ ದಿಕ್ಕಿಗು ॥
ಹಾರುವ ದುಂಬಿಗು । ಹಾಡ್‌ವ ಹಕ್ಕಿಗು ।
ಕಾವೇರಿ ತೀರ್ಥದ ಕುಂಡಿಕೆಗು ॥ ವಾಲಗ ॥

ವಣ್‌ಕೆಲಿ ಕುಟ್ಟುವ ಮುತ್ತೈದೆಗು
ಅಂಗಳದ ತೊಳ್‌ಸಿ ರಂಗೋಲಿಗು ॥
ಗದ್ದೆನ ಹೂಡುವ ರೈತಂಗು ॥
ರೈತನ ನೇಗ್‌ಲ್ ನೊಗಕ್ಕು ॥ ವಾಲಗ ॥

ಬೆಳ್ಳಿ ರಥಲಿ ಕುದ್ದ್‌ಕಂಡ್
ಏಳ್ ಗಿರಿ ಏರಿಕಂಡ್ ॥
ಶಂಖ್ ಜಾಗಟೆ ಹೇರಿಕಂಡ್
ನಾಗಬೆತ್ತ ಹಿಡ್ಕಂಡ್ ॥

ಮ್ಯಾಲೆನ ಮಾರ್ಗ ಬಿಸ್‌ಲ್ ತೇಳಿ ।
ಕೆಳ್‌ಗೆನ ಮಾರ್ಗ ಕೆಸ್‌ರ್ ತೇಳಿ ॥
ಮಧ್ಯದ ಮಾರ್ಗಂದ ಬಾಕನ ।
ಎತ್ತಿದೊ ಆರತಿ ಸರ್ವಭಕ್ತರ್ ॥ 3 ॥

ಬಿತ್ತಿದೆಲ್ಲಾ ಬೆಳೆಯಲಿ ಹತ್ತಕ್ಕೆ ನೂರ್‌ಂತೇಳಿ
ವರಗಳ ಕೊಟ್ಟ್‌ಕಂಡ್ ಬಾಕನ
ಭಾಗ್ಯಲಕ್ಷ್ಮಿನ ನೆನ್‌ಕಂಡ್ ಕರ್‌ಕಂಡ್ ।
ಗೋವಿಂದ ಗೋವಿಂದ ಹೇಳ್‌ಕಂಡ್ ॥ವಾಲಗ॥

* * * * *

ನಮಿಸೊನ

ಪ್ರಥಮಕೆ ನಮಿಸೊನ ವಿಘ್ನ ನಿವಾರಕಂಗೆ ।
ಮೊದಲ ಸ್ಥಾನ ಕಲಿಯುಗಲಿ ಅವಂಗೆ ॥
        ಮನೆ ಮನ್ಸ್‌ಲು ಗಣ್‌ಪತಿ ಪ್ರಸನ್ನ ॥
        ಮನ್ಸಿಗೆ ಚೈತನ್ಯ ಗಣೇಶ ನಾಮಾ ॥
ರೈತ ಜೆನಕೆ ಇಂವ ಕೃಷಿ ದೇವತೆ ।
ಶಿವನ ಹಸ್ತ ಇಂವನ ಶಿರಕೆ ॥ಪ್ರ॥
        ವಕ್ರ ತುಂಡ, ಗಜಾನನ ಏಕದಂತ
        ಗಣೇಶಂಗೆ ಹಲವಾರ್ ನಾಮ॥
ಎಲ್ಲವುಕು ಬೇಕಾದಂವ ವಿಘ್ನ ನಿವಾರಕ ।
ಏಕಾಗ್ರ ಮನ್ಸ್‌ಲಿ ಪೂಜೆ ಶುದ್ಧ॥ ಪ್ರಥಮ॥

* * * * *

ಅನುಗ್ರಹ

ಅನುಗೃಹ ಗಣಪತಿ ಪೃಥ್ವಿ ಸ್ವರೂಪ ।
ಇಂವನ ಪೂಜೆ ಮಹಾದಾನಂದ ॥
        ಪೃಥ್ವಿ ಸ್ವರೂಪ ಗಣಪತಿ ಮಾ ಸ್ವಾಮಿ
        ಶರಣಾಗತ ಪೂಜೆ ಸಿದ್ಧಿ, ಬುದ್ಧಿ, । ಅನು ॥
ಆಕಾರ ಕಲ್ಪನೆ । ಅದ್ಭುತ ಗಣೇಶ
ಬ್ರಹ್ಮಾಂಡ ಸಂಕೇತ ಮಹಾಕಾಯಾ ॥ ಅ ॥
        ಭಾದ್ರಪದ ಮಾಸಲಿ ಪ್ರಶಸ್ತ ಸಮಯ ।
        ಪ್ರಿಯವಾದ ದಿನ ಅದ್ ಗಣೇಶಂಗೆ ।
ಅನುಗ್ರಹ ಗಣಪತಿ ವಿಘ್ನನಿವಾರಕಂಗೆ ।
ಗೋರಂಟೆ ಶ್ಯಾವ್‌ಂತಿಗೆ ಹೂಗಳ ಮಾಲೆ ॥ ಅನು ॥

* * * * *

ಕೊಂಡಾಡನೊ

ಕೊಂಡಾಡನೊ ನಾವ್ ಕೊಂಡಾಡನೊ
ಕೊಂಡಾಡನೊ ನಾವ್ ಗಣ್‌ಪತಿನಾ ॥

ಕಂಚ್‌ನ ಬಟ್ಲ್ ಮಡ್ಗಿ । ಕೊಂಬ್‌ನ ಮಿಳ್ಳಿ ಬೆಳ್ಗಿ
ತೆಂಗ್‌ನಕಾಯಿ ತಂದ್ । ಕರಿಮಣಿ ಮಾಲೆಹಾಕಿ ॥

ಮಣ್ಣ್‌ನ ದೀಪಕೆ ಎಣ್ಣೆನ ಹೊಯ್ದ್ ।
ಕಂಚ್‌ಮಿ ಮೊಡ್ಗುವೆ । ದೀಪನ ಬೆಳ್ಗುವೆ ॥ ಕೊ ॥

ಯಾವ ಶುಭ ಕಾರ್ಯ್‌ಲು । ಪೂಜೆ ಮುಂದೆ ।
ಸೀತಾವಳಿ ಚಪ್ಪರದಡಿಲಿ ಸ್ಥಾನ ನಿಂಗೆ ॥

ಗಂಗೆ ಪೂಜೆಗೆ ಎಳ್ಳ್‌ಬೆಲ್ಲ ಪ್ರಸಾದ ನಿಂಗೆ ।
ಒಲೆಪೂಜೆಲಿ ಹೊದ್‌ರಿ ಬಾಳೆಣ್ಣ್ ಯಾಗೊಳು ನಿಂಗೆ ॥

ಭೂಮಿಗೆ ಎತ್ತ್ ಕಟ್ಟಿಕೆ ಮುಂದೆ ಗ್ಯಾನ ನಿಂದೆ......।
ಅಡ್ಕೆ ಹಿಟ್ಟ್ ಪ್ರಸಾದ ಬಾಳ್ಲೆಲಿ ಮೊಡ್ಗುವೆ ॥

ಯಾಕ್ಲ್ ಗದ್ದೆಲಿ ಅಗೆಪೂಜೆ। ಕಂಬಳ ಗದ್ದೆಲಿ ನಾಟಿ ಪೂಜೆ।
ಒಕ್ಕಲಿ ಕಳಲಿ ಬೇಟಿ ಪೂಜೆ ಪದ್ಧತಿ ನಿಂಗೆ ॥

ಕೈಲ್‌ಪೊದು ಹಬ್ಬಲಿ ನೇಗ್‌ಲ್ ಪೂಜೆ ।
ತೊಳ್ಸಿದಿಟ್ಟ್ ಜೇನ್‌ತುಪ್ಪ ಎತ್ತ್‌ಗಳಿಗೆ ॥

ಹುತ್ತೆರಿ ಹಬ್ಬಲಿ ನೆರೆಪೂಜೆ। ನೆಲ್ಲಕ್ಕಿ ಬಾಡೆಲಿ ಕದ್‌ರ್ ಪೂಜೆ
ಪಾಯ್‌ಸ ತುಪ್ಪ ಪ್ರಸಾದ ಯಾಗೊಳು ನಿಂಗೆ ॥

ಸ್ವಾಮಿ ಯಾಗೊಳು ನಿಂಗೆ ॥

* * * * *

ಕಾಪಾಡೊಕು

ಯಾಗೊಳು ನಮ್ಮನ ಕಾಪಾಡೊಕುತೇಳಿ
ಪ್ರಾತನೆ ಮಾಡೊನ ಗಣ್‌ಪತಿನ.........॥

ಬೆಟ್ಟದ ಕೆಳ್ಗೆ ನೀರ್‌ನ ಕಟ್ಟಿ ।
ಕೆರೆನ ತುಂಬ್‌ಸ್ಯೊಳೊ ರೈತರ್॥ ಕೆರೆನ ತುಂಬ್‌ಸ್ಯೊಳೊ॥

ನೀರ್‌ನ ಹಾಯ್ಸಿ ಹುಲ್‌ಸಾಗಿ ಪೈರ್‌ನ ।
ಬೆಳ್ಸೊಳೊ ನಮ್ಮ ರೈತರ್ ॥ ಬೆಳ್ಸೊಳೊ ನಮ್ಮ ರೈತರ್ ॥

ಬೆಳ್ಸೊಳೊ ಸುತ್ತಾ ಕಾಫಿ ಯಾಲಕ್ಕಿ
ಒಟ್ಟಿಗೆ ಸೇರ್ಸ್ಯೊಳೊ ಸುಂಠಿ ಕೃಷಿ ॥

ಸೊರ್‌ದರೆ ಕಾಲಕ್ಕೆ ಮುಂಗಾರ್ ಮಳೆ
ಬಂದದೆ ಕುಸಿನ ಹೊನ್ನುನ ಬೆಳೆ ॥

ಬೆಳ್‌ದರೆ ಬೆಡ್‌ಗ್‌ನ ಭತ್ತದ ಬೆಳೆ
ತಂದದೆ ಜೆನಕೆಲ್ಲ ಕುಸಿನ ಕಳೆ ॥

ತುಂಬಿ ಹರ್‌ದಾ ಕೆರೆ ತೋಡುನಕಂಡ್
ಕುಸಿ ಪಡೊವು ನಮ್ಮ ರೈತರ್ ॥

ಯಾಗೊಳು ನಮ್ಮನ ಕಾಪಾಡೊಕುತೇಳಿ
ಪ್ರಾತನೆ ಮಾಡೊನ ಗಣ್‌ಪತಿನಾ..........॥

* * * * *

ಶರಣಾದೊ

ಶರಣ್ ಸಿದ್ಧಿ ವಿನಾಯಕಾ..........
ಶರಣ್ ಶ್ರೀ ವೆಂಕಟೇಶಾ......ಸ್ವಾಮಿೊ.........
ನಾವಿಂದ್ ನಿಂಗೆ ಶರಣಾದೊ ॥

ಬಾನೆತ್ತರಲಿ ನಿತ್ತ್ ಬೊಗಸೆತುಂಬಿ ।
ಹೂ ಮಳೆ ಚೆಲ್ಲಿ । ಹಾರೈಸಿದಂವನೆ ಸ್ವಾಮಿೊ.........
ನಾವಿಂದ್ ನಿಂಗೆ ಶರಣಾದೊ ॥

ಮೋಡದ ಮರೆಲಿದ್ದ.........ಸೂರ್ಯನ
ಕಿರಣಬಿದ್ದ್ । ಬೆಳ್ಕ್ ಬಾತ್ ಇಂದ್.........ಸ್ವಾಮಿೊ
ನಾವಿಂದ್ ನಿಂಗೆ ಶರಣಾದೊ ॥

ಶಾರದೆ ನಿನ ಕೃಪೆ ನಾವ್‌ಗಿರ್ಲಿ
ಎಲ್ಲವ್‌ರ ನಾಲ್‌ಗೆಲಿ ನಿನನಾಮಾ ಇರ್ಲಿ.......ತಾಯಿೊ
ನಾವಿಂದ್ ನಿಂಗೆ ಶರಣಾದೊ ॥

ತಾಯಿೊ..........ಶಾರದೆ.......ನಿಂಗೆ ಶರಣಾದೊ ॥
ತಾಯಿೊ..........ಶಾರದೆ.......ನಿಂಗೆ ಶರಣಾದೊ

* * * * *

ಹರ್ಸೆವೆ ಹಾಡ್

ಬಂದೊಳೊ । ನಾವ್ ಬಂದೊಳೊ । ಶ್ರೀ
ವೆಂಕಟರಮಣ ಸ್ವಾಮಿನ । ಹರ್ಸೆವೆಗೆ ॥

ತಂದೊಳೊ । ನಾವ್ ತಂದೊಳೊ ।
ಹಣ್ಣ್‌ಕಾಯಿ । ಹಿಂಗಾರ ಹೂವ್ ತಂದೊಳೊ ॥

ಕೊಟ್ಟ ಹೆಣ್ಣ್‌ಗೆಲ್ಲಾ – ಬಂದ್ । ತೌರುಗೆ ಸೇರ್‍ಯೊಳೊ ।
ಮಿಳ್ಳಿಲಿ ಎಣ್ಣೆ । ಚೊಂಬ್‌ಲಿ ತುಪ್ಪ ತಂದೊಳೊ ॥

ಐನ್‌ಮನೆ ಕಯ್ಯಾಲೆಲಿ । ಗುಂಡ ಕಟ್ಯೊಳೊ ।
ವೆಂಕಟರಮಣ ಸ್ವಾಮಿನ । ಅಲ್ಲಿ ಕೂರ್‌ಸ್ಯೊಳೊ । ಬಂದೊಳೊ ॥

ದರ್ಶನಕೆ ನಾಗಬೆತ್ತ । ವೆಂಕಟರಮಣಂಗೆ ।
ಬೀಸಿಕೆ ಬ್ಯಾಟೆ ಸೊಪ್ಪು । ಕೆಂಚ್‌ರಾಯಂಗೆ ॥

ಅವ್‌ಲಕ್ಕಿ ಕಾಯಿ ಹಾಲ್ । ಫಲಾಹಾರಕೆ
ವಳ್ಳೆಮೆಣ್ಸ್ ಯಾಲಕ್ಕಿ ಬೆಲ್ಲ । ಪಾನಕಕ್ಕೆ ॥

ಭಕ್ತರ್ ಮೊದ್ ಬಂದ್ । ಮುಡ್‌ಪು ಇಳ್ಸ್ಯೊಳೊ
ಚಪ್ಪರಲಿ ಬಾಳೆಗೊನೆ । ತೂಗಿ ಹಾಕ್ಯೊಳೊ ॥

ತೆಂಗ್‌ನಕಾಯಿ ಬಾಳೆಣ್ಣ್ । ಕುಕ್ಕೆಲಿ ತುಂಬ್ಯೊಳೊ ।
ಮಡ್ಕೆಲಿ ಪಾನಕ ನೀರ್ । ಹೊಯ್ದ್ ಮಡ್‌ಗ್ಯೊಳೊ ॥

ಶಂಖ್ ಉರ್‌ಗಿ ಆರತಿ ಬೆಳ್‌ಗಿ । ಪ್ರಸಾದವುಂಡ್
ಮರಿಬ್ಯಾಡಿ ಕುಡಿಯಕೆ ಮಾತ್ರ....ಪಾನಕ ನೀರ್ ॥ ಬಂದೊಳೊ ॥

* * * * *

ಈಶ್ವರಿ ಭದ್ರಕಾಳಿ

ಓ ತಾಯಿ – ಮಾತಾಯಿ – ಈಶ್ವರಿ
ಓ ಕಾಳಿ – ಮಾ ಕಾಳಿ – ಶ್ರೀ ಭದ್ರಕಾಳಿ ॥
ಎಲೆಹಸ್‌ರ್ ಗಿಳಿಹಸ್‌ರ್ । ಮಲೆನಾಡ್ ಸೀಮೆ ।
ಹೊರಮಲೆ ನಾಡ್‌ನ ಭಾಗ್ಯ ಸಿರಿ ದೇವಿಯೆ ॥
ಶಿವನ ತಪಸಿಗೆ । ಬನದೊಳಗೆ ಕುದ್ದಂಗೆ
ಹೊರಮಲೆ ನಾಡ್‌ಲಿ ನೆಲೆನಿತ್ತ ದೇವಿಯೆ ॥
ಓ ತಾಯಿ – ಮಾ ತಾಯಿ – ಈಶ್ವರಿ ।
ಮಹಾಮಾಯೆ ಈಶ್ವರಿ ಶ್ರೀ ಭದ್ರಕಾಳಿ ॥
ವಾರ್ಷಿಕ ಹಬ್ಬಲಿ । ಇರ್‌ಳೆಲ್ಲ ಬೆಳ್ಕ್
ನೂರಾರ್ ದೀಪಗಳ । ಸಾಲೇ ಸಾಲ್ ॥
ಆಗೆಲ್ಲ ನಿಂಗೆ । ದುಡಿಕೊಟ್ಟ್ ಹಾಡ್
ವಿಧ ವಿಧ ನೃತ್ಯಾಟ । ಗುಡಿಸುತ್ತು ಅಂದ್ ॥
ಓ ತಾಯಿ ಮಾ ತಾಯಿ ಈಶ್ವರಿ
ಮಹಾ ಮಾಯೆ ಈಶ್ವರಿ ಶ್ರೀ ಭದ್ರಕಾಳಿ ॥
ವಾರ್ಷಿಕ ಹಬ್ಬದ ನವ ಕಠಿಣ ದಿನನು
ಹೊರಮಲೆ ಊರ್‌ನ ಜನಸೇವೆ ಯಾಗೊಳು ॥
ಬೆಳ್‌ಕ್‌ಲಿ ಬೆಳ್‌ಕಾಟ । ಹೀಲ್ಯಾಟ ಸೇವೆ
ಪುರುಷ ಪ್ರದಾನ ಗುಡಿಸುತ್ತು ಸೇವೆಗೆ ॥
ಓ ತಾಯಿ ಮಾ ತಾಯಿ – ಈಶ್ವರಿ ।
ಮಹಾ ಮಾಯೆ ಈಶ್ವರಿ ಶ್ರೀ ಭದ್ರಕಾಳಿ ॥
ದಿನಪೂಜೆ ನಂಗೆ ಬ್ಯಾಡಾಂತೇಳಿ
ತಪಸಿಗೆ ಕುದ್ದಂಗೆ ಮಾ ತಾಯಿ ಈಶ್ವರಿ ॥
ಸಂಕ್ರಮಣ ದಿನಕೆ । ದರ್ಶನ ಜನಕೆ ।
ಭಯ ಭಕ್ತಿಲಿ ಬಂದವೆ ಭಕ್ತಜನ ಅಂದೆ ॥
ಓ ತಾಯಿ ಮಾತಾಯಿ ಈಶ್ವರಿ ।
ಓ ಕಾಳಿ ಮಾಕಾಳಿ ಶ್ರೀ ಭದ್ರಕಾಳಿ ॥

* * * * *

ಬೇಡೊನ

ಬೇಡೊನ ನಾವೆಲ್ಲ । ಗಣ್‌ಪತಿ ದೇವ್ರುನ
ಬೇಡೊನ ನಾವೆಲ್ಲವು........ ಇಂದ್ ಬೇಡೊನ ನಾವೆಲ್ಲವು ॥
        ಬೆಟ್ಟದ ಕೆಳ್ಗೆ ಕಟ್ಟಿಸಿದ ಗುಡಿಮುಂದೆ
        ಕೈಮುಗ್ದ್ ನಿತ್ತೊಳೊ ನಾವೆಲ್ಲಾ ॥
ಊರೂರ್‌ಂದ ಬಂದ್ ಒಗ್ಗಟ್ಟಿಗೆ ನಾವ್
ಕ್ರಿಕೆಟ್‌ತೇಳುವ ದೀಪನ ಹೊತ್ತೊನ ॥
        ಧೈರಾನೆ ಹೇಳವ್ವ ತಾಯಿ ಚಾಮುಂಡಿ
        ನಿನ್ನ ಸೀರೆ ಸೆರ್‌ಗ್‌ನ ಮರೆಮಾಡಿ ॥
ಪ್ರೀತಿ ಒಗ್ಗಟ್ಟ್ ಸಂಸ್ಕೃತಿ ಬೆಳ್‌ಸಿಕೆ
ಕೈಮುಗ್ದ್ ಬೇಡೊನ ಗಣ್‌ಪತಿನ ॥
        ಕೈಮುಗ್ದ್ ಬೇಡೊನ ನಾವೆಲ್ಲವು ಇಂದ್ ।
        ಕುಲದೇವ್ರು ವೆಂಕಟರಮಣನ ॥।

* * * * *

ಶರಣ್

ಶರಣ್ ಶರಣ್‌ತೇಳ್ಳೊ ಗಣ್‌ಪತಿಗೆ............
ಶರಣ್ ಶರಣ್‌ತೇಳ್ಳೊ ವಿನಾಯಕಂಗೆ ....

ಹಣ್ಣ್‌ಕಾಯಿ ಹೂ ಎಲ್ಲಾ । ನಿನ್ನ ಸೇವೆಗೆ
ಗಂಧ ಧೂಪ ಸಾಂಬ್ರಾಣಿ । ನಿನ್ನ ಪೂಜೆಗೆ ॥

ಶರಣ್‌ತೇಳ್ಳೊ ಏಳ್ ಮಲೆ ಸ್ವಾಮಿಗೆ
ಶರಣ್‌ತೇಳ್ಳೊ ಊರು ಗುಡಿ ಸ್ವಾಮಿಗೆ ॥

ದಂಡ್‌ಂದ ಬಂದವು ದೇಶನ ಕಾಯ್‌ದವ್‌ಕೆ
ದೈರನೆ ಹೇಳಪ್ಪ ವಿನಾಯಕ ನಾವ್‌ಗೆ ।

ಯಾವ ಕಾರ್ಯಕು ಮುಂದೆ ಪೂಜೆ ನಿಂಗೆ ।
ಪ್ರಾತನೆ ಯಾಗೊಳು ನಿಂಗೆ ಮುಂದೆ

ದೇಶ ಸೇವೆಗೆ ಹೊರ್ಡಿಕೆ ಮುಂದೆ
ಬಾಡೆಲಿ ನೆಲ್ಲಕ್ಕಿ ದೀಪ ಮೊಡ್ಗುವೆ ॥

ದೀಪದ ಮುಂದೆ ಪಾದನ ಮುಟ್ಟಿ
ಪಡ್ದವೆ ಆಶೀರ್ವಾದ ಪಡ್ದವೆ ಆಶೀರ್ವಾದ ॥

* * * * *

ಹೂ ಬಂದುಟು

ಹೂವು ಬಂದುಟ್ಟು । ಪೂಜೆಗೆ ಹೂವು ಬಂದುಟ್ಟು
ಹೂವು ಬಂದುಟ್ಟು । ಪೂಜೆಗೆ ಹೂವು ಬಂದುಟ್ಟು ॥

ಅಂಗಳದ ಮಲ್ಲಿಗೆ । ಕೃಷ್ಣನ ಪೂಜೆಗೆ
ಕ್ಯಾದಿಗೆ ಸಂಪಿಗೆ ಸ್ವಾಮಿಯ ಪೂಜೆಗೆ ॥ ಹೂವು॥

ಕುಕ್ಕೆ ಕುಕ್ಕೆ ಹೂವು । ಬಾಗ್ಲ್‌ಲಿ ಬಂದ್
ಸ್ವಾಮಿಯ ಪೂಜೆಗೆ । ಕಾಯ್ತಾವುಟ್ಟು ॥ಹೂವು॥

ಅಂಗಳದ ಹೂವು । ಕದೊಳಿ ಬಾಳೆಫಲ
ಜಂಬು ನೇರ್ಲ । ಸ್ವಾಮಿಯ ಪೂಜೆಗೆ ॥ಹೂವು॥

ಸ್ವಾಮಿ ನಿನ್ನ ಕೃಪೆ ನಾವ್‌ಗೆ ಇರ್ಲಿ
ನಾ ಇಸಿದಾ ಹೂವು ಬಾಡದೆ ಯಿರ್‌ಲಿ ॥

ನಿತ್ಯಾ ನಿಂಗೆ ತುಪ್ಪದ ದೀಪ
ಗೋಪಾಲ ಕೃಷ್ಣ ಕಾಪಾಡ್ ದೇವಾ ॥ಹೂವು॥

* * * * *

ದಯಮಾಡ್

ಸ್ವಾಮಿೂ ಭಗಂಡೇಶ ನಿನ್ನಾ । ಪಾದಕೆ ಬಿದ್ದೊ ನಾವ್ ।
ದಯಮಾಡ್ ದೇವ ನೀನ್ । ದಯಮಾಡ್ ॥

ಶಕ್ತಿ ಕೊಡು ಮಾದೇವಾ । ಬುದ್ದಿಕೊಡು ಶ್ರೀ ದೇವಾ ।
ವಿದ್ಯೆನ ಕಲ್‌ಸ್ಪ ಗಣ್‌ಪತಿ ಮಾ ಸ್ವಾಮಿೂ ॥

ಕಪ್ಪು ಕಪ್ಪು ಕಲ್ಲೂರು । ಬೆಡ್‌ಗ್‌ನ ಬೇಲೂರು
ಕೆತ್ತಿದೊ ಕಲ್ಲೇಶನ ಲಿಂಗ ನೂರು ॥ ಸ್ವಾಮಿೂ ॥

ಮಾದೇವಂಗೆ ಒಡೆಯೊನ ತೆಂಗ್‌ನಕಾಯಿ ।
ಪಾದಕೆ ಬಿದ್ದೊ ನಾವ್ ಮಾ ಸ್ವಾಮಿೂ ॥

ದಯಮಾಡ್ ದೇವಾ ನೀನ್ ದಯಮಾಡ್
ಲೋಕಕ್ಕೆ ಒಡೆಯ । ಭಗಂಡೇಶ ನೀನ್ ॥

ಒಡೆಯೊನ ತೆಂಗ್‌ನಕಾಯಿ ಮಾದೇವಂಗೆ
ದಯಮಾಡ್ ದೇವಾ ಕೃಪೆತೋರ್ಸು ನಾವ್‌ಗೆ ॥

* * * * *

ಶೃಂಗೇರಿ ಶಾರದೆ

ಶೃಂಗೇರಿ ಶಾರದೆ । ಮೂಲದೇವಿ ಶಾರ]ದೆ
ಮನತುಂಬಿ ಹರ್ಸ್ ನೀ । ಓ ತಾಯಿ ಶಾರದೆ ॥
ಶೃಂಗೇರಿತೇಳ್ರೆ ಶೃಂಗಗಳ ಕೇರಿ
ಶೃಂಗತೇಳ್ರೆ ಅದ್ ಬೆಟ್ಟಗಳ ಸಾಲ್ ॥

ತುಂಗಾನದಿ ತೀರಲೊಂದು । ಬಂಡೆಕಲ್ಲ್‌ನ ಮ್ಯಾಲೆ
ಶ್ರೀ ಚಕ್ರ ಬರ್‌ದ್ ಪೀಠಮಾಡಿ ಕೂರ್ಸಿದೊ ॥
ಕೂರ್ಸಿದೊ ನಿನ್ನಾ ಶ್ರೀ ಶಂಕರಾಚಾರ್ಯರ್ ।
ಸುರುಗೆ ಪೂಜಿಸಿದಾ ದೇವಿ ನೀ ಶಾರದೆ ॥

ನಿನ ಕಾವಲಿಗೆತೇಳಿ ನಿನ ನಾಕ್ ದಿಕ್ಕ್‌ಲಿ
ಪೂರ್ವಕೆ ಕೆಂಚ್‌ರಾಯಾ । ಪಶ್ಚಿಮಕೆ ಆಂಜನೇಯಾ
ಉತ್ತರಕೆ ಕೆಂಚಮ್ಮ । ದಕ್ಷಿಣಕೆ ಸಬ್ಬಮ್ಮ
ಸಬ್ಬಮ್ಮ ತಾಯಿ ನೀನೆ ಶಾರದೆ ತಾಯಿ ನೀನೆ ॥ ಶೃಂಗೇರಿ॥

ಕನ್ನೆ ಮುತ್ತೈದೆರ ವಾಲೆ ಭಾಗ್ಯಕೆ ತೇಳಿ
ಹರಿಕೆ ಕಾಣಿಕೆವುಟ್ಟು ಮೊದುವೆಲಿ ನಿಂಗೆ ॥
ಅಂದ್‌ಂದ ಇಂದಿಗೂ ಶೃಂಗೇರಿ ಪೀಠಕೆ
ಸಬ್ಬಮ್ಮ ತಾಯಿನ ಹೆಸ್ರ್‌ಲಿ ಕಾಣಿಕೆ ॥

ಬೆಳಿ ಬಣ್ಣದ ಸೀರೆ ಕೆಂಪಂಚ್‌ನ ಸೀರೆ
ನಿಂಗೊಪ್ಪುವ ಬಣ್ಣ ಬೆಳಿ ಬಣ್ಣ ಶಾರದೆ ॥
ಶೃಂಗೇರಿ ಶಾರದೆ ಮೂಲದೇವಿ ಶಾರದೆ ।
ಮನ ತುಂಬಿ ಹರ್ಸ್ ನೀ ಓ ತಾಯಿ ಶಾರದೆ, ॥

* * * * *

ಶತಮಾನೋತ್ಸವ

ಶಾರದೆ ಶೃಂಗೇರಿ ಶಾರದೆ
ವಿದ್ಯೆತೇಳ್‌ವ ಬೆಳ್ಕ್ ನೀನೆ
ಶಾರದೆ ಶೃಂಗೇರಿ ಶಾರದೆ ॥

ತುಂಗಾತೀರದ ವನರಾಶಿ ನೊಡುಲೆ
ಕುದ್ದೊಳ ನೀನ್ ಶಾರದೆ ॥
ವಿದ್ಯೆತೇಳ್‌ವ ಬೆಳ್ಕ್ ನೀನೆ ॥

ಕೂಡಿ ಚಿಂತನ ಶೀಲರ್
ವಿದ್ಯೆ ತೇಳ್‌ವ ಜ್ಯೋತಿನ ತಂದ್
ನಿನ ಹೆಸ್‌ರ್‌ಲಿ ಬೆಳ್ಸಿದೊ..........॥

ಮಣ್ಣ್‌ನ ಗ್ವಾಡೆ ಹುಲ್ಲ್‌ನ ಸೂರಡಿ
ಶಿಸ್ತ್‌ಲಿ ಪಾಠನ ಕಲ್ತೊ............
ಶಾರದೆ ತೇಳ್‌ವ ಹೆಸ್‌ರ್‌ಲಿ

ನೂರು ವರ್‌ಸದ ಘುಟ್ಟಲಿ
ಜ್ಞಾನನ ತುಂಬಿದೊ ಮಂದಿ
ಸಾಧನೆಗೈದೊ ಶತಪುಟಲಿ ॥

ಸಾಧನೆ ಗೈದೊ ಶತ ಪುಟಲಿ
ಸಾಧನೆ ಗೈದೊ ಬದ್‌ಕ್‌ಲಿ
ಶಾರದೆ ಶೃಂಗೇರಿ ಶಾರದೆ.

* * * * *

ಮಳೇಶ್ವರ

ಇಗ್ಗುತ್ತಪ್ಪ ದೇವನೆ............ಈಶ್ವರನೆ
ಪಾಡಿಲಿ ನೆಲೆನಿತ್ತ ಮಳೇಶ್ವರನೆ ॥

ಪಾಲೂರಪ್ಪ ದೇವನೆ ಮಾಲಿಂಗೇಶ್ವರನೆ ।
ಪಾಲೂರ್‌ಲಿ ನೆಲೆ ನಿತ್ತ ಮಳೆ ದೇವನೆ ॥

ಮಳೆ ದೇವರೆಂಬ ಹೆಸ್‌ರ್ ನೀವ್‌ಗೆ ।
ಮಳೆ ಬರದಿದ್ದರೆ ಫಲ ಎಲ್ಲಿ ನಾವ್‌ಗೆ ? ॥

ಭರಣಿ ಮಳೆ ಬಂದ್ ಭೂಮಿ ತಂಪಾಗಿ
ಗುಡುಗು ಸಿಡ್‌ಲಾಗಿ ಮೃಗಶಿರ ಮಳೆಯಾಗಿ ॥

ತಂಪಾದ ಭೂಮಿಲಿ ಮರಗಿಡ ಹಸ್‌ರಾತ್ ।
ಓ ಇಗ್ಗುತಪ್ಪ ಪಾಲೂರಪ್ಪ ಶರಣ್ ॥

ಕಾರ್ತಿಂಗ ಹಿಡ್‌ದ್ ಆರಿದ್ರ ಮಳೆಬಂದ್ ।
ಭೂಮಿನ ಹೂಡಿ ಗೊಬ್ಬರ ಸೊರ್‌ದ್ ॥

ಬೀಜ ಬಿತ್ತುವೆ ಸಾಲ್ ಹಿಡ್‌ದ್ ರೈತರ್ ।
ಓ ಇಗ್ಗುತ್ತಪ್ಪ ಪಾಲೂರಪ್ಪ ಶರಣ್ ॥

ಆಟಿ ತಿಂಗಳ್‌ಲಿ ಕರಿಮೋಡ ಕವ್‌ದ್ ।
ಪುನಃ ಪುನಃ ಪುನರ್ವಸು ಪುಷ್ಯ ॥

ಜಡಿಮಳೆ ಬಂದರೆ ಓ ಇಗ್ಗುತ್ತಪ್ಪಾ
ನಂಬಿಕಾದುಲೆ ಆಶ್ಲೇಷ ಮಳೆನಾ ॥

ಹೆಂಗಾದು ಈ ಭೂಮಿ ಮಳೆ ಬರದಿದ್ದರೆ
ಭೂಮಿನ ಬಂಜರ್ ಬುಡಿಕಾದುಲೆ ॥

ಓ ಇಗ್ಗುತ್ತಪ್ಪ ಶರಣ್ ಪಾಲೂರಪ್ಪ ।
ಓ ಮಳೆ ದೇವರೆ । ಶರಣ್ ಮಾ ದೇವರೆ ॥

* * * * *

ಪೂಜೆ

ಸತ್ಯನಾರಾಯಣ ನಿಂಗೆ ಬೆಳಿಹೂದೆ
ಇಷ್ಟಂತೇಳಿ ತಂದೊಳೊ ನಿಂಗೆ ॥
ಮಲ್ಲಿಗೆ ಶ್ಯಾವಂತಿಗೆ ಗೊರ್ಂಟೆ ॥

ಬೆಳಿ ಹೂವೆ ಪ್ರೀತಿಹೇಳಿ ಬೊಗಸೆ ತುಂಬಿ ॥
ಸತ್ಯನಾರಾಯಣ ನಿಂಗೆ । ಹೂಗಳೆ ಬೇಕುಂತೇಳಿ
ರಂಗ್‌ರಂಗ್‌ನ ಹೂ ಮಧ್ಯಮಧ್ಯವೆಂತೇಳಿ ॥

ಸ್ವಾಮಿಗೆ ಬೆಳಿ ಹೂ ಪ್ರೀತಿಂತೇಳಿ
ಮೊರತುಂಬಾ ಹೂಗಳ ಕೊಯ್ದ್ ತಂದ್ ॥
ಕಳಸದ ಮುಂದೆ ರಂಗೊಲೆ ಬರ್ದ್ ॥

ಅರ್‌ಶ್‌ಣ ಕುಂಕುಮ ವೀಳ್ಯ ತಟ್ಟೆಲಿ ॥
ಕಳಸದ ಅಲಂಕಾರ ಅನುಕೂಲಕಾಗಿ
ಕರಿಮಣಿ ಬಿಚ್ಚೋಲೆ ಲಕ್ಷೀಪೂಜೆಗಾಗಿ ॥

ದಕ್ಷಿಣೆ ಭೋಜನ ಅರ್ಚಕರ್‌ಗೆ ।
ಇಷ್ಟನ ನೆರವೇರ್ಸ್ ತೇಳ್‌ವ ಭಕ್‌ತರಿಗೆ ।
ಸಾಪಾದಿ ಭಕ್ಷ ಪ್ರಸಾದ ಸರ್ವರಿಗೆ ॥

* * * * *

ಮಕರ ಸಂಕ್ರಾಂತಿ

ಸಂಕ್ರಾಂತಿ ಬಾತ್ ಮಕರ ಸಂಕ್ರಾಂತಿ
ಹಬ್ಬ ಬಾತವ್ವ ಸುಗ್ಗಿ ಸಂಕ್ರಾಂತಿ ॥

ಮೊದ್ ಮಡಿವುಟ್ಟ್ ದೇವ್ರುಗೆ ದೀವಿಗೆ
ಬೆಳ್ಗಲಿ ವರ್ಷದನ್ನದಾ– ತುತ್ತುಗೆ ॥

ಅನ್ನದಾತೆ ಭೂಮಿ । ತಾಯವ್ವ ನಿಂಗೆ
ನಿನಪೂಜೆ ಮಾಡುವೆ ಸಂಕ್ರಾಂತಿಗೆ ॥

ನಿನ್ನ ಅಂಗಳಲಿ । ಬೆಳ್ದಂತ ಪಸ್‌ಲ್‌ನ
ಅರ್ಪುಸೊನ ಆ ರೈತ ಶಿವಂಗೆ ॥

ತರ್ಕಾರಿ ಫಲ ಫಸಲ್ ದೇವ್ರುಗೆ
ಪಾಯ್‌ಸ ನೈವೇದ್ಯ ರೈತಂಗೆ ॥

ಅಂದುಟ್ಟು ಗೋವ್‌ಗಳಿಗೆ ಪೂಜೆ
ಹೂಮಾಲೆ ಕೊಂಬುಗಳ ಪೊರ್ಲುಗೆ ॥

ಬೆಳೆಹುಲ್ಲು ಜಡೆನೆಯ್ದ್ ಗೋವುಗೆ
ಗಂಧ ಅರ್‌ಶಣ ಕುಂಕುಮ ಹಣೆಗೆ ॥

ಸಂಕ್ರಾಂತಿ ಬಾತ್ ಮಕರ ಸಂಕ್ರಾಂತಿ
ಹಬ್ಬ ಬಾತವ್ವ ಸುಗ್ಗಿ ಸಂಕ್ರಾಂತಿ ॥

* * * * *

ಕಿಡಾಸ ಹಬ್ಬ

ಭೂಮಿ ತಾಯಿ ಪೂಜೆ ಪ್ರಕೃತಿ ಮಾತೆ ಪೂಜೆ ।
ಪೊನ್ನಿ ತಿಂಗ ಸಂಕ್ರಮಣಲಿ ಭೂಮಿ ಪೂಜೆ ಮಾಡುವೆ ॥

ಸಮೃದ್ಧಿ ಆಚರ್‌ಣೆ ಪಲಸಿದ್ದಿಗೆ ರೈತರ್ ।
ಪ್ರಕೃತಿ ಮಾತೆ ಭೂತಾಯ್ನ । ಪೂಜೆ ಮಾಡ್ವೆ ರೈತರ್ ॥

ಭೂಮಿ ತಾಯಿ ಪೂಜೆ । ಕಿಡಾಸ ಹಬ್ಬದ ಗುಟ್ಟು ।
ಸಮೃದ್ಧಿ ಫಲಸಿದ್ಧಿ ಹುಟ್ಟು ಸ್ವರೂಪಲುಟ್ಟು ॥

ಸುರುದಿನ ಅಂಗಳಲಿ ಸೆಗ್‌ಣಿ ಸಾರ್ಸುವೆ
ಎರಡ್ನೆದಿನ ಮನೆನೆಲ್ಲಾ ಸಾರ್‌ಸಿ ಮೊಡ್ಡುವೆ

ಮೂರ್ನೆದಿನ ಅಡ್ಗೆ ಮನೆಲಿ ಬಾಳ್‌ಲೆ ಹಾಸುವೆ
ಅಡ್ಗೆಗೆ ತರಕಾರಿ ಫಲ ತಂದ್ ಮೊಡ್ಡುವೆ ॥

ಭತ್ತ ಕಾಳ್ ತಿಂಬಕೆ ಬರ್‌ವ । ಮೃಗ ಪಕ್ಷಿಗಳ್‌ನ
ಓಡ್ಸುವ ನೆಪಲಿ । ಎಲ್ಲ ಸೇರಿ ಬ್ಯಾಟೆ ಮಾಡುವೆ ॥

ಕೋಳಿ ಕೂಂಗಿಕೆ ಮುಂದೆ ಮುತ್ತೈದೆ ಮಿೂದ್‌ಬಂದ್
ಏಳ್ ಸುರ್‌ಳಿ ಸೊಪ್ಪು ತಂದ್ । ಬತ್ತಿ ಬೆಳ್ಗಿದೆ ॥

ಭೂಮಿ ತಾಯಿ ತಂಪಾಗಿರಿಕೆ । ಎಣ್ಣೆ ಹೊಯ್ದುವೆ ।
ತಂಪಾದ ಭೂಮಿಲಿ । ಫಲಕೆ ಬೇಡುವೆ ॥

ಕೃಸಿ ಮಾಡ್ವ ಜನಾಂಗಕೆಲ್ಲ । ಇದೊಂದು ಸುಗ್ಗಿ ಹಬ್ಬ ।
ಮರಗಿಡ ಹಣ್ಣೆಲೆ ಕಳ್‌ಚಿ ಚಿಗ್‌ರ್ ಬುಡುವ ಕಾಲ ॥

ಭತ್ತ ಕಾಳ್ ಮನೆಗೆ ಬಂದ ಕಾಲ । ಇದ್ ವಸಂತ ಕಾಲ ।
ಪೊನ್ನಿತಿಂಗ ಸಂಕ್ರಮಣದ ಹಬ್ಬ ಇದ್ ಕಿಡಾಸ ಹಬ್ಬ ॥

ಭೂಮಿ ತಾಯ್‌ಗೆ ಎಣ್ಣೆಬುಡ್ದು । ರೈತ ಜನ್ರ ಹಬ್ಬ ।
ಇದ್ ಜನಪದ ಸಂಸ್ಕೃತಿ । ನಮ್ಮ ರೈತ ಸಂಸ್ಕೃತಿ॥

* * * * *

ಯುಗಾದಿ

ಬೇಸಾಯದ ಸುರುದಿನ ಯುಗಾದಿಲಿ ।
ಜನಪದ ಸಂಸ್ಕೃತಿ ಮನೆಮನೆಲಿ ॥

ಕೃಷಿ ಸಂಸ್ಕೃತಿಲಿ ಉಳುಮೆ ಅಂದ್
ವರ್ಷಾಧಾರೆ ಉಳುಮೆನ ಪದ್ಧತಿ ಅಂದ್

ಚಾಂದ್ರಮಾನ ಯುಗಾದಿ ಬಯ್ಲ್ ಸೀಮೆಲಿ
ಸೌರಮಾನ ಯುಗಾದಿ ಮಲೆನಾಡ್‌ಲಿ ।

ಮನೆ ಮಂದಿಯೆಲ್ಲ ಬೇವು ಬೆಲ್ಲ ತಿಂದ್
ಪ್ರಕೃತಿ ಪೂಜೆನ ಮಾಡುವೆ ಅಂದ್ ।

ಹೊಸ ಪಂಚಾಂಗ ಓದುವ ದಿನ ।
ಬೇವು ಬೆಲ್ಲ ತಿಂಬ ಕುಸಿನ ದಿನ ॥

ಹೊಸ ಹೊಸ ಬಟ್ಟೆ ಮನೆ ಮಂದಿಗೆ
ಮನೆ ಮನೆ ಸಿಂಗಾರ ಯುಗಾದಿಗೆ ॥

ಹಸ್‌ಕರ್ ಮೀಸಿ ಸಿಂಗಾರ ಮಾಡುವೆ ।
ಗಾಡಿ ಎತ್ತ್‌ಗಳಿಗೆ ಪೂಜೆ ಮಾಡುವೆ ॥

ಮಾವ್‌ನ ಮಿಡಿ ಸ್ವಾಂತೆಮಿಡಿ ಪಜ್ಜಿಮಾಡಿ
ಅಕ್ಕಿಯೊಟ್ಟಿಗೆ ಕಡ್ಲೆಬ್ಯಾಳೆ ಪಾಯ್‌ಸ ಮಾಡಿ

ಹೊಸವರ್ಷ ಹೊಸ ಫಸಲ್ ಹೊಸ ಚಿಗ್‌ರ್
ವಸಂತ ಕಾಲ ಬಂದ್ ಮಾವ್‌ನ ಚಿಗ್‌ರ್ ತಿಂದ್ ॥

ಮರಲಿ ಕುದ್ದ ಕೋಗಿಲೆ ಹಾಡ್ತ್ ರಾಗಲಿ ।
ಜೀವನ ಬೇವು ಬೆಲ್ಲದಂಗಿರೊಕುತೇಳಿ

ಬೇಸಾಯದ ಸುರುದಿನ ಯುಗಾದಿಲಿ
ಜನಪದ ಸಂಸ್ಕೃತಿ ಮನೆಮನೆಲಿ॥

* * * * *

1

ಕೈಲ್‌ಪೊದು

ಆಡಿ ಆಡಿ ಬಂದ್ ಹೋತು ಆಟಿತಿಂಗ
ಬಿಸ್‌ಲ್ ಮಳೆ ಕೂಡಿ ಹೋತು ಆಟಿ ತಿಂಗ ॥
ಆಟಿ ಮಳೆ ಕಳ್ದ್ ನಾಟಿ ಕೆಲ್ಸ ಮುಗ್ದ್
ಆಟಿ ಕಳ್ದ್ ನಾಟಿ ಮುಗ್ದ್ ಸ್ವಾಣ ಬಾತ್ ॥

ಬಿಸ್‌ಲ್ ಮಳೆ ಕೂಡಿ ಬಾತ್ ಸ್ವಾಣ ತಿಂಗ
ಬಂದೇ ಬಾತ್ ರೈತರ ಕೈಲ್‌ಪೊದು ಹಬ್ಬ ॥
ಸ್ವಾಣ ತಿಂಗ ಹಿಡ್ದ್ ಬಿಸ್‌ಲ್‌ಮಳೆ ಕೂಡಿ ಕಂಡ್ ।
ಬಂದೇ ಬಾತ್ ಕೈಲ್‌ಪೊದು ಹಬ್ಬ ಬಾತ್॥

ಐನ್‌ಮನೆಲಿ ಆಯ್‌ದ ಪೂಜೆ
ಕೊಟ್ಟೆಗೆಲಿ ನೇಗಿಲ್ ಪೂಜೆ
ಎಣ್ಣೆ ಮಿಂಯಟ ವಿಶ್ರಾಂತಿ ಎತ್ತ್‌ಗಳಿಗೆ
ಬಾಳೆರಟ್ಟೆ ಕೆಂಡಲಿ ಧೂಪದ ಹೊಗೆ ॥

ನೇಗ್‌ಲ್ ಪೂಜೆಗೆ ಬೇಕಾದು ಗೌರಿ ಹೂವು
ರೈತ ಶಿವಂಗೆ ಅಂದ್ ಕುಸಿ ಆದು
ಎತ್ತ್‌ಗಳಿಗೆ ತೊಳ್ಸಿದ್ದಿಟ್ಟ್ ಜೇನ್‌ತುಪ್ಪ
ಕಾಯಿಹಾಲ್ ಪ್ರಸಾದ ಗೋವುಗಳಿಗೆ ॥

* * * * *

ದಸರ

ಸ್ವರ್ಗ ನೋಡೊಕಾ ನೀವು ಸ್ವರ್ಗ ನೋಡೊಕಾ ? ॥
ಬೇಕು ತೇಳ್ರೆ ಬನ್ನಿ ಪೋಯಿ । ಮಡ್ಕೇರಿ ದಸರಕ್ಕೆ ॥

ಮಡ್ಕೇರಿ ಮಳೆ ಮಂಜ್ ಮೊರಿ । ಇರ್‌ಳ್ ಬೆಳ್‌ಕಾತ್।
ಇರ್‌ಳ್ ಬೆಳ್‌ಕಾತ್ । ದೇವ ಲೋಕ ಸೃಷ್ಟಿಆತ್ ॥

ಚಾಮುಂಡೇಶ್ವರಿ ಕರಗಗಾ । ನಾಕ್ ದಿಕ್ಕ್‌ಗಳ್‌ಂದ ।
ಮುಂದೆ ಚಂಡೆ ನಾದ । ಹಿಂದೆ ದೇವಿ ಕರಗ ॥

ವಾದ್ಯ ಕೊಣ್ತದ ಮಧ್ಯೆ ಯುವಕರ ಗುಂಪು ಅಲ್ಲೆ ।
ನವರಾತ್ರಿ ದಿನದ ದಸರ । ನೋಡಿಕೆ ಪೊರ್ಲು ಅಲ್ಲೆ ॥

ದಾರಿ ದಾರ್ಲಿ ನೋಟಾ । ನಡ್ದ್ ನೋಡುದೆ ಲಾಯ್ಕಾ
ನಡ್ದ್ ನೋಡ್ದೆಲಾಯ್ಕಾ । ಎಲ್ಲೆಲ್ಲೂ ರಾಕ್ಷಸರ..... ಕಾಟ ॥

ಉಗಿವ ಹೊಗೆನಾ ನೋಡ್ರೆ ನೀವು । ಕಾರುವ ಬೆಂಕಿನ ಕಂಡ್ರೆ ॥
ಕೆಂಡದಂತ ಕಣ್ಣ್ ಬುಟ್ಟ್ ಉಕ್ಕುವ ರಕ್ತ ನೋಡ್ರೆ ॥

ವಿದ್ಯುತ್ ಚಾಲನೆ ತೇರ್‌ಲಿ ಚಂಡ ಮುಂಡ ರಾಕ್ಷಸರ್ ।
ರಾಕ್ಷಸರ ಆರ್ಭಟ ನಡುವೆ ಮಡ್ಕೇರಿ ನಗರ ನಡ್‌ಗಿದೆ ॥

ಪಿರಿ ಪಿರಿ ಮಳೆ ಕ್ವಾಟಗಾಳಿ । ವರುಣನ ಹೆದ್‌ರಿಕೆ ನಡುಲೆ ।
ಮಡ್ಕೇರಿ ಮಳೆ ಮಂಜ್ ಮೊರಿ । ಬನ್ನಿ ಪೋಯಿ ದಸರಕ್ಕೆ ॥3॥

ಸ್ವರ್ಗ ನೋಡೊಕಾ ನೀವು ಸ್ವರ್ಗ ನೋಡೊಕಾ
ಬೇಕು ತೇಳ್ರೆ ಬನ್ನಿ ಪೋಯಿ । ಮಡ್ಕೇರಿ ದಸರಕ್ಕೆ ॥

* * * * *

ಬಾತ್ ಹುತ್ತೆರಿ

ಬಾತ್ ಬಾತ್ ಹುತ್ತೆರಿ ಹಬ್ಬ ।
ಕೂಡೊನ ಅಂದ್ ಒಟ್ಟಾಗಿ ಸೇರ್ರೊ ।
ಸೆಗ್‌ಣಿ ಸಾರ್ಸಿ ರಂಗೋಲೆ ಬುಡ್ರೊ ।
ಕುಸಿಲಿ ಕೂಡೊನ ಅಂಗಳಲಿ ॥

ಹುತ್ತೆರಿ ಬಾಕನ ಎಂತದೊ ಕುಸಿ ।
ಅಟ್ಟ ಅಡಿ ಗುಡ್ಸೊಕು ಕರಿ ।
ಹುತ್ತೆರಿ ಗೆಣ್ಸ್ ಎಳ್ಕೊಕು ಪೋಯಿ ।
ಗಮ ಗಮ ಗೈಪು ಮಾಡೊಕು ಬನ್ನಿ ॥

ಎಲ್ಲವರ ಮನೆನು ತಳಪಳ್‌ಸಿ ।
ಮನೆ ಗ್ವಾಡೆಗೆ ಸುಣ್ಣನ ಸಾರ್ಸಿ ॥
ಅಂಗಳ ಕಳಕೆ ಸೆಗ್‌ಣಿ ಸಾರ್ಸಿ
ಕರ್‌ದದೆ ಹುತ್ತೆರಿ ಬನ್ನಿಂತೇಳಿ ॥

ಬಣ್ಣದ ಚೆಂಡ್ ಹೂಮಾಲೆ ಕಟ್ಟಿ ।
ಕಟ್ಟೊಕು ಒಟ್ಟಿಗೆ ಮಾವ್‌ನೆಲೆ ಸೇರ್ಸಿ ॥
ಕಟ್ಟೊಕು ಬಾಗ್ಲ್‌ಗೆ ಹೂಮಾಲೆ ತ್ವಾರಣ
ಮಡ್ಗೊಕು ಬಾಗ್ಲ್‌ಲಿ ನೀರ್‌ಚೊಂಬು ದೀಪ ॥

ಸಣ್ಣವುಕೆ ಬೇಕ್ । ಸುರ್‌ಸುರ್‌ಕಡ್ಡಿ ।
ಮಕ್ಕಳಿಗೆ ಬೇಕ್ ಢಂ ಢಂ ಪಿಟಾಕಿ ॥
ಊರವು ಮನೆವು ಒಂದಾಗಿ ಸೇರಿ ।
ನೆರೆಕಟ್ಟಿ ಕದ್‌ರ್ । ಕೊಯ್ಯೊದು ಕೂಡಿ ॥

ತಲೆಯೆತ್ತಿ ನಿತ್ತುಟ್ಟು ಭತ್ತದ ಪೈರ್ ।
ಪೊಲಿ ಪೊಲಿ ಕೇಳಿಕೆ ನಿತ್ತಂಗುಟ್ಟು ।
ಕದ್ರ್‌ನ ತುಂಬ್ಸಿಕೆ ಗುತ್ತಿನುವುಟ್ಟು ।
ಕದ್ರ್‌ನ ಕೊಯ್ಯಕೆ ಹಲ್ಲ್‌ಕತ್ತಿವುಟ್ಟು ॥

ಪೊಲಿ ಪೊಲಿ ದೇವ ಹೇಳ್ಕಂಡಿದ್ದಂಗೆ
ಚಂಡೆನು ವಾದ್ಯನು ಕೇಳ್ತಾವುಟ್ಟು
ಮಾಲೆ ಪಿಟಾಕಿ ಹೊಟ್ಟ್‌ತ್ತಾವುಟ್ಟು
ಕೋವಿ ಗುಂಡು ಸದ್ದ್ ಕೇಳ್ತಾವುಟ್ಟು ।

ತಂಬಿಟ್ಟ್ ತಿಂದ್ ಹೊಡ್ಡವೆ ಕೋಲು
ಆಡ್ದು ಕೋಲ್‌ಲಿ ಎಷ್ಟೊಂದು ಪೊರ್ಲು
ದುಡಿಕೊಟ್ಟ್ ಪದನ ಕೇಳಿಕೆ ಲಾಯ್ಕ್ ।
ಕುಪ್ಪಸದಟ್ಟಲಿ ಕುಣಿಯೊದು ಲಾಯ್ಕ್ ॥

* * * * *

ಬೆಳ್‌ಕಾಟ

ನಮಸ್ತೇ.....ನಮಸ್ತೇ..... ಭೂಮಿ ತಾಯಿಗೆ ನಮಸ್ತೇ ॥
ಭೂಮಿ ತಾಯಿಗೆ ನಮಸ್ತೇ ।
ಭೂಮಿ ತಾಯಿಗೆ ನಮಸ್ತೇ

ನಮಸ್ತೇ.....ನಮಸ್ತೇ....... ಮಹದೇವಪ್ಪಂಗೆ ನಮಸ್ತೇ ॥
ಮಹದೇವಪ್ಪಂಗೆ ನಮಸ್ತೇ
ಮಹದೇವಪ್ಪಂಗೆ ನಮಸ್ತೇ

ನಮಸ್ತೇ.....ನಮಸ್ತೇ..... ಆದಿಶಕ್ತಿಗೆ ನಮಸ್ತೇ ॥
ಆದಿಶಕ್ತಿಗೆ ನಮಸ್ತೇ
ಆದಿಶಕ್ತಿಗೆ ನಮಸ್ತೇ

ನಮಸ್ತೇ......ನಮಸ್ತೇ..... ಭದ್ರಕಾಳಿಗೆ ನಮಸ್ತೇ ॥
ಭದ್ರಕಾಳಿಗೆ ನಮಸ್ತೇ
ಭದ್ರಕಾಳಿಗೆ ನಮಸ್ತೇ

ನಮಸ್ತೇ.....ನಮಸ್ತೇ.... ಐಯ್ಯಪ್ಪ ಸ್ವಾಮಿಗೆ ನಮಸ್ತೇ ॥
ಐಯ್ಯಪ್ಪ ಸ್ವಾಮಿಗೆ ನಮಸ್ತೇ
ಐಯ್ಯಪ್ಪ ಸ್ವಾಮಿಗೆ ನಮಸ್ತೇ

ತುಮ್ಮಾ ತೇವಿ ದೇವಿ ತೊ
ಹೋ ಹೊ ಹ್ಹೊ ಹ್ಹೊ ॥
ಆಡೊನ ಬನ್ನಿ । ಬೀಸೊನ ಚೌರಿ
ಬೀಸುವ ಚೌರಿನ । ಪೊರ್ಲುನ ನೋಡಿ ॥
ಕೊಡ್ಗ್‌ನ ಮಣ್ಣ್‌ಲಿ ನೂರಾರ್ ಹಬ್ಬಗ
ಊರಿಗೊಂದು ಹಬ್ಬಲಿ ಬೆಳ್‌ಕ್‌ನ ಆಟ

॥ ಹೋ ಹೊ ಹ್ಹೊ ಹ್ಹೋ ॥

ಇಗ್ಗುತಪ್ಪಂಗೆ ತುಲಾಭಾರ ಸೇವೆ
ಮಾದೂರಪ್ಪಂಗೆ ಬೆಳ್‌ಕ್‌ನ ಸೇವೆ ॥
ಪಾಲೂರಪ್ಪಂಗೆ ಕೊಡಿಮರ ನಿಲ್ಸಿ
ಪಾರ್ವತಿ ದೇವಿಗೆ ಚೌರಿನ ಬೀಸಿ

॥ ಹೋ ಹೊ ಹ್ಹೊ ಹ್ಹೋ॥

ಹೊರಮಲೆ ನಾಡ್‌ಲಿ ಭದ್ರಕಾಳಿ ದೇವಿಗೆ
ಕೈತಲೆ ಕೊಡಿಯಾಟ । ಇರ್‌ಳೆಲ್ಲ ಬೆಳ್‌ಕಾಟ
ಬೆಂಗಾಡ್ ಬನಲಿ । ಸಾರ್ತಾವು ದೇವ್ರು
ಹರಿಹರ ಪುತ್ರಂಗೆ । ಸಾರ್ತಾವು ಹೆಸ್‌ರ್ ।
॥ ಹೋ ಹೊ ಹ್ವೊ ಹ್ವೋ ॥

ಮಾಯಗಾರ ವಿಷ್ಣು ಮೋಹಿನಿ ರೂಪಲಿ
ಶಂಭು ಶಿವ ಮಾ ದೇವನ ಮನ್ಸ್‌ಲೆ ನೆನ್ಸಿ
ಕೆಳ್‌ಗೆನ ಭೂಮಿ ಜನ್‌ಮ ಭೂಮಿ
ಸಾರ್ತಾವು ದೇವ್ರು ಬೆಂಗಾಡ್ ಬನಲಿ ॥
॥ ಹೋ ಹೊ ಹ್ವೊ ಹ್ವೋ ॥

ತುಳುನಾಡ್ ತೇಳ್‌ವ ಚೆಂಬೂರ್ ತಿರ್‌ಗಾಡಿ
ಬೆಂಗಾಡ್ ಬನಲೆ ನೆಲೆನಿತ್ತ ಸಾರ್ತಾವು ॥ ಆಡೊನ
ಕೊಂಬಾಟ ಕೊಡಿಯಾಟ । ಬೇಡಾಟ ಬೆಳ್‌ಕಾಟ
ಬೆಂಗಾಡ್ ಬನಲಿ ಸಾರ್ತಾವು ಹಬ್ಬಾ.................
॥ಹೋ ಹೊ ಹ್ವೊ ಹ್ವೋ ॥

ಐಯ್ಯಪ್ಪ ಕಾಡಯ್ಯ ತಮ್ಮಚ್ಚ ಕೂಡಿ
ಬೆಂಗಾಡ್ ಬನಲಿ ಸಾರ್ತಾವು ಜೊತೆಕೂಡಿ.......
ಐಯ್ಯಪ್ಪ ಕಾಡಯ್ಯ ತಮ್ಮಚ್ಚ ಕೂಡಿ
ಬೆಂಗಾಡ್ ಬನಲಿ ಸಾರ್ತಾವು ಹಬ್ಬ ॥
ಹೋ ಹೊ ಹ್ವೊ ಹ್ವೋ ॥

ಹೋ......ಸಾರ್ತಾವು ಹೋ ಹೋ ಹ್ವೋ ॥
ಹೋ......ಭದ್ರಕಾಳಿ ಹೋ ಹೋ ಹ್ವೋ ॥
ಹೋ......ಐಯ್ಯಪ್ಪ ಹೋ ಹೋ ಹ್ವೋ ॥
ಹೋ......ಹೋ.........ಹ್ವೋ..........ಹ್ವೋ........

* * * * *

ಐನ್‌ಮನೆಲಿ ಹುತ್ತರಿ ಮನೆ ಹಾಡ್‌ದು (ಜೋಗಿ ಕೊಣ್ತ)

ಓ..........ತಾಲಿ ತಾಲಿಯೋ.........ಲಲ್ಲೇಲಾ ॥
ನೀ ಎಲ್ಲಿಂದ ಬಂದೆ ಬೈರಪ್ಪ ಜೋಗಿ ? ॥ ತಾಲಿ ॥
ನಾ ಕಿಗ್ಗಟ್ಟ್‌ನಾಡ್‌ಂದ ಬಂದೆನೊ ತಾಯಾವ್ವಾ ॥ ತಾಲಿ ॥
ಯಾಕಾಗಿ ಜೋಗಪ್ಪ ಕೊಡ್ಗಿಗೆ ಬಂದ್ಯೊ ? ॥ತಾಲಿ॥
ಕೊಡ್ಗ್‌ನ ಹುತ್ತರಿ ನೋಡಿಕೆ ಬಂದೆವ್ವ ॥ತಾಲಿ॥
ಹುತ್ತರಿ ಹಬ್ಬಕ್ಕೆ ಯಾಕಾಗಿ ಬಂದ್ಯೊ ? ॥ತಾಲಿ॥
ತಂಬಿಟ್ಟ್ ಬಾಳೆಣ್ಣ್ ತಿಂಬಕೆ ಬಂದೆವ್ವ ॥ತಾಲಿ॥
ಯಾಕಾಗಿ ಜೋಗಪ್ಪ ನಮ್ಮೆನೆಗೆ ಬಂದ್ಯೊ ॥ತಾಲಿ॥
ನಿಮ್ಮನೆ ನೆಲ್ಲಕ್ಕಿ ಬೆಳ್ಕ್‌ನೋಡಿ ಬಂದೆವ್ವ ॥ತಾಲಿ॥
ಜೋಗಿಗೆ ಹೊಡಿಬ್ಯಾಡಿ ಬಯ್‌ಬ್ಯಾಡಿ ಮಕ್ಕಳೆ
ಜೋಗಿನ ಹೊಡ್ದರೆ ಸೊಂಟಾನೆ ಉಳುಕ್ಯೋದು
ಕಣ್ಣ್‌ನ ಬುಟ್ಟರೆ ಬೆಂಕಿನೆ ಕಾಂಬೋದು
ಆ ಬೆಂಕಿ ಬಿದ್ದಲ್ಲಿ ಬೂದೀನೆ ಆಗೋದು ॥ತಾಲಿ॥
ಕೇಳಿ ಕೇಳಿ ಮಕ್ಕಳೆ ಕೇಳಿ ಕೇಳಿ ತಕ್ಕರೆ
ಜೋಗಿ ಪದನ ಹಾಡೊನ – ಜೋಗಿನೊಟ್ಟಿಗೆ ಕೊಣಿಯೊನಾ
ಓ ತಾಲಿ ತಾಲಿಯೋ ಲಲ್ಲೇ....... ಲಾ...... (ಚುರ್‌ಕಾಗಿ...........)
ಓ ತಾಲಿ ತಾಲಿಯೋ ಲಲ್ಲೇಲಾ...........
ನೀ ಎಲ್ಲಿಂದ ಬಂದೆ ಬೈರಪ್ಪ ಜೋಗಿ?
ನಾ ಮಾಯಂದ ಬಂದೆ ಮಾಯದ ಜೋಗಿ
ನೀ ಹೆಂಗೆ ಬಂದ್ಯೊ ಕೊಂಗಣ ಜೋಗಿ?
ಬೆಟ್ಟಂದ ಬೆಟ್ಟಕ್ಕೆ ಹತ್ತಿಕಂಡ್ ಬಂದೆ ?
ನೀ ಹೆಂಗೆ ಬಂದ್ಯೊ ಬೈರಪ್ಪ ಜೋಗಿ ?
ಕಲ್ಲ್‌ಂದ ಕಲ್ಲಿಗೆ ಹಾರ್‌ಕಂಡ್ ಬಂದೆ
ಓ ತಾಲಿ ತಾಲಿಯೋ ಲಲ್ಲೇ..........ಲಾ............
ನಾ ಹೋನೆ ನಾ ಹೋನೆ ತಾಯವ್ವಾ ॥
ಬರೊರ್ಸ ಬನ್ನೆ ತಾಯವ್ವಾ ॥
ತಾಲಿ ತಾಲಿಯೋ ಲಲ್ಲೇ...........ಲಾ॥
ತಾಲಿ.........ತಾಲಿಯೋ.........ಲಲ್ಲೇ.........ಲಾ ॥
ನೆಲ್ಲಕ್ಕಿ ದೀಪ ಬೆಳ್ಗ್‌ತಾ ಇರ್ಲಿ ತಾಯವ್ವ

ಹುತ್ತರಿ ಜೋಗಿ ಕೊಣ್ತ–2

ಗುಂಪು....... ತಂದಾನಿ ತಾನ ತಂದಾನಿ ತಾನ
ತಾನಿ ತಂದಾನ ತಾನನಾ.......ತಾನನ......ತಾನನ
ಮೈಗೆ ದರ್ಗೆಲೆ ಕಟ್ಟಿಕಂಡ್
ಅಂಗರೆ ಕೋಲು ಹಿಡ್ಕಂಡ್ ॥ತಂದಾನಿ॥
ಭೂಮಿ ವಡ್ಕಂಡ್ ಭೂಮಿಗೆ ಬಂದ್ಯೊ
ನೀ ಎಲ್ಲಿಂದ ಬಂದೆ ದರ್ಗ್‌ಲೆ ಜೋಗಿ? ತಂದಾನಿ
ಊರ್‌ಲಿ ನಿನ್ನ ಹೆಸ್‌ರೇನ್ ಜೋಗಿ ?
ನಿನ್ನಯ ಊರ್‌ಲಿ ಕೆಲ್ಸೇನ್ ಜೋಗಿ? ॥ತಂದಾನಿ॥

ಜೋಗಿ : ನನ್ನಯ ಊರ್‌ಲಿ ಹೇಳ್‌ನೆ ಕೇಳಿ
ನೇರ ಬೆಳ್‌ಕ್ ಇಲ್ಲದ ಊರು ॥ತಂದಾನಿ॥
ಕಲ್‌ಮಣ್ಣ್ ಮರ ಹುಲ್ಲಿಲ್ಲದೂರು
ಭೂಮಿಲಿ ಒಬ್ಬಂಗು ಕಾಣದಊರು ॥ತಂದಾನಿ॥
ಆಸೆಯಿದ್ದರೆ ಕಾಲಾಡಿಬನ್ನಿ॥
ಇದ್ದರು ಒಬ್ಬಂಗು ಕಾಣದಊರು ॥ತಂದಾನಿ॥
ಮಾಡಾಯಿ ಮಲೆನಾಡ್ ಓಣದ ಹುತ್ತರಿ
ಹುತ್ತ್‌ರಿ ಕೈಬೀಸಿ ಕರ್ತವ್ವ ತಾಯವ್ವಾ ॥ತಂದಾನಿ॥
ಸಾರ್ತಾವು ದೇವ್ರ್‌ನ ನಾಕಂಡ್ ಬಂದೆ
ಆ ದೇವ್ರು ಇದ್ದಲ್ಲಿ ಅದೊಂದು ಬೆಳ್ಕ್॥

ಗುಂಪು : ನೀ ಹೆಂಗೆ ಬಂದ್ಯೊ ಕೊಡ್ಗಿಗೆ ಜೋಗಿ ?
ನಂಜ್ರಾಯ ಪಟ್ಣದ ನಂಜುಂಡ ಜೋಗಿ
ಅಮ್ಮತ್ತಿ ನಾಡ್‌ನ ಕೊಂಗಣ ಜೋಗಿ?

ಜೋಗಿ : ಕೊಂಬುಂದ ಕೊಂಬಿಗೆ ಹಾರಿಕಂಡ್ ಬಂದೆ
ಅಮ್ಮತ್ತಿ ನಾಡ್‌ಲಿ ನನ್ನಯ ವಾಸ
ನೆರೆಮನೆ ಮುಮ್ಮನೆ ಬೇಡಿಕೆ ಬಂದೆ
ಜೋಗಿಗೆ ಬೇಕಾದು ತಂಬಿಟ್ಟ್ ಮುದ್ದೆ
ಬಾಳೆಣ್ಣ್ ಬೇಕಾದೆ ತಂಬಿಟ್ಟ್ ಮುದ್ದೆಗೆ ತಂದಾನಿ
ತಂಬಿಟ್ಟ್ ಮುದ್ದೆಗೆ ಹಸ್‌ನ ತುಪ್ಪ
ತಂಬಿಟ್ಟ್ ಮುದ್ದೆಗೆ ಜೇನಾಕು ತಾಯವ್ವಾ ॥

ಗುಂಪು : ತಂದಾನಿ ತಾನ ತಂದಾನಿ ತಾನ
ತಾನಿ ತಂದಾನ.......ತಾನನಾ.........

ರಾಟೆ ಮೆಟ್ಟ್‌ದು

ಸುವ್ವಾ ಬಾ – ಕುಟ್ಟೊನ ನಾವು
ಸುವ್ವಾ ಬಾ – ಬೀಸೊನ ನಾವು ॥
ಕುಟ್ಟೊನ ನಾವು ಮೆಟ್ಟೊನ ರಾಟೆನ ॥ ಸುವ್ವಾ ॥
ಹೂಡ್‌ದ ಗದ್ದೆಗೆ ಗೊಬ್ಬರ ಸೊರ್‌ದ್ ।
ಬೀಜನ ಬಿತ್ತಿಕೆ ಕಟ್ಟಿದೊ ನೀರ್ ।
ಪೈರ್‌ನ ನೆಟ್ಟ್ ಕಳೆನ ಕಿತ್ತ್ ॥
ಸುವ್ವಾ ಸುವ್ವ ಸುವ್ವಾ ಬಾ ॥
ಕತ್ತಿಲಿ ಕೊಯ್ದ್ ಬೆಳೆನ ತಂದ್ ।
ಒಕ್ಕುಲಿ ಕಳಕೆ ಹೊರೆನ ತಂದ್ ।
ಭತ್ತನ ತೆಗೆಕೆ । ನೆರೆಕೊಕ್ಕೆಲಿ ಎಳ್ದ್ ।
ಹುಲ್ಲ್‌ನ ಭತ್ತನ ಬ್ಯಾರೆನೆ ಮಾಡ್ದೊ ॥
ಸುವ್ವಾ ಸುವ್ವ ಸುವ್ವಾ ಬಾ ॥
ಕುಟ್ಟೊನ ನಾವು ಮೆಟ್ಟೊನ ರಾಟೆನ॥
ಕುಟ್ಟೊನ ಬೀಸೊನ ಸುವ್ವಾ ಬಾ ॥
ಬೀಸಿದೊ ಜಳ್ಳ್‌ನ / ಹೊಡ್ಕಿದೊ ಮೊರಲಿ
ಹೊಡ್ಕಿದೊ ಒಂಚಿದೊ ವನಲೆಲಿ ॥
ಅಳ್‌ದ್ ಪರೆಲಿ । ಕಡಿಕೆಗೆ ತುಂಬಿ ।
ಅಡ್‌ಕಿದೊ ಕಲ್‌ಮುಳ್ಳು ಕಿಡಾಸಲಿ ॥
ಸುವ್ವಾ ಸುವ್ವ ಸುವ್ವಾ ಬಾ ॥
ಬಾಡೆಲಿ ನೆಲ್ಲಕ್ಕಿ ದೀಪನ ಹೊತ್ಸಿ ॥
ಹಾಕೊನ ಅಕ್ಕಿ ಕಾಳ್‌ನ ಕೊಡ್ಸಿ ॥
ಹೊಸಕ್ಕಿ ಕಡ್‌ಂಬಿಟ್ಟ್ ಮಾಡಿಕೆ ತೇಳಿ ॥
ಬೀಸೊನ ಕಲ್ಲ್‌ಲಿ ಹಿಟ್ಟ್‌ಗೆ ತರಿ ॥
ಸುವ್ವಾ ಸುವ್ವ ಸುವ್ವಾ ಬಾ ॥
ಕುಟ್ಟೊನ ನಾವು ಮೆಟ್ಟೊನ ರಾಟೆನ ॥
ಕುಟ್ಟೊನ ಬೀಸೊನ ಸುವ್ವಾ ಬಾ ॥
ಸುವ್ವಾ ಬಾ ಕುಟ್ಟೊನ ನಾವು ॥
ಸುವ್ವಾ ಬಾ ಬೀಸೊನ ನಾವು ॥
ಮೆಟ್ಟೊನ ರಾಟೆನ ಸುವ್ವಾ ಬಾ
ಬೀಸೊನ ಕಲ್ಲ್‌ಲಿ ಸುವ್ವಾ ಬಾ ॥
ಸುವ್ವಾ ಸುವ್ವ ಸುವ್ವಾ ಬಾ ॥2॥

ನೆಟ್ಟ ಬೆಳೆ ತೆಗ್‌ದವೆ

ಕೊಡ್‌ಗ್‌ನ ಮಲೆ ಕಾಡ್ ಭೂಮಿಲಿ
ನೆಟ್ಟ ಬೆಳೆ ತೆಗ್‌ದವೆ ॥
ಮೂರ್ತಮಡ್ಗಿ ಭತ್ತದ ತೆನೆನ
ಹಾಲ್ ಹೊಯ್ದ್ ಕೊಯ್‌ದವೆ ॥

ಭತ್ತದ ತೆನೆ ಬಾಂಗಿ ಜೂಂಗ್‌ಕನ
ಕೊಡ್ಗ್‌ಲಿ ಹುತ್ತ್‌ರಿ ಸುರಾದೆ
ಇಗ್ಗುತ್ತಪ್ಪನ ಬೆಳ್ಳಿಕೊಡೆ ಅಡಿಲಿ
ಚಿನ್ನದ ಕೋಲು ಹೊಡ್ದ್ ಕೊಣ್‌ದವೆ

ಹುತ್ತ್‌ರಿ ಹಬ್ಬ ಬಾತ್
ಓಣದಮ್ಮನ ಹಬ್ಬಯಿದ್
ಕಲ್ಯಾಡ್ಚನ ಕಾಡ್‌ಯಿದ್
ಹುತ್ತ್‌ರಿ ಹಬ್ಬದ ಹಾಡ್‌ಯಿದ್ ॥

ಜಾರ್ದೆ ತಿಂಗಳ ಹಬ್ಬಯಿದ್
ಕೂಡ್ಯಾಡಿ ಎಲ್ಲವೂ ಗೈದೊಳರಿ
ಧಾನ್ಯ ಲಕ್ಷ್ಮಿನ ಬಾಬಾತೇಳಿ ಹೇಳ್ಕಂಡ್
ನೆಲ್ಲಕ್ಕಿ ಬಾಡೆಲಿ ಇಳ್ಸಿ ಕದ್‌ರ್ ॥

* * * * *

ಪೋಯಿ ದರ್ಶನಕೆ

ಬನ್ನಿ ಪೋಯಿ ದರ್ಶನಕೆ
ಆರ್ಕುಂದು ದಾಟಿ ॥ ಏಳ್ನೆ ಕುಂದುಗೆ
ಹೋಕೆ ನಾವ್ಗೆ ದಾರಿ ತೋರ್ಸವು ಯಾರ್ ? ಶಿವನೆ ದಾರಿ.........

ಕಪ್ಪು ಮಣ್ಣ್‌ನ ಹೊಲಕೆ
ಬಿತ್ತಿ ಹೂಡಿಕೆ ಜನಯಿಲ್ಲೆ
ನೀರ್ ಬಾಮಿ ಸೆಲೆಗಾ
ಬತ್ತಿ ಮಾಯವಾದೊ ಶಿವನೆ ॥ ಬತ್ತಿ ಮಾಯವಾದೊ ॥

ಎತ್ತ್‌ಗೆ ನೇಗ್ಲ್ ಕಟ್ಟಿ
ಬಿತ್ತಿದ ಬೀಜನ ನೆಡಿಕೆ........॥
ಉತ್ತಮರ್‍ಯಾರುಯಿಲ್ಲಿಲ್ಲೆ...........॥
ಹೊತ್ತು ಕಳಿತಾವುಟ್ಟು ಶಿವನೆ ॥ ....ಉತ್ತಮರ್‍ಯಾರೂ........ಯಿಲ್ಲಿಲ್ಲೆ ॥

ಕರ್ಮದ ಬೀಜ ಮೊಳ್ಕೆ ಬಂದ್
ಪಾಪದ ಬುತ್ತಿನ ದಿನಾವುಂಡ್ ।
ಮಾಯದ ಕುದುರೆನ ಬೆನ್ಹ್ಹತ್ತಿ
ಮೋಹದ ಹಕ್ಕಿ ಹಿಂದೆಹೋತು ॥ ಮೋಹದ ಹಕ್ಕಿ ಹಿಂದೆ ಹೋತು

ಏನ್ಂತೇಳಿ ಜಪಿಸಲಿ ನಿನ್ನಾ...........
ಓಂಕಾರ ನಿನ್ನಾ ॥ ಕೆರೆ ಬಾಮಿಗಳ
ಜಲಬತ್ತಿ ಹೋಗಿ ....ದೋಣಿನ ಹತ್ತಿ
ಸ್ವರ್ಗಕ್ಕೆ ಹೋದು ಶಿವನೆ? ನಾವ್ಹೆಂಗೆ ಸ್ವರ್ಗಕ್ಕೆ ಹೋದು?

* * * * *

ಶಂಕರಾ ಚಾರ್ಯರ ನೀತಿವಚನ

ಪವಿತ್ರ ಗಂಗೆಲಿ ಮಿಂದ್ । ವೃತಗಳ ಮಾಡೊಕು
ಸಜ್ಜನರ ಸಾವಾಸ ಮಾಡೊಕು ।
ಮನ್ಸ್ ದೃಢ ಭಕ್ತಿಂದ ಇರೊಕು॥

ವಳ್ಳ ವಿದ್ವಾಂಸರ್‌ನ ಆಶ್ರಯಿಸೊಕು
ಗುರು ಪಾದುಕೆನ ಪೂಜೆಮಾಡೊಕು
ಓಂಕಾರರ್ಥನ ತಿಳ್‌ಕಣಕು॥

ಗುರು ಸಮಾನರೊಟ್ಟಿಗೆ ವಾದಬ್ಯಾಡ ।
ವ್ಯರ್ಥವಾಕ್ಯನ ನಾಲ್‌ಗೆಗೆ ತಾದುಬ್ಯಾಡ ।
ಉದಾಸೀನ ಆಗ್ ಮನ್ಸ್‌ಲಿ॥

ಜ್ಞಾನ ಸಂಪಾದನೆ ಮಾಡ್ ಬುದ್ಧಿಗಾಗಿ
ಸ್ಥಿರ ಬುದ್ಧಿಯಂವ ನಾಗ್ ಮನ್ಸ್‌ಲಿ
ನಿರ್ಮಲಗೊಳ್‌ಸ್ ಸಂಸಾರ॥

ಧೂಪ ದೀಪಗಳ್‌ಂದ ಶ್ರೀಗಂಧ ಜಾಜಿ
ಸಂಪಿಗೆ ಬಿಲ್‌ಪತ್ರೆ ಪುಷ್ಪಗಳಾ
ಹಿಮ ಜಲ ಮಿಂದ್ ಅರ್ಪ್ಸೊನ ಸ್ವಾಮಿಗೆ॥

ನೂರಾರ್ ಗ್ರಂಥಗಳ ರಚಿಸಿದವ್ ಶ್ರೀ...............
ಶಂಕರಾಚಾರ್ಯರ್ । ಅವರ ಸ್ತೋತ್ರಲಿ ಕಂಡದೆ
ವೇದಾಂತದ ಕಿಡಿ । ಕಿಡಿನ ಕಾಣೊನ ಆತ್ಮಲಿ॥

* * * * *

ಕೊಳಲ್

ಕೊಳಲ್‌ನ ದನಿಗೆ ಅಪಾರ ಮೈಮೆ ।
ನಾದನ ಕಂಪ್‌ಸ್ ಕೆಮಿಯೊಳಗೆ ॥
ಹಾಡ್‌ವ ಕೋಗಿಲೆ ಆಗ್ ನೀನ್ ।
ಓಂಕಾರನಾದನ ಹಾಡ್‌ತ ನೀನ್ ॥ ಕೊ॥

ಬಣ್ಣಿಸ್ ನೀನ್ ಸ್ವರಲಿ ನಾದನ ।
ಬಣ್ಣಿಸ್ ನೀನ್ ಸ್ವರಲಿ ಧರ್ಮನ ॥
ಸ್ವರಂದ ತೊಲ್‌ಗಿಸ್ ಪರನಿಂದೆನಾ ।
ಶ್ರೀ ಹರಿನ ಧ್ಯಾನಮಾಡಿ ಬೇಡ್ ನೀ ಮುಕ್ತಿನ ॥ ಕೊ ॥

ಅಂತರಾಳದ ಆತ್ಮದೊಳಗೆ ।
ಹಾಡ್‌ತ ನೀನ್ ಓಂಕಾರನಾದನ ॥
ಕೋಗಿಲೆ ಕೊರಳ್ ಕೊಳಲಾದಂಗೆ ।
ಓಂ ತೇಳಿ ಇಂಪಾಗಿ ದನಿಗೂಡ್ಸ್ ॥

ವಸಂತ ಕಳೆಲಿ ಸಚ್ಚಿದಾನಂದನ ।
ನೊರೆಹಾಲ್ ಮ್ಯಾಲೆ ಕೆನೆ ಬಂದ್ಹಂಗೆ ॥
ಮಜ್ಜಿಗೆ ಒಳಗೆಂದ ಬೆಣ್ಣೆ ಬಂದ್ಹಂಗೆ
ಮೋಡದ ಮರೆಲಿ ರವಿ ಅಣ್‌ಂಗಿದಂಗೆ ॥ ಕೊ ॥

ಮೂಡಣ ರವಿ ಪಡುವಣ ಸೇರ್‌ಕನ ।
ಹಾಡುವ ಕೋಗಿಲೆ ಆಗ್ ನೀನ್ ॥
ಹುಟ್ಟಿದ ಮೊಳ್‌ಕೆ ಫಲ ನೀಡುವಂಗೆ ।
ಸೃಷ್ಟಿಸಿದ ಭಗವಂತ ಕೈ ಬುಡ್‌ದುಲೆ ॥ ಕೊ ॥

* * * * *

ಕೈಲಾಸದ ಶಿವ

ದುರ್ಗಾದೇವಿಯ ಒಡೆಯ ಶಿವನೆ
ಕೈಲಾಸದ ಹಿಮಪೀಠಲಿ
ಧ್ಯಾನಲಿ ಕುದ್ದಾ ಶಿವನೆ, ॥
ಓ ಗಣನಾಥನೆ ಧ್ಯಾನಲಿ ಕುದ್ದಾ ಶಿವನೆ ॥

ಗಂಗೆನ ಶಿರಲಿ ಹೊತ್ತ್
ಕೈಲಾಸಂದ ಪ್ರಯಾಗಕ್ಕೆ
ಭಾಗೀರಥಿ ನಾಮ ಕೊಟ್ಟ್
ಭೂಮಿಗೆ ದೂಡಿಬುಟ್ಟಾ ಶಿವನೇ ॥ ದುರ್ಗಾ॥

ಲೋಕ ಪಾವನೆ ಗಂಗೆ ಆತ್
ಹರಹರ ಶಿವ ತೇಳಿ ಹೆಸ್‌ರಾತ್ ॥
ಬೆಳದಿಂಗಳರಸನ ತಲೆಲಿ ಹೊತ್ತ್
ಸೊಂಟದ ಕೆಳ್ಗೆ ಹುಲಿತೊಗ್‌ಲ್‌ಬಿಗ್ದ್ ॥ದುರ್ಗಾ॥

ನಂದೀಶ್ವರನ ಮುಂದಕೆ ನಿಲ್ಸಿ ।
ನಾಗಾಭರಣನ ಕೊರಳ್‌ಲಿ ಧರ್ಸಿ ॥
ಪ್ರಳಯ ಕಾಲನು ನೀನೆ ।
ಓಂಕಾರ ತಾಂಡವ ನೃತ್ಯಪ್ರಿಯನೆ ॥ದು॥

* * * * *

ಶಿವ

ಶಿವನ ಮುಡಿಯೊಳಗೆ ಗಂಗೆಯಿರುವಂಗೆ
ತಾರೆಗಳ ನೊಡುಲೆ ಧ್ರುವ ತಾರೆಯಿದ್ದಂಗೆ ॥
ನೀಲಿ ಬಾನ್‌ಲಿ ರವಿ ಚಂದ್ರ ಯಿರುವಂಗೆ
ತಾಯಿ ಭಗವತಿ ನೀನೆಲ್ಸ್ ನಮ್ಮೊಳಗೆ ॥ ಶಿವ ॥

ತಂಪಾದ ಬಾನ್‌ಲಿ ತೇವದ ಹನಿನ್ಹಂಗೆ ।
ಭೋರ್ಗರೆವ ಮಳೆಲಿ ಗುಡುಗುವ ದೊನಿನ್ಹಂಗೆ ॥
ವನಹೂಗಳ ಪರಿಮಳದ ಕಂಪುನ್ಹಂಗೆ ।
ಫಲಹೂಗಳ ತಂದ್ । ಗಂಧಲಿ ಪೂಜಿಸಿನೆ ॥

ಮುಂಜಾವು ಕಿರಣ ರಂಗಾಗಿ ಕಾಂಬಕನ
ರವಿ ತಾನೆ ಸಿಂಗರಿಸಿದೆ ಪ್ರಕೃತಿನ........ ॥
ಬಾನ್‌ಂದ ಬೀಳ್‌ವ ಎಲ್ಲಾ ಹನಿಗಳ್ಲಿ ।
ನಾಮನ ಹಾಡ್‌ವ ದೊನಿಯೆಲ್ಲೊ ॥ ಶಿವ ॥

* * * * *

ಕಣ್‌ಗಿಲ್ ಹೂ

ಒಣಭೂಮಿ ರಾಣಿ
ಕಣಗಿಲ್ ತಾಯಿ ।
ಬರ್‌ಡ್ ಭೂಮಿನ ಗೆಳತಿ
ರಂಗ್‌ರಂಗ್‌ನ ಜೊಂಪೆ
ಕಾಂಬೊದು ಬಯಲ್ ಸೀಮೆಲು
ನೆಟ್ರೆ ಮಲೆನಾಡ್ ಅಂಗಳಲು
ನೋಡಿಕೆ ನೀನೆ ರಾಣಿ ।

* * * * *

ದುರ್ಗಿಭವಾನಿ

ಅಖಿಲಾಂಡೇಶ್ವರಿ ದುರ್ಗಿ ಭವಾನಿನ
ಓಂಕಾರ ರೂಪಲಿ ನಾವ್ ಕಂಡೊ ॥

ಸಚ್ಚಿದಾನಂದನ ಸತಿ ಭವಾನಿನ
ಓಂಕಾರರೂಪಲಿ ನಾವ್ ಕಂಡೊ ॥

ಮಸ್ಕ್ ಮಂಜ್‌ನ ನೊಡುಲೆ
ಬಗೆ ಬಗೆ ರಂಗ್‌ಲಿ । ಕಾಂತಿನ ಕಂಡೊ ॥

ಬೆಟ್ಟಗಳ ಸಾಲ್‌ಲಿ ಕಣಿವೆಗಳ ತಗ್ಗ್‌ಲಿ
ಕಂಡೊ ಭವಾನಿನ । ಸಾಗ್‌ವ ಬಾನ್‌ಲಿ ॥

ಅಖಿಲಾಂಡೇಶ್ವರಿ ಅವ್ವ ಭವಾನಿನ
ಹಂಸದ ನಡಿಗೆಲಿ ಕಂಡೊ

ಓಂಕಾರ ರೂಪಲಿ । ದುರ್ಗಿ ಭವಾನಿನ
ನವಿಲ್‌ನ ನಡಿಗೆಲಿ ಕಂಡೊ ॥

* * * * *

ಶ್ರಮ

ಕಾಯಕನೆ ಕೈಲಾಸತೇಳಿ
ಗೈದೆ ನೀನ್ ಅನುದಿನನು...
ನಿನ್ನ ಶ್ರಮ ಎಲ್ಲಿ ಸೋರಿ ಹೋತು...॥

ಸೃಷ್ಟಿಲಿ ಬದ್‌ಕಿದೆ ಮನ್‌ಸನಾಗಿ
ಕಷ್ಟ ಸುಕಲಿ ಭಾಗಿಯಾಗಿ
ನಿಲ್ಲದಾದೆ ಈ ಲೋಕಲಿ.... ॥

ಹೆಜ್ಜೆ ಹಿಂದೆ ನಿಲ್ಸದೆ
ಮುಂದೆ ಸಾಗಿ ಹೋದಾ............
ನಿನ್ನಾತ್ಮ ದಾಟಿ ಎಲ್ಲಿ ಹೋತು ....?॥

ಪುನರ್ಜನ್ಮ ತೇಳ್ದು ಎಲ್ಲುಟ್ಟು
ತಿಳ್‌ದೊ........ ಇನ್ನೆಲ್ಲಿ ನಿನ್ನ ಕಾಯಕ
ನಿಂಗಾಗಿ ಕಣ್ಣೀರ್ ಇಂಗಿತ್ತಲ್ಲೆ............॥

ಹಣಕಾಗಿ ಶ್ರಮಪಟ್ಟ್ ಕಷ್ಟನ
ಮೆಟ್ಟಿ ಬಾಳ್ದೆ ॥ ಸುಕನ ಕಾಂಬಕೆ
ಮುಂದೆ ಸೃಷ್ಟಿಲಿ ಬೆರ್ತ್ ಹೋದಾತ್ಮ ......॥

ಈ ಲೋಕದ ಋಣಕೆ
ಕೈ ಮುಗ್‌ದ್ ನೀ ಸಾಗಿದ...........
ನಿನ್ನ ಶ್ರಮ ಎಲ್ಲಿ ಸೋರಿಹೋ..ತು ॥

ಅಂಗಳದ ತೊಳ್‌ಸಿಯಾಗಿ
ನೆಲ್ಲಕ್ಕಿ ದೀಪದ ಬೆಳ್‌ಕಾಗಿ
ಗುರುಕಾರ್ಣರಕೂಡಿ ಹರ್‌ಸ್ ನಂಬಿದವರ್‌ನ ....॥

* * * * *

ಅಂತರಂಗಲಿ

ನಂಗ್ಯಾರೂಯಿಲ್ಲೆತ ಹೇಳ್ಬ್ಯಾಡಿ ನೀವ್
ನಿಮ್ಮಂತರಂಗಲಿ ಭಗವಂತನಿರ್ಕನಾ ॥
        ಗುರುಭೋದನೆ ರಸದ ಪಾಯ್ಸನ ಕುಡ್ಡ್
        ಮನ್ಸ್ಲಿ ತುಂಬಿದ ಪಾಪಗಳ ತೊಳ್ದ್ ॥ ನಂಗ್ಯಾರು ॥
ಕಣ್ಣ್ನ ಮುಚ್ಚಿ ರೆಪ್ಪೆಗಳ ತೆರ್ದ್
ಅನುದಿನ ನೆನ್ಸ್ ನೀನ್ ಮುಕ್ತಿನ ॥
        ಒಮ್ಮೆ ಕೂರ್ಮನಾಗಿ । ಮತ್ತೊಮ್ಮೆ ವರಾಹನಾಗಿ
        ರಾಮನಾಗಿ ಕೃಷ್ಣನಾಗಿ । ನರಸಿಂಹನಾಗಿ
ಪರಶುರಾಮನಾಗಿ ಈ ಲೋಕದ ಸತ್ಯನಾಗಿ
ಎಲ್ಲೆಲ್ಲು ನೆಲ್ಸಿದಂವ ನೀನೆ ಶ್ರೀ ಹರಿ ॥ ನಂಗ್ಯಾರು ॥

* * * * *

ಗೌರಿ

ಮಹಾ ಮಾಯೆ ಅವತಾರ ಆದಿಶಕ್ತಿಗೆ
ಗೌರಿ ಪೂಜೆ ಪಾರ್ವತಿ ತಾಯಿಗೆ ॥
        ಶಿವನ ಶಕ್ತಿ ಗಣೇಶನ ಮಾತೆಯಾಗಿ ।
        ಧೈರ್ಯ ಶಕ್ತಿನ ಪ್ರತೀಕವೆ ಗೌರಿ ॥
ಮೊರಲಿ ನವಧಾನ್ಯ ಮಂಗಳದ್ರವ್ಯ ।
ಅರ್ಶಣ ಕುಂಕುಮ ಇವ್ಳಿಗೆ ॥
        ಗೌರಿ ಬಾಗಿನ ಸುಮಂಗಲಿಯವ್ಕೆ
        ಚತುರ್ಥಿಗೆ ಮುಂದೆ ಗೌರಿಪೂಜೆ॥
ವರ್ಸ ವರ್ಸ ಕರಿಮಣಿ ಬಿಚ್ಚೊಲೆ
ಮುತ್ತೈದೆರ ಬಾಗಿನ ಪೂಜೆ ಶ್ರೀ ಗೌರಿಗೆ ॥

* * * * *

ಸುಕ ಎಲ್ಲುಟ್ಟು

ಗ್ಯಾನ ಮಾಡ್ ಒಮ್ಮೆ
ಸುಕ ಎಲ್ಲುಟ್ಟು ? ॥ ನಾವ್‌ಗೆ ॥

ನಿತ್ಯ ನಿನ ಸೇವೆಲಿ
ಹರಿ ನಿನ್ನ ಧ್ಯಾನಲಿ ॥ ಗ್ಯಾನ ॥

ಬದ್‌ಕುವ ಮನ್‌ಸಂಗೆ
ಮನ್ಸ್‌ಲಿ ಧ್ಯಾನವೊಂದೆ ॥

ಕೈಲಿ ಸದಾ ಸೇವೆ
ಬಾಯಿಲಿ ನಾಮಸ್ಮರಣೆ ॥

ಸದಾ ಸುಕ ಅಲ್ಲುಟ್ಟು
ಗೊತ್ತಿರ್‌ಲಿ ಇದ್ ನಿಂಗೆ ॥

ನೂರೊಂದು ಸಲ ಜಪಿಸ್‌ನಾಮನ
ಸುಕ ಅದೇ ಸದಾ ನಿಂಗೆ ॥

ಸದಾ ಸುಕ ಅಲ್ಲುಟ್ಟು
ಹರಿಧ್ಯಾನಲೆ ಸುಕವುಟ್ಟು ॥ಗ್ಯಾನ ॥

* * * * *

ಸೇವೆ

ಅನುದಿನ ನೆನ್‌ದನೆ ನಾನಿನ್ನ ।
ದಿನನಿತ್ಯ ಬೇಡಿನೆ ಮುಕ್ತಿನ ।

ನಿನ್ನ ಭಕ್ತಿಲಿ ಯಾಗೊಳು ಮೊದನೆ
ಮುಕ್ತಿನ ಕಾಂಬಕೆ ಬೇಡಿನೆ ॥

ರಾತ್ರೆ ಹಗ್‌ಲ್‌ನ ಕಾಲದ ಅರಿವಿಲ್ಲೆ ।
ಕಾಲ ಪ್ರೀತಿ । ಭಕ್ತಿಗೆ ಬೇಕಿಲ್ಲೆ ॥

ಎಲ್ಲವ್‌ಕು ಬೇಕು ಭಕ್ತಿಯ ಜ್ಞಾನ
ಒಂದೇ ಮನ್ಸ್‌ಲಿ ಶಿವಧ್ಯಾನ ॥

ಅಮ್ಮ ತೇಳ್‌ವ ಕೂಸುನ ಹಂಗೆ ।
ನಿದ್ದೆಯಿಲ್ಲದ ರಾತ್ರೆ ಸೇವೆ ಹಿಂಗೆ ॥

ನಾನ್ ನೀನ್ ತೇಳ್‌ವ ನುಡಿಗೆ
ಬ್ಯಾಡನಂಗೆ ಹಿತವಲ್ಲದ ಸೇವೆ ॥

* * * * *

ಕೋಲ್ ಕೋಣಿಯೊನ
(ಬಿಂದಿಗೆ ನೃತ್ಯ)

ಕೋಲ್ ಕೋಲ್ ಕೋಲ್ ಕೋಣಿಯೊನ
ಬಣ್ಣಕ್ಕೆ ಮೇಲಾದ ಚಿನ್ನದ ಕೋಲ್ ॥
ಕೋಲ್ ಕೋಲ್ ಕೋಲ್ ಕೋಣಿಯೊನ ॥

ಹಿಡಿತುಂಬ ತುಂಬೆ ಹೂವು ಶಿವನಿಂಗೆ ।
ಮುಡಿತುಂಬ ಮಲ್ಲಿಗೆ ಪಾರ್ವತಿಗೆ ॥
ಕೋಲ್ ಕೋಲ್ ಕೋಲ್ ಕೋಣಿಯೊನ ॥

ಊರು ಮುಂದೆನ ಮಾವ್‌ನ ಮರದಾ
ಗೆಲ್ಲ್ ಮ್ಯಾಲೆ ಮಲ್ಲಿಗೆ ಹೂವು ॥
ಕೋಲ್ ಕೋಲ್ ಕೋಲ್ ಕೋಣಿಯೊನಾ ॥

ಉದ್‌ರ್ ಉದ್‌ರ್ ಮಲ್ಲಿಗೆ । ಚದ್‌ರ್ ನೀನ್ ಊರಿಗೆ
ಅಂಗಳದ ಮಲ್ಲಿಗೆ । ದೇವರ ಗುಡಿಗೆ ॥
ಕೋಲು ಮಲ್ಲಿಗೆ ಕೋಲು ಮಲ್ಲಿಗೆ ॥

ಬೆಟ್ಟದ ಮ್ಯಾಲೆನ ಶಿವಂಗೆ । ಬಂಡೆಲಿರುವ ಲಿಂಗಂಗೆ ।
ಮಾಲೆಯಾಗಿ ಸೇರ್ ನೀನ್ । ಶಿವನ ಪಾದಕೆ ॥
ಸೇರ್ ಮಲ್ಲಿಗೆ ಸೇರ್ ಮಲ್ಲಿಗೆ ಶಿವನ ಪಾದಕೆ ॥

ಹಬ್ಬದೊಳಗೆನ ಮಲ್ಲಿಗೆ । ಹಬ್ಬಿಬಂದ್ ಊರಿಗೆ
ಹಾರ ಆಗಿ ಹೋಗು ನೀನ್ ಜಾತ್ರೆಗೆ ॥
ಸೇರ್ ಮಲ್ಲಿಗೆ ಸೇರ್ ಮಲ್ಲಿಗೆ ॥ ಶಿವನ ಕೊರ್‌ಳ್‌ಗೆ ॥

ಕೋಲ್ ಕೋಲ್ ಕೋಲ್ ಕೋಣಿಯೊನ
ಬಣ್ಣಕ್ಕೆ ಮೇಲಾದ ಚಿನ್ನದ ಕೋಲ್
ಕೋಲ್ ಕೋಲ್ ಕೋಲ್ ಕೋಣಿಯೊನ ॥

* * * * *

ಗೌಡ ಜಾನಪದ ಸಾಂಪ್ರದಾಯಕ ಕೋಲಾಟ

(ಹೊಸ ಭತ್ತ ಕುಟ್ಟುದು)

ಕೋಲು ಕೋಲೆ ಸುಗ್ಗಿಯ ಕೋಲೆ ॥
ಮೂಡಣ ಬಯ್ಲ್‌ಂದ ಮುತ್ತೈದೆರ ಬಾಕೆ ಹೇಳಿ ॥
ಮುತ್ತುನ ವಣ್ಕೆ ತಾಕೆ ಹೇಳಿ ॥

ಮೂಡಣ ಬಯ್ಲ್‌ಂದ ಮುತ್ತೈದೆಗಾ ಬಂದ್
ಮುತ್ತು ನ ವಣ್ಕೆ ತಂದ್ ॥
ಎತ್ತಿ ಬುಟ್ಟೊ ಅವು ಬಾನೆತ್ತರ ।
ಮಲ್ಲಿಗೆ ಹೂನಂಗೆ ತೊಳ್‌ಸುವೆ ॥4॥

ಪಡುವಣ ಬಯ್ಲ್‌ಂದ ಮುತ್ತೈದೆಗಾ ಬಂದ್
ನಂದಿ ಮರ ವಣ್ಕೆ ತಂದ್ ॥
ಎತ್ತಿ ಬುಟ್ಟೊ ಅವು ಬಾನೆತ್ತರ
ತುಂಬೆಗಿಡ ಹೂನಂಗೆ ತೊಳ್‌ಸುವೆ ॥4॥

ತೆಂಕಾದ ಬಯ್ಲ್‌ಂದ ಮುತ್ತೈದೆಗಾ ಬಂದ್
ತೇಗದ ಮರ ವಣ್ಕೆ ತಂದ್ ॥
ಎತ್ತಿ ಬುಟ್ಟೊ ಅವು ಬಾನೆತ್ತರ
ಸೊರೆಬಳ್ಳಿ ಹೂನಂಗೆ ತೊಳ್‌ಸುವೆ ॥4॥

ಬಡಗ–ದ ಬಯ್ಲ್‌ಂದ ಮುತ್ತೈದೆಗಾ ಬಂದ್
ಬೀಟಿಮರ ವಣ್ಕೆ ತಂದ್ ॥
ಎತ್ತಿ ಬುಟ್ಟೊ ಅವು ಬಾನೆತ್ತರ
ತಾಳೆಮರ ಹೂನಂಗೆ ತೊಳ್‌ಸುವೆ ॥4॥

ಮಡ್ಗಿದ್ದ ವಣ್ಕೆಗೆ ಪಾವುಧೂಪನ ಹಾಕಿ
ಗಂಧ ಸಿರಿಗಂಧ ಹದಗೂಡಿ ॥ ಮುತ್ತೈದೆಗಾ
ಎತ್ತಿ ಬುಟ್ಟೊ ಅವು ಬಾನೆತ್ತರ ॥
ಮಲ್ಲಿಗೆ ಹೂನಂಗೆ ತೊಳ್‌ಸುವೆ ಅವ್ ॥4॥

ಕಲ್ಲ್‌ನ ಒರ್‌ಳ್‌ಲಿ ನೆಲ್ಲಕ್ಕಿ ತೊಳ್‌ಸವ್ವಾ
ಮಲ್ಲಯ್ಯನ ಹೆಣ್ಣ್ ಗಿರಿಜವ್ವಾ ॥ ತೊಳ್‌ಸಿದ ಅಕ್ಕಿ
ಮಲ್ಲಿಗೆ ಹೂನಂಗೆ ತೊಳ್‌ಸುವೆ ಅವ್ ॥4॥
ಮಲ್ಲಿಗೆ ಹೂನಂಗೆ ತೊಳ್‌ಸುವೆ ಅವ್ ॥4॥

ಕುಟ್ಟಿ ಸೋಸಿದ ಅಕ್ಕಿ ಹಸನಾಗಿ ಮುತ್ತೈದೆಗ
ಮಾ ಶಿವ ಶಂಕರನ ಮದುವೇಗೆ ॥ ತೊಳಸಿದ ಅಕ್ಕಿ
ಮಲ್ಲಿಗೆ ಹೂನಂಗೆ ತೊಳ್‌ಸಿದೊ ಅವ್ ॥4॥

ಭತ್ತ–ನ ಕುಟ್ಟಿಕಂಡ್ ಅಕ್ಕಿನ ಮಾಡ್‌ಕಂಡ್
ಯಾರ್‌ನ ನಾವು ನೆನೆಯೋಕು ?

ಭತ್ತಾನ ಕುಟ್ಟಿಕಂಡ್ ಅಕ್ಕಿನ ಮಾಡ್‌ಕಂಡ್
ಇಗ್ಗುತಪ್ಪಾ ಕಾವೇರಮ್ಮನಾ....................॥
ಇಗ್ಗುತಪ್ಪಾ ಕಾವೇರಮ್ಮ ನಾ ನೆನ್‌ದಾರೆ
ನಾವು ಹಿಡ್‌ದಾ ಕೆಲ್‌ಸ ಜಯವಾದೊ ॥ ....

* * * * *

ಕೋಲು ಶ್ರೀಹರಿನ ಕೋಲು

ಕೋಲು ಮುತ್ತುನಕೋಲು । ಕೋಲು ಶ್ರೀಹರಿನಕೋಲು ॥

ಅಂದದ ಆಲದಮರ । ಬಿಂಕದ ಗೋಳಿಮರ।
ಬೇವುನ ಮರದಡಿಲಿ । ನೆಲ್‌ಸಿದ ಕೆಂಚಮ್ಮ।
ದೊಡ್ಡಂಚ್‌ನ ಸೀರೆವುಟ್ಟ್। ದುಡ್ಡುನಗಲ ಬೊಟ್ಟುನ।
ದೊಡ್ಡಮ್ಮನ ಪಾದಕ್ಕೆ ಶರಣ್ ಹೇಳೊನ ॥

ಕೋಲು ಮುತ್ತುನಕೋಲು । ಕೋಲು ಶ್ರೀಹರಿನಕೋಲು ॥

ಅರ್‌ಶಣ ಕಂಬಿಸೀರೆ । ಕಣ್‌ಗಿಲ್ ಹೂ ಸೀರೆ।
ಹೊಲಂದ ಬಾಕನ । ಗಮುಗಮ ಕ್ಯಾದಿಗೆ ॥
ಬಾದಾಮಿ ಕಂಬಿಸೀರೆ। ಮುತ್ತುನ ವಾಲೆ ಹಾಕಿ।
ಬಿತ್ತಿದ ಹೊಲದ ಮ್ಯಾಲೆ ದಯತೋರ್‍ಸು ತಾಯಿ॥

ಕೋಲು ಮುತ್ತುನಕೋಲು । ಕೋಲು ಶ್ರೀಹರಿನಕೋಲು ॥

ಬಸುವಂಗೆ ಸರ್‌ಪಣಿ ಹಾಕಿ ಬಿಸ್‌ಲ್‌ಗೆ ಬಾಕನ ।
ನೀರೆಲ್ಲಿ ಕುಡ್ತ್? ಮುತ್ತುಸಾಗರದ ಹೊಳೆದಾಟ್‌ಕನ॥
ಎಡಕೈಲಿ ಹಣ್ಣ್‌ಕಾಯಿ ಗಡಿಗೆಲಿ ಜೇನ್ ತುಪ್ಪ।
ಅಪ್ಪ ಬಸುವನ ಶಿವಪೂಜೆ ಸಂಭ್ರಮ ॥

ಕೋಲು ಮುತ್ತುನಕೋಲು। ಕೋಲು ಶ್ರೀಹರಿನಕೋಲು ॥

ಸಾಗರದ ಹೊಳೆಲಿ ಬಸುವಂಗೆ ಕುಡ್‌ಸಿದೆ ನೀರ್।
ಗಮ ತುಂಬಿ ಬಾಕನ। ಕ್ಯಾದಿಗೆ ಹೂ ಎಸ್‌ಳ್।
ಧೂಪದ ಹೊಗೆ ತುಂಬಿ ಆಕಾಶಲಿ ನಕ್ಷತ್ರ ।
ಅವ್ವ ಕೆಂಚಮ್ಮಂಗೆ ಪೂಜೆನ ಸಂಭ್ರಮ ॥

ಕೋಲು ಮುತ್ತುನಕೋಲು । ಕೋಲು ಶ್ರೀಹರಿನಕೋಲು ॥

* * * * *

ಕೋಲು ಕೋಲಯ್ಯ

ಕೋಲು ಕೋಲಯ್ಯ ಕೋಲು । ಕೋಲಯ್ಯಾ ॥
ಕೋಲು ಕೋಲಯ್ಯ ಕೋಲು । ಕೋಲಯ್ಯಾ ॥

ಕೋಲು ಕೋಲಯ್ಯ ಕೋಲು । ಕೋಲಯ್ಯಾ ॥
ಲಾಯ್ಕಾಗಿ ನೋಡಿಕ ನಮ್ಮನ ಗಣಪಯ್ಯಾ॥

ನಿನ್ನ ಕರುಣೆನು ಕೃಪೆನು । ನಮ್ಮ ಮ್ಯಾಲೆ ॥
ಕಳಸಕೆ ಹಣ್ಣಡಿಕೆ ವಿಳ್ಯದೆಲೆ ॥ ಕೋಲು ॥

ತ್ವಾಟದ ಬಾಳೆಗೊನೆ। ನಿಂಗೆ ಒಪ್ಸವೆ ॥
ಬೆಳಿಕಬ್ಬು ಅವ್ಲಕ್ಕಿ ಪ್ರಸಾದಕ್ಕೆ ॥

ಬಾಕನ ತಂದವೆ ಜೋಡಿಕಾಯಿ ಬೆಲ್ಲ ॥
ಒಡ್ದವೆ ನಿಂಗೆ ಹಣ್ಣ್ಕಾಯಿ ಎಲ್ಲ ॥ ಕೋಲು ॥

ಗಂಧಧೂಪ ಸಾಂಬ್ರಾಣಿ ಗಮಗಮ ॥
ಅರ್ಶಣ ಕುಂಕುಮ ಹಣೆತುಂಬ ॥

ಹಸ್ರ್‌ನ ಪಂಚೆನ ನಿಂಗೆ ಉಡ್ಸುವೆ ॥
ಬೆಳ್ಳಂಗೆ ಜನಿವಾರ ನಿಂಗೆ ಸುತ್ತುವೆ ॥ ಕೋಲು ॥

ಸುರುಗೆ ನಿನ್ನ ಗ್ಯಾನ ಶುಭ ಕಾರ್ಯಕ್ಕೆ ॥
ಯಾಗೊಳು ಬೇಕು ಮುಂದೆ ಗುಡಿ ಪೂಜೆಗೆ ॥

ಪಾರ್ವತಿ ಪುತ್ರ ವಿನಾಯಕ – ಗಣ್‌ಪಯ್ಯಾ ॥
ಹೆಂಗಾದಿಯಾ ನೀನ್ । ಶಿವನ ಕುಮಾರನಯ್ಯಾ ? ॥ ಕೋಲು ॥

* * * * *

ಹೊಸಕ್ಕಿ

ಸುವ್ವ ಬಾ ಕುಟ್ಟೊನ ನಾವು ॥
ಸುವ್ವ ಬಾ ಭತ್ತನ ನಾವು ॥

ಹೂಡ್‌ದ ಗದ್ದೆಗೆ ಗೊಬ್ಬರ ಸೊರ್ದ್
ಬೀಜನ ಬಿತ್ತಿಕೆ ಕಟ್ಟಿದೊ ನೀರ್
ಪೈರ್‌ನ ನೆಟ್ಟ್ ಕಳೆನ ಕಿತ್ತ್ ॥ ಸುವ್ವಾ ಸುವ್ವ ॥

ದೇವರ ಗದ್ದೆಲಿ ಬೆಳ್‌ದಂತ ಭತ್ತನ
ಕತ್ತಿಲಿ ಬೆಳೆನ ಕೊಯ್ದ್ ತಂದ್ ॥
ಒಕ್ಕುಲು ಕಳಕೆ ಹೊರೆಕಟ್ಟಿ ತಂದ್ ॥ ಸುವ್ವಾ ಸುವ್ವ ॥

ಭತ್ತನ ತೆಗೆಕೆ ಕೊಕ್ಕೆಲಿ ಬಡ್ದ್
ಹುಲ್ಲ್‌ನ ಭತ್ತನ ಬ್ಯಾರೆ ಮಾಡ್ಕಂಡ್
ಬೀಸಿದೊ ಭತ್ತನ ಕೇರ್‌ದೊ ಮೊರಲಿ ॥ ಸುವ್ವಾ ಸುವ್ವ॥

ದೇವರ ಗದ್ದೆಲಿ ಬೆಳ್‌ದಂತ ಭತ್ತನ
ಪರೆಲಿ ಅಳ್ದ್ । ಕಡ್‌ಕೆಗೆ ತುಂಬಿದೊ ॥
ದೇವ್ರಿಗೆ ನೈವೇದ್ಯ ಮಾಡಿಕೆ ತೇಳಿ ॥ ಸುವ್ವಾ ಸುವ್ವ ॥

ನೆಲ್ಲಕ್ಕಿ ದೀಪಕೆ ಎಣ್ಣೆನ ಹೊಯ್ದ್
ಮುತ್ತೈದೆಗ ಕೂಡಿ ದೀಪನ ಬೆಳ್‌ಗಿ
ಕಾರಣರ ನೆನ್ದ್ ಕಾಳ್ ಅಕ್ಕಿ ಹಾಕಿ ॥ ಸುವ್ವಾ ಸುವ್ವ ॥

ಕುಟ್ಟಿಕೆ ವನಕೆ । ವನಲೆ ಮೊರ
ಗುಡ್ಸಿಕೆ ಮಾಯ್‌ಪು ಕೈಲಿ ಹಿಡ್ಕಂಡ್
ಕುಕ್ಕೆಲಿ ಎತ್ತಿ ತಲೆಲಿ ಹೊತ್ಕಂಡ್ ॥ಸುವ್ವಾ ಸುವ್ವ ॥

ಹೊಸಕ್ಕಿ ಪಾಯ್‌ಸ ಮಾಡಿಕೆತೇಳಿ
ದೇವ್ರಿಗೆ ನೈವೇದ್ಯ ಮಾಡೊಕುತೇಳಿ
ಕುಟ್ಟೊನ ಹೊಸ ಭತ್ತನ ನಾವು ॥ ಸುವ್ವಾ ಸುವ್ವ ॥

2

ಕಾವೇರಿ

ಕಾವೇರಿ ನದಿ ನೀರ್
ದಂಡೆನ ತಂಪ್ ನೀರ್
ನಡ್ದ್ ಸಾಗುದೇ ಪೊರ್ಲ್
ಕರಿಮಣ್ಣ್‌ನ ಕಬ್ಬ್‌ನ ಸಾಲ್
ಬಾಂಗಿದ ಭತ್ತದ ತೆನೆಸಾಲ್
ಎಂದಿಗೂ ಬತ್ತದ ನೀರ್
ಕಾವೇರಿ ನದಿ ನೀರ್
ಇದೇಮಂಡ್ಯ ಜಿಲ್ಲೆಲಿ ಪನ್ನೀರ್ ॥

* * * * *

ತೆಂಗ್‌ನಕಾಯಿ

ಉದ್ದ ಸಾಲ್‌ಮರದ ತೆಂಗ್
ಬೇಕು ನೀನ್ ಪೂಜೆಗೆ
ಒಡ್‌ದರೆ ಸಾಕ್ ಆಂಬರಕೆ ।
ಗಟ್ಟಿ ಅಂಚ್‌ನ ಸಿಪ್ಪೆ ಚಿಪ್ಪಿ ।
ಬೇಕ್‌ಅದ್ ಒಲೆಗೆ
ಬೆಳಿ ಕಾಯಿ ಹಾಲ್ ಪಾಯ್‌ಸಕ್ಕೆ
ಬೇಕ್ ನೀನ್ ಗಂಗೆ ಪೂಜೆಗೆ ॥
ಉದ್ದ ಸಾಲ್ ಮರದ ತೆಂಗ್
ದಿನಾ ನೀನ್ ಕಣ್ಣೆದ್‌ರೆ ಇರೊಕು ।

* * * * *

ಆದಿ ಚುಂಚನಗಿರಿ

ಆದಿ ಚುಂಚನಗಿರಿ ಹೊಕ್ಕಿ ನೋಡೊನ ಬನ್ನಿ ॥
ಕಲ್ಲ್‌ನ ಕ್ವಾಟೆ ಹುಲಿಮೊಕ ॥ ಚುಂಚನಗಿರಿ ॥
ಅಪ್ಪ ಭೈರ್‌ವನ ಒಡೆತನ ಗಿರಿಯೆಲ್ಲಾ ॥

ಬೆಳ್ಳೂರು ಬಯ್ಲ್‌ಲಿ । ಜೀರಳ್ಳಿ ಕೆರೆಯಾಚೆ ॥
ಚುಂಚನಗಿರಿ ಸ್ವಾಮಿ ಭೈರ್‌ವನ ॥ ಒಡೆತನ
ಹಾದಿ ಬೀದಿಲೆಲ್ಲಾ ದವನದ ಗಮನ ॥

ಚೇಳೂರ್‌ಂದ ಹೇಳಿ । ಕಳ್‌ಸ್ಯೊಳೊ ತೇಳಿ ॥
ಕರಿಕುದ್‌ರೆ ಮ್ಯಾಲೆ ಬಂದುಟು ॥ ಭೈರ್‌ವ
ನೂರ್‌ಜಡೆ ಬೆನ್ನ್‌ನ ತೀಂಡಿಕಂಡ್ ॥

ಭೈರ್‌ವನ ಜೋಡಿಕುದ್‌ರೆ ಕೋಣಿಯೊದುಯಿಲ್ಲಿ ॥
ಜನಯೆಲ್ಲ ಭೈರ್‌ವನ ನೋಡೊನ ಬನ್ನಿ ॥ ಗಿರಿಲಿ
ಲೋಕಕೆಲ್ಲ ಹೆಸ್‌ರ್ ಅದ್ ಚುಂಚನಗಿರಿ ॥

ಆದಿರುದ್ರ ಕುದ್ದ । ಸಿದ್ದಯೋಗಿ ಪೀಠ
ಆರೂಢ ಗುರು ಅಂವ ಭೈರ್‌ವ ॥ ಸ್ವಾಮಿ
ಪರಶಿವ ಕೈಲಾಸದ ದರ್ಶನಯಿಲ್ಲಿ" ॥

ನವುಲ್ ಹಿಂಡ್ ಕೊಣ್‌ದದೆ ರೆಕ್ಕೆ ಬಿಚ್ಚಿ ॥
ಹಿಂಡಕ್ಕಿ ಹಾರಾಡ್‌ವೆ ಬಿಲ್ಪತ್ರೆ ॥ ಮರಲಿ
ಹುಲಿಮರಿ ಕೊಣ್‌ದದೆ ಭೈರ್‌ವನ ಸುತ್ತಿ "॥

ಶಿವನ ಜುಟ್ಟ್‌ಂದಿಳ್‌ದ ಗಂಗೆನೀರ್ ಕೆರೆಲಿ ॥
ಕರುಣೆ ಹೊತ್ತ ಮಾಯೆ ಕಂಬದಮ್ಮ ॥ ಕ್ಷೇತ್ರಲಿ
ಪಂಚಲಿಂಗ ರಕ್ಷಣೆಗೆ ನಿತ್ತುಟ್ಟಲ್ಲಿ ಪಾರ್ವತಿ ॥

ಚುಂಚನಗಿರಿಗೆ ಕೆಂಚ ಹನುಮ ಬಂದ್ ॥
ಗಿರಿವಳ್ಳದ್ ತೇಳಿ ನೆಲ್ಸಿತ್ ॥ ಆಕಾಶನ
ನೋಡಿಕೆ ತೇಳಿ ಕುದ್ದತ್ ಗಳಿಕಲ್ಲ್‌ಲಿ ॥

ಆಶೀರ್ವಾದ ಮಾಡ್ದ ಗುರು । ಗಂಗಾಧರ ಮಾಸ್ವಾಮಿ ॥
ಒಕ್ಕಲು ಮಕ್ಕ ಬಂದೊಳೊ ನಾವು ॥ ಚುಂಚನಗಿರಿಗೆ
ಚುಂಚನಗಿರಿ ಪಂಚಲಿಂಗ ದರ್ಶನಕೆ ॥

* * * * * *

ಅವಲಕ್ಕಿ ಕುಟ್ಟುದು

ಸ್ನುವ್ ಸ್ನುವ್ ಸ್ನುವ್ ಸ್ನುವ್ ॥
ಸುವ್ವ ಪದ ಹೇಳ್ಕಂಡ್। ಸುವ್ವಲಾಲೆ ಹಾಡ್‌ಕಂಡ್ ॥

ಹಬ್ಬಕ್ಕೆ ಅವಲಕ್ಕಿ ಕುಟ್ಟೊಕು ಎಲ್ಲವು
ಬಂದವ್‌ಕೆ ಅವ್‌ಲಕ್ಕಿ ಕಾಯ್‌ಹಾಲ್ ಕೊಡೊಕು ॥
ದೇವರ ಗದ್ದೆಲಿ ಬೆಳ್‌ದಂತ ಭತ್ತನ
ದೇವ್ರ್‌ಗೆ ನೈವೇದ್ಯ ಮಾಡಿಕೆ ಬಾಕನ ॥

ಸ್ನುವ್ ಸ್ನುವ್ ಸ್ನುವ್ ಸ್ನುವ್ ॥
ಸುವ್ವ ಪದ ಹೇಳ್ಕಂಡ್। ಸುವ್ವಲಾಲೆ ಹಾಡ್‌ಕಂಡ್ ॥

ನೆಲ್ಲಕ್ಕಿ ದೀಪಕೆ ಎಣ್ಣೆನ ಹೊಯ್ದ್
ಮುತ್ತೈದೆಗ ಕೂಡಿ ದೀಪನ ಬೆಳ್‌ಗಿ
ಶುದ್ದ ಮುದ್ರಿಕೆಲಿ ಕುಟ್ಟಿಕೆ ಅವ್‌ಲಕ್ಕಿ
ಹಬ್ಬದ ಪಲಾರಕ್ಕೆ ಕುಟ್ಟುವ ಅವ್‌ಲಕ್ಕಿ ॥

ಸ್ನುವ್ ಸ್ನುವ್ ಸ್ನುವ್ ಸ್ನುವ್ ॥
ಸುವ್ವ ಪದ ಹೇಳ್ಕಂಡ್। ಸುವ್ವಲಾಲೆ ಹಾಡ್‌ಕಂಡ್ ॥

ಅರೆಬೇಯ್‌ಸಿ ಭತ್ತನ । ಓಡ್‌ಲಿ ಹೊರ್ದ್
ಅವಲಕ್ಕಿ ಒರ್‌ಳ್‌ಲಿ ಕುಟ್ಟಿದೊ ವಣ್‌ಕೆಲಿ
ಟಕಟಕ ಕುಟ್ಟುವ ಜರ್ ಜರ್ ಸದ್ದ್‌ಗೆ
ಬೆಳ್ಳಂಗೆ ಅವ್‌ಲಕ್ಕಿ ಮಲ್ಲಿಗೆ ಹೂನಂಗೆ ॥

ಸ್ನುವ್ ಸ್ನುವ್ ಸ್ನುವ್ ಸ್ನುವ್ ॥
ಸುವ್ವ ಪದ ಹೇಳ್ಕಂಡ್। ಸುವ್ವಲಾಲೆ ಹಾಡ್‌ಕಂಡ್ ॥

ಬಿಸುಲಿ ಕೃಷ್ಣಂಗೆ ಅವ್‌ಲಕ್ಕಿ ಕಾಯ್‌ಹಾಲ್
ಬಂದವ್‌ಕೆ ಕೊಡೊಕು ಪಲಾರ ಪಟ್ಟ್‌ಣಿ
ಕೃಷ್ಣ, ಸುಧಾಮರ ಸ್ನೇಹದ ಅವ್‌ಲಕ್ಕಿ
ಬಡವನ ಸ್ನೇಹದ ಭಾಗ್ಯದ ಅವ್‌ಲಕ್ಕಿ ॥

ಸ್ನುವ್ ಸ್ನುವ್ ಸ್ನುವ್ ಸ್ನುವ್ ॥
ಸುವ್ವ ಪದ ಹೇಳ್ಕಂಡ್।
ಸುವ್ವಲಾಲೆ ಹಾಡ್‌ಕಂಡ್ ॥

ಮಂಗಳಾರತಿ

ತಂದ್ ಬೆಳ್‌ಗೊನ ಮಂಗಳಾರತಿ
ಎತ್ತಿ ಬೆಳ್‌ಗೊನ ॥ ... ಶ್ರೀ ಓಂಕಾರೇಶಂಗೆ ॥

ಓಂಕಾರೇಶನ ಸನಿಹಲೆ ಕುದ್ದ ಶ್ರೀ ಗಣೇಶಂಗೆ ॥
ಶ್ರೀ ಸುಬ್ರಮಣ್ಯಂಗೆ ॥ ಸ್ವಾಮಿ ಆಂಜನೇಯಂಗೆ ॥

ಆಂಜನೇಯಂಗೆ ತಾಯಿ ಚೌಂಡಿಯಮ್ಮಂಗೆ ।
ಕುಂದುರು ಮೊಟ್ಟೆ ಮಾರಿಯಮ್ಮಂಗೆ ॥

ಎತ್ತೋನಾರತಿ ಮುತ್ತುನಾರತಿ ।
ಮುತ್ತ್‌ನಂತ ಪಾದಗಳ ದೇವಿಯವುಕೆ ॥

ಕ್ವಾಟೆ ದಂಡ್‌ನ ಪ್ಯಾಟೆನ ಕಾಯ್‌ವ ।
ದೇವಿಯವ್‌ರ ಕರಗಕ್ಕೆ । ದೇವಿಯವ್‌ರ ಕರಗಕ್ಕೆ ॥

ಮಂಗಳಾರತಿ ತಂದ್ ಬೆಳ್‌ಗೊನ ನಾವು ।
ದಸರತೇರ್‌ನ ಮೂಲ ಪ್ಯಾಟೆ । ರಾಮ ಮಂದಿರಕೆ ॥

ಕಾರ್ತಿಕಮಾಸಲಿ । ತೆಪ್ಪೋತ್ಸವ ಸ್ವಾಮಿ
ಓಂಕಾರೇಶನ ಕೆರೆಲಿ । ಶ್ರೀ ಓಂಕಾರೇಶಂಗೆ ॥

ಶ್ರೀ ಓಂಕಾರೇಶನ ಚರಣ ಕಮಲಕ್ಕೆ ।
ಸ್ವಾಮಿನ ಪಾದ ಕಮಲಕ್ಕೆ ॥ ತಂದ್‌ಬೆಳ್‌ಗೊನ ॥

* * * * *

ತಾಳ

ತಾಳ ತಾಳ ಅದ್ । ಕಂಚ್‌ನ ತಾಳ
ರಾಗದ ತಾಳಅದ್ । ದೇವರ ತಾಳ ।
ದೇವರ ತಾಳಅದ್ ॥ ಕಂಚ್‌ನ ತಾಳ ॥

ಗಣೇಶನ ಲಯಕೆ । ಶಾರದೆನ ಹಾಡ್‌ಗೆ
ಹಾಡ್‌ನ ರಾಗಕ್ಕೆ । ರಾಗಕೊಂದು ತಾಳ ।
ರಾಗದ ತಾಳಕ್ಕೆ ॥ ಕಂಚ್‌ನ ತಾಳ ॥

ಹಾಡ್‌ಗೊಂದು ತಾಳ । ಕಂಚ್‌ನ ತಾಳ ।
ರಾಗಕೊಂದು ತಾಳ । ಅದ್ ದೇವರ ತಾಳ ।
ದೇವರ ತಾಳ ಅದ್ ॥ಕಂಚ್‌ನ ತಾಳ॥

ಹಾಡ್‌ಗೊಂದು ರಾಗ । ರಾಗಕೊಂದು ತಾಳ ।
ಎಲ್ಲದಕು ಬೇಕು ತಾಳ । ಕಂಚ್‌ನ ತಾಳ ।
ಕಂಚ್‌ನ ತಾಳ ಅದ್ । ರಾಗಕೆ ತಾಳ ॥

ರಾಗಕೊಂದು ಹಾಡ್ । ಹಾಡ್‌ಗೊಂದು ಲಯ ।
ಲಯಕೊಂದು ತಾಳ । ಎಲ್ಲದಕ್ಕು ತಾಳ ।
ದೇವರ ತಾಳ ಕಂಚ್‌ನ ತಾಳ ॥ ಕಂಚ್‌ನ ತಾಳ ॥

* * * * *

ಬೀಸುವ ಕಲ್ಲ್

ಬೀಸುವ ಕಲ್ಲೆ ।ಕಪ್ಪುನ ಕರಿಕಲ್ಲೆ
ನಿನನಂಬಿ ಬಂದವರ್‌ನ ॥ ಕೈಬುಡ್‌ಬಡ
ಓಕಲ್ಲೆ ....ಅಕ್ಕಿ....ಬೀಸುವ ಕಲ್ಲೆ ॥

ಮೂಡು ಕೆಂಪಾಕೆ ಮುಂದೆ । ಸಣ್ಣಕ್ಕಿ ಬಯ್ಲ್‌ಗೆ
ಸೂರ್ಯನ ಕಿರಣ ಬೀಳಿಕೆ ॥ ಮುಂದೆ
ನಾವೆದ್ದ್ ಕಲ್ಲ್ ಹಿಡಿಯೊಕು ॥

ಭೂತಾಯಿ ಮಾತಾಯಿ ನಮ್ಮಪ್ಪ ಶಿವನೆ
ಹೊತಾರೆದ್ದ್ ನಾವು ಕೈಮುಗ್‌ದವೆ ॥ ನೀವ್‌ಗೆ
ಸಣ್ಣಕ್ಕಿ ನೈವೇದ್ಯಕ್ಕೆ ನಿಂಗೊಪ್ಪುಸುವೆ ॥

ಭತ್ತ ಕೊಟ್ಟ ಶಿವನಿಂಗೆ ಹಾಲ್‌ಹಣ್ಣ್ ಒಪ್ಪುಸುವೆ
ಸುಗ್ಗಿಲಿ ಭೂತಾಯ್‌ಗೆ ಎಣ್ಣೆನ । ಹೊಯ್‌ದವೆ
ನಮ್ಮವ್ವ ಭೂತಾಯಿ ಹರ್‌ಸವ್ವ ॥

ಓ ಕರಿಕಲ್ಲೆ ಅಕ್ಕಿ...ಬೀಸುವ ಕಲ್ಲೆ
ಜರ್ ಜರ್ ಬೀಳ್‌ವ ಅಕ್ಕಿ ಹೊಡಿ ॥ ಸದ್ದ್ ಕೇಳಿ
ಗೂಡುಲಿದ್ದ ಕೋಳಿ ಕೂಂಗಿತ್ ॥

ರೊಟ್ಟಿನ ಮಾಡೊಕು । ಕೆಂಡಲಿ ಕಾಯ್ಸೊಕು
ತುಪ್ಪನ ಬೆರ್‌ಸಿ ತಿನ್ನೊಕು ॥ ...ಓ ಕಲ್ಲೆ
ಶರಣ್‌ತೇಳಿ ನಿನ್ನ ಕೈ ಬುಟ್ಟನೆ ॥

* * * * *

ಹೆಣ್ಣ್

ಆಲಕ್ಕೆ ಹೂವಿಲ್ಲೆ । ಸಾಲಕ್ಕೆ ಕೊನೆಯಿಲ್ಲೆ ।
ಜಾಜಿ ಹೂ ಮರ ನೆರ್‌ಳ್ ಕೊಡ್ದುಲೆ ॥ ಹೆಣ್ಣಿಗೆ
ಹುಟ್ಟಿದಾ ಮನೆ ಸ್ಥಿರ ಆದುಲೆ ॥

ಹಾಲ್ ಅನ್ನವುಂಡ್ ಹನ್ನೆರಡ್ ಗಂಗಳ ಬೆಳ್‌ಗಿ
ಬಾಲೆ ನಮ್ಮನೆಂದ ದೂರಾತ್ । ಆ ಊರ್‌ನ
ಗೌಡರ ಐನ್‌ಮನೆ ಸೊಸೆ ಆತ್ ॥

ಅತ್ತ್ ಕಂಡರೇನ್ ಈ ದುಃಖ ಮಾಸುದುಲೆ
ನನ್ನ ಹೆತ್ತವ್ವ ನಿನ್ನ ಬುಟ್ಟ್ ॥ ಆ ಮನೆಗೆ
ನಾ ಹೆಂಗವ್ವಾ ನಡಿಯೋದು ನೀ ಹೇಳ್ ॥

ಕೊರ್‌ಳ್‌ಲಿದ್ದ ಸರನ ದಾನನೆ ಕೊಟ್ಟ್
ಧಾರೆಯೆರ್‍ದೊ ನೆರೆಮನೆಗೆ ನಿನ್ನಾ ॥ ಮಗಳೆ
ಇನ್ಯಾಕೆ ನಾವು ದುಃಖ ಪಡೊಕು ?

ಹೆಣ್ಣ್ ಕೂಸು ಹುಟ್ಟಿತ್ ತೇಳಿ ಬ್ಯಾಜಾರಬ್ಯಾಡ
ಹೆಣ್ಣ್‌ತೇಳ್ರೆ ಅವುಳ್ ನೆರೆಮನೆ ॥ ಐನ್‌ಮನೆ
ನೆಲ್ಲಕ್ಕಿ ದೀಪ ಬೆಳ್‌ಗವ್‌ಳು ಅವುಳೆ ॥

* * * * *

ತೌರೂರು

ತೌರುನ ದಾರಿಲಿ ಬಾರಿ ಬಿಸ್‌ಲಣ್ಣ
ಅಕ್ಕ ತಂಗೆಂದ್‌ರ್ ನಡ್‌ದಾಡ್‌ವ ॥ ದಾರಿಲಿ
ತೆಗ್‌ಸಣ್ಣ ನೀರ್‌ಗೆ ಕೆರೆ ಬಾಮಿ ॥

ತೌರುನ ದಾರಿಲಿ ಮಲ್ಲಿಗೆ ಗಿಡಗಳ್‌ಂದ
ಹೂಗಳ ಪರಿಮಳ ಗಂತೇಳಿ ॥ ತಾಯವ್ವ
ಗಿಡಕೊಂದು ಹೂ ಕೊಯ್ದ್ ಮುಡಿಯೊಕು ॥

ತೌರು ಹೆಣ್ಣಿಗೆ ರಸಬಾಳೆ ಹಣ್ಣ್‌ನಂಗೆ
ಮಲೆನಾಡ್‌ನ ಭತ್ತದ ಜೇನ್‌ಹಂಗೆ ॥ ತಾಯವ್ವ
ನಿನ್ನ ಮನೆ ನಂಗೆ ಗಿಳಿ ಗೂಡುಹಂಗೆ ॥

ಮಳೆಬುಟ್ಟರೂ ಮಳೆ ಹನಿ ಬುಟ್ಟತ್‌ಲೆ
ನೀ ಬುಟ್ಟರೂ ನಿನ್ನ ಮನೆ ಬುಟ್ಟತ್‌ಲೆ ॥ ತಾಯವ್ವ
ನಿನ್ನಾಸೆ ನಂಗೆ ಬಲು ಆಸೆ ॥

ಬಂದದೆ ನನ್ನ ತಮ್ಮ ಬಣ್ಣದ ಬಟ್ಟೆ ಧರ್‌ಸಿ
ಬರಿಕೈಲಿ ಬಾದುಲೆ ನನ್ನ ತಮ್ಮ ॥ ನನ್ನಾ
ವಾಲೆಗೆ ಮುತ್ತು ತಾದು ಅಂವ ॥

ಪಾರಿವಾಳದ ಹಕ್ಕಿಗೆ ಏನಾಸೆತೇಳ್ರೆ ।
ನೀರಾಸೆ ಮರದ ನೆರ್‌ಳಾಸೆ ॥ ಹೆಣ್ಣಿಗೆ
ಬಲು ಆಸೆ ಅವ್ವನ ಮನೆಯಾಸೆ ॥

* * * * *

ಸೂರ್ಯ

ನಾನೆಚ್ಚರಾಗಿ ಬೆಳಗಾದ್ ನೋಡ್‌ಕನ
ಸೂರ್ಯನೆ ಹುಟ್ಟಿ ಗುಡಿಯೊಳಗೆ ॥ ಬಾಕನ
ಜಪ್‌ಸುವ ಮಂತ್ರ ಕೆಮಿವೊಳಗೆ ॥

        ಬಾಸ್ಕರ ಬಾನೇರಿ ಕಿರಣಗಳ ಎಸ್‌ಯಕನ
        ಅರಿವುನ ಸದ್ದ್ ನಾವ್ಗಾತ್ ॥ ಸದ್ದ್‌ನ
        ಗಂಟೆಗಳ ದೊನಿ ಕೆಮಿವೊಳಗೆ ॥

ಮುಂಜಾವು ಕಿರಣ ಸಪ್ತರಂಗಾಗಿ
ಉಷೆತಾನೆ ಸಿಂಗರಿಸಿದೆ ಪ್ರಕೃತಿನಾ ॥ ಇದ್‌ಕಂಡ್
ತಂಗಾಳಿ ತಂಪಾಗಿ ಬೀಸಿದೆ ॥

        ಬಾಸ್ಕರನ ರಥ । ಪಡುವಣ ಸೇರ್‌ಕನ ।
        ಕಡಲ್‌ನ ಅಲೆಗಾ ತೇಲಾಡುವೆ ॥ ಕಣ್ಣಿಗೆ
        ಕೆಂಪುನ ಕಿರಣ ಹೊಳ್‌ದದೆ ॥

ಮೋಡಂದ ಬೀಳುವ ಎಲ್ಲಾ ಹನಿಗಳ್ಳಿ
ನಾಮನ ಹಾಡ್‌ವ ದನಿಯೆಲ್ಲೊ । ಕಡಲ್‌ನ
ಅಲೆಗಳ ರಾಗದ ಹಾಡ್‌ಲಿ ॥

* * * * *

ಓಂ ನಮೋ ಕಾವೇರಿ

ಓಂ ನಮೋ ಕಾವೇರಿ ಓ ತಾಯಿ ಕಾವೇರಿ
ಕೈ ಮುಗ್ದ್ ಬೇಡಿಕೊಂಡವೆ ನಾವು ಬೇಡಿಕೊಂಡವೆ ॥ ಓಂ ॥

ನಿನ ಪಾದದಡಿಲಿ ಕೈಜೋಡ್ಸಿ ತಲೆಬಾಗಿ ಕುದ್ದವೆ
ತಾಯಿ ಕಾವೇರಮ್ಮ ನೀ ಕಾಪಾಡೊಕು ॥

ವರ್ಷಕೊಮ್ಮೆ ತುಲಾ ಸಂಕ್ರಮಣ ದಿನದಂದ್
ತೀರ್ಥೊದ್ಭವ ರೂಪಲಿ ನೀ ಕಂಡಿಯಾ ॥

ಊರ್ ನಾಡ್ ದೇಶಂದೆಲ್ಲಾ ಭಕ್ತರ್ ಬಂದವೆ
ನಿನ್ನ ತೀರ್ಥ ಅಮೃತತೇಳಿ ಓಡಿ ಬಂದವೆ ॥ ಓಂ ॥

ಭಾಗಮಂಡ್ಲ ಅಲ್ಲಿ ಇರ್ದು ತ್ರಿವೇಣಿ ಸಂಗಮ
ಕನಿಕೆ ಕಾವೇರಿ ಸುಜೋತಿ ಸೇರ್‍ವ ಸಂಗಮ ॥

ಮೂರು ಸಲ ಮುಳ್‌ಗಿ ಎದ್ದ್ ಪಾಪ ಕಳ್ದವೆ ।
ಹಿರಿಯವುಕೆ ಪಿಂಡ ಪ್ರದಾನ ಮಾಡುವೆ ॥

ನಾಗಂಗೆ ಕೈಮುಗ್ದ್ । ಪಡಿಯಕ್ಕಿ ದಾನ ನೀಂಡಿ ।
ಭಗಂಡೇಶಂಗೆ ಮುಂದೆ ಹೋಗಿ । ಪೂಜೆ ಮಾಡುವೆ ॥ ಓಂ ನಮೋ॥

ಹತ್ತಿ ಹೋಕನ ಕುಂದು ಕೊಡಿಲಿ । ನಿತ್ತ್ ನೋಡೊಕು ।
ಕೆಳ್ಗೆ ಇಳ್ದ್ ಭೀಮನ ಕಲ್ಲ್ । ಅಲ್ಲೆ ನೋಡೊಕು॥

ಪುಣ್ಯ ಪಡೆಕೆ ಕಾವೇರಿ ಕೆರೆಲಿ ಮುಳ್ಗಿ ಎದ್ದವೆ ।
ಅರ್ಚಕರ್ ಕುಂಡಿಕೆಂದ ತೇರ್ಥ ಹೊಯ್‌ದವೆ ॥

ಬ್ರಹ್ಮಗಿರಿ ಮೆಟ್ಟ್‌ಹತ್ತಿ ಕೊಡಿಲಿ ನಿತ್ತವೆ ॥
ಯಜ್ಞಕುಂಡ ಸಪ್ತಗುಂಡಿಲಿ ನೀರ್ ಕಂಡದೆ ॥

ಜನ್ಮ ಸಾರ್ಥಕಾತ್ ತೇಳಿ । ಗ್ಯಾನ ಮಾಡುವೆ ।
ಜಗದ ಜನರ ಪುಣ್ಯನ ಗ್ಯಾನ ಮಾಡುವೆ ॥ ಓಂ॥

* * * * *

ಕೊಡಗ್‌ನ ಕುಲದೇವಿ

ಕೊಡಗ್‌ನ ಕುಲದೇವಿ ಶ್ರೀ ಕಾವೇರಿ
ತೀರ್ಥ ಸ್ವರೂಪಿಣಿ ಲೋಕ ಕಲ್ಯಾಣಿ
ನಿನ್ನ ತೌರೂರ್‌ಗೆ ನಿನ್ನಿಂದ ಹೆಸ್‌ರುಟ್ಟು ॥

ಬ್ರಹ್ಮನ ಮಗಳು ಲೋಪಾಮುದ್ರೆ
ಕೊಡ್ಗ್‌ನ ಬ್ರಹ್ಮಗಿರಿ ಮಡ್‌ಲ್‌ಲಿ
ನೆಲೆನಿತ್ತ ದೇವಿ ಶ್ರೀ ಕಾವೇರಿ ॥

ಕವೇರ ಮುನಿ ಪುತ್ರಿ ಕಾವೇರಿ ಆಗಿ
ಅಗಸ್ತ್ಯ ಋಷಿಮುನಿ ಸತಿಯಾಗಿ
ನೀ ನೆಲ್ಸಿದಾ ಮಣ್ಣ್ ನಮ್ಮದ್ ತಾಯಿ ॥

ಬ್ರಹ್ಮಗಿರಿ ಶಿಖರಂದ ಜಲ ಆಗಿ ಇಳ್ದ್
ಕನಿಕೆ ಸುಜ್ಯೋತಿ ಕೂಡಿ ತ್ರಿವೇಣಿ ಸಂಗಮ
ಪಾಪ ತೊಳೆಕಾಗಿ ಲೋಕ ಕಲ್ಯಾಣಕೆ ॥

ಜಡಿಮಳೆ ಬಂದ್ ಬರೆ ಜರ್ದ್ ಕೆಮ್ಮಣ್ಣ್
ತುಂಬಿ ಹರಿಯಕನ ನೋಡುವ ಜನಹೇಳ್ವೆ
ನೀ ಬಾರಿ ಪೊರ್ಲುನವ್‌ಳ್ ತೇಳಿ ॥

ಪೊರ್ಲಾಗಿ ಅರ್‌ಳಿದ ಸೀತೆಹೂ ಶಿರಬಾಗಿ ।
ತೊಟ್ಲ್ ತೂಗಿದಂಗೆ । ಕರಿಮಣಿ ಬಿಚ್ಚೋಲೆ
ಬಾಗಿನ ಪೂಜೆ । ಸಂಗಮಲಿ ಪೂಜೆ ನಿಂಗೆ ॥

ನೀ ಹರ್‌ದ ಹಾದಿಲಿ ಮುನಿಗಳ ತಪ್‌ಸ್‌ಂದ ।
ಈ ಲೋಕ ಪಾವನಾತ್ ಓ ತಾಯಿ ಕಾವೇರಿ
ತೀರ್ಥ ಸ್ವರೂಪಿಣಿ ಲೋಕಕಲ್ಯಾಣಿ ॥

ನೀ ಹರಿವ ಬಯ್ಲ್ ಸೀಮೆಲಿ ಕರಿಮಣ್ಣ್ ಕೆರೆತುಂಬಿ ।
ಕೆನೆ ಮಣ್ಣ್ ಬಯ್ಲ್ ತುಂಬಿ । ರಾಗಿ ಕವುಲೊಡ್‌ದ್
ಜ್ವಾಳ ತೆನೆಬಾಗಿ । ಹೊಗೆಸೊಪ್ಪು ಹೂ ಅರ್‌ಳಿತ್॥

ಜ್ವಾಳದ ಕೂಂಬೆಲಿ । ಗೀಜಕ್ಕಿ ಚಿಲಿಪಿಲಿ ಹಾರಾಡ್‌ಕನ
ಭತ್ತ ತೆನೆತುಂಬಿ ಬಾಳೆ ತಲೆಬಾಗಿ ಶ್ರಾವಣಗಾಳಿ
ಬೀಸಿ ಬೀಸಿ ಜೋಗುಳ ಹಾಡ್ದೆ ಬಯ್ಲೆಲ್ಲಾ॥

* * * * *

ತಲಕಾವೇರಿಲಿ

ಮುಂಜಾನೆ ಮಂಜ್‌ನ ಹನಿಗ ಅಲ್ಲೆ
ತಂಗಾಳಿ ಚುಮ್ ಚುಮ್ ಚೆಳಿ ನೊಡುಲೆ॥
ವಾಲ್‌ಗದ ಸಂಪ್ರದಾಯ ಕಾವೇರಿಗೆ
ಕುಂಡಿಕೆ ಜಲದೇವಿ ದರ್ಶನಕೆ ॥
        ತೀರ್ಥ ಸ್ವರೂಪಿಣಿ ಕಾವೇರಿಗೆ
        ರಕ್ಷಣೆ ಬಂದಬಸ್ತ್ ಜಲದೇವಿಗೆ ।
        ಎದ್‌ರಿಗೆ ನಿತ್ತಾ ಕಾವೇರಿ ತೇರ್‌ಗೆ
        ಜಲದೇವಿ ದರ್ಶನ ಸ್ವಾಗತಕೆ ॥
ತಂಗಾಳಿ ಚುಂ ಚುಂ ಚೆಳಿ ನೊಡುಲೆ ।
ವಾಲಗದ ಸದ್ದ್ ನೊಡು ನೊಡುಲೆ ॥
ಗಂಗೆ ಭಾಗೀರಥಿ ತಾಯಿ ಕಾವೇರಿ
ಲೋಕೋಪಕಾರಿಣಿ ಭೂದೇವಿ ಭಾಗ್ಯಸಿರಿ ॥
        ಕನ್ನಡದ ಭೂಜಲದೇವಿ ಕಾವೇರಿ
        ಬೆಳ್‌ಗಿದೆ ನಿತ್ಯ ಹಸ್‌ರ್ ಸಿರಿ ॥
        ಹಿತಕರ ಹವಮಾನ ಮಳೆಯಿಲ್ಲಿ ।
        ನಾಡ್‌ಗೆ ಪ್ರಕೃತಿ ಕೊಡ್‌ಗೆಯಿಲ್ಲಿ ॥
ನಿತ್ಯ ಸತ್ಯ ತೀರ್ಥೋದ್ಭವ ಕುಂಡಿಕೆಲಿ
ಪುಣ್ಯತೀರ್ಥ ಮಿೂಯುವ ಮೈಮೆಯಿಲ್ಲಿ ॥
ಕನ್ನಡ ತಮಿಳ್ ನಾಡ್‌ನ ಜೀವ ನದಿ ಕಾವೇರಿ ।
ಸಾಗಿದೆ ಬಯಲ್ ಸೀಮೆ ಹಸ್‌ರ್‌ಗಾಗಿ ॥
        ಮುಂಜಾನೆ ಮಂಜ್‌ನ ಚೆಳಿ ನೊಡುಲೆ
        ಅರ್‌ಶಣ ಕುಂಕುಮಾರ್ಚನೆ ಕಾವೇರಿಗೆ ॥
        ಜಲದೇವಿ ದರ್ಶನ ಕುಂಡಿಕೆಲಿ ।
        ಮಧುರ ಸಂಗೀತ ಹೊಂಬಿಸ್‌ಲ್‌ಲಿ॥

* * * * *

ಲೋಪಾಮುದ್ರೆ

ಸೃಷ್ಟಿಕರ್ತನ ಮಗ್ಳ್ ಲೋಪಾಮುದ್ರೆ ಬ್ರಹ್ಮಗಿರಿಂದ
ನೀರಾಗಿ ಇಳ್ದ್ ಹೊಳೆ ಆಗಿ ಹರ್ದ್ ಸಾಗ್ಕನ॥

ಲೋಕಪಾವನೆ ಕೋಟಿ ಜನಕೆ ಜೀವನಾಧಾರಕಾತ್
ನೀರ್‌ನ ಶಕ್ತಿ ಹಸ್ರ್‌ಕ್ರಾಂತಿಯಾತ್॥

ಕನ್ನಡದ ಕುಲನಾರಿ ಕಾವೇರಿ ಅವ್ಳು
ನೆರೆ ರಾಜ್ಯದ ತಮಿಳ್‌ನಾಡ್‌ನ ಹಸ್ರ್ ಉಸ್ರು॥

ತುಲಾ ಸಂಕ್ರಮಣಕೆ ಗುಳುಗುಳು ಜಲವುಕ್ಕಿ
ಕುಂಡಿಕೆಲಿ ಬಂದ್ ಜಲದೇವಿನ ದಿವ್ಯದರ್ಶನ ತೀರ್ಥ ರೂಪಲಿ॥

ಬ್ರಹ್ಮ ಕುಂಡಿಕೆ ಮೂಲಸ್ಥಾನ ಅದ್ ಕೊಡಗ್‌ನ ತಲಕಾವೇರಿ
ಸಹ್ಯಾದ್ರಿ ಬೆಟ್ಟ ಸಾಲ್‌ನ ಲೋಕೋಪಕಾರಿಣಿನ ಬ್ರಹ್ಮಗಿರಿ॥

ಗಂಗಾ ಕಾವೇರಿನ ಸಂಗಮ ತೀರ್ಥೋದ್ಭವ
ಪವಿತ್ರ ತೀರ್ಥಸ್ಥಾನ ಅಶ್ವಮೇದಯಾಗದ ಫಲ॥

ಋಷಿ ಮುನಿಗಳ ಪವಿತ್ರ ಸ್ಥಾನ ಸರ್ವಪಾಪ ಪರಿಹಾರ
ಮೋಕ್ಷಕ್ಕೆ ದಾರಿ ತೇಳೊವು ತಿಳ್ದವು॥

ನವದಂಪತಿಗ ಕೈಹಿಡ್ದ್ ಮೂರುಸಲ ಮುಳ್ಗಿ ಎದ್ದರೆ
ಪುಣ್ಯ ಫಲ ವಂಶವೃಕ್ಷಕೆ ಅದ್ಕಾಗಿ ಸುರುಗೆ ಕಾವೇರಿ ದರ್ಶನ ಅವ್ಕೆ॥

ನಡ್ದ್ ನೋಡುದೆ ಲಾಯ್ಕ ಭೀಮನ ಕಲ್ಲ್‌ತೇಳ್ವ ಗುಹೆನ
ಅದರ ಕೊಡಿಗೆ ಹತ್ತಿ ಸಾಗಿರೆ ಕಾಂಬೊದು ಬ್ರಹ್ಮಗಿರಿನ ಸೊಗಸ್॥

* * * * *

ಜೀವನದಿ

ಕನ್ನಡ ತಮಿಳ್ ನಾಡ್‌ನ ಜೀವನದಿ ಕಾವೇರಿ ।
ಬೆಳ್‌ಗಿದೆ ನಿತ್ಯ ಹಸ್‌ರ್ ವೈಬವಲಿ ।
ಬ್ರಹ್ಮದೇವನ ಪಾದ ಸ್ಪರ್ಶಂದ ಬ್ರಹ್ಮಗಿರಿ ಹೆಸ್‌ರಾಗಿ ।
ಸಪ್ತಋುಸಿಗ ತಪಸ್ ಮಾಡ್ದ ಭೂಶಿಖರ ಬ್ರಹ್ಮಗಿರಿ ॥

ಅಗಸ್ತ್ಯಋುಸಿನ ನೆಲೆಬೀಡ್ ತಲಕಾವೇರಿ ।
ಕಾವೇರಿ ನೀರಾಗಿ ಹರ್‌ದ ಮೈಮೆಯಿಲ್ಲಿ ।
ಪ್ರತ್ಯಕ್ಷ ಸತ್ಯ ತೀರ್ಥೋದ್ಬವ ಕುಂಡಿಕೆಲಿ ।
ತೀರ್ಥಮೀವ ಸ್ಮರಣೆ ಪುಣ್ಯವಾಹಿನಿ ಕಾವೇರಿ ॥

ದಕ್ಷಿಣದ ಗಂಗೆ ಭಾಗೀರಥಿ ತಾಯಿ ಕಾವೇರಿ ।
ಲೋಕೋಪಕಾರಿಣಿ ತಮಿಳ್ ನಾಡ್‌ನ ಭಾಗ್ಯ ಸಿರಿ ।
ಕನ್ನಡದ ಭೂದೇವಿ ತಾಯಿ ಕಾವೇರಿ ।
ಇಂದಿಗೂ ಭಕ್ತರಿಗೆ ಕೊಡಗ್‌ನ ಕುಲದೇವಿ ॥

ಲೋಕಪಾವನೆ ಹರ್‌ದ ಎಡಬಲ ದಂಡೆಗಳ್‌ಲಿ।
ಋುಸಿಗಳ ಸಂತ ಮಹಾತ್ಮರ ಕತೆಗ ಸಾಲಾಗಿ ।
ಗಾನನಾದ ಯೋಗಿಗಳ ಜ್ಞಾನ ಅರ್‌ಳಿ ।
ಮೆರ್‌ದಾ ವೈಭವದ ಬೆಳ್‌ಕ್ ಕಾವೇರಿ ॥

ಸುರುನ ಅಡ್ಡಕಟ್ಟೆ ಮೈಸೂರ್‌ನ ಕನ್ನಂಬಾಡಿಲಿ ।
ಮೆಟ್ಟೂರು ಕಟ್ಟೆಂದ ಕಾವೇರಿ ಅನುಗ್ರಹಯಿಲ್ಲಿ।
ದಕ್ಷಿಣದ ಕಾಶಿ ಭಗಂಡ ಕ್ಷೇತ್ರಲಿ ।
ಉತ್ತರದ ಗಂಗೆ ಪ್ರಯಾಗ ಕ್ಷೇತ್ರಲಿ ॥

ಕನ್ನಡನಾಡ್‌ನ ಆಗುಂಬೆ ಶೃಂಗೇರಿಗಳಂಗೆ ।
ತಲಕಾವೇರಿಲಿ ಹಿತಕರ ಹವಾಮಾನ ಮಳೆ।
ಕೊಡಗ್‌ನಾಡಿಗೆ ಪ್ರಕೃತಿ ಕೊಡುಗೆಯಿಲ್ಲಿ ।
ಹೊರ ನಾಡಿಗೆ ಹಸ್‌ರ್ ಸಿರಿ ಕಾವೇರಿ ॥

* * * * *

ಅವ್ವ ಕಾವೇರಿ

ಮೂಡು ಕೆಂಪಾಗಿ । ಪಡು ತೆಂಕ್ ಬಡ್‌ಗ
ದಿಕ್ಕ್ ಕಾಂಬಕೆ ಮುಂದೆ । ದೀಪ ಇಸುವೆ ॥
ಮೂಡು ಬೊಳಿ ಬಾಕನ । ನೆಲ್ಲಕ್ಕಿ ದೀಪ ಹೊತ್ತಿ
ಗ್ಯಾನ ಮಾಡುವೆ ನಿನ್ನ ಅವ್ವ ಕಾವೇರಿ ॥

ಹಕ್ಕಿಗ ಎಚ್ಚರಾಗಿ । ಕೋಗಿಲೆ ಹಾಡಿಕೆ ಮುಂದೆ ।
ದೀಪ ಬೆಳ್‌ಗುವೆ ನಿಂಗೆ ಅವ್ವ ಕಾವೇರಿ ॥
ನೆಲ್ಕಕ್ಕಿ ದೀಪದ ಗೂಡ್‌ಲಿ । ಕಾವೇರಿ ತೀರ್ಥ ನಿತ್ಯ ।

ಪವಿತ್ರ ಕುಂಡಿಕೆನ । ಕಾವೇರಿ ತೇರ್ಥ ಸತ್ಯ ॥
ಬ್ರಹ್ಮಗಿರಿ ಕೊಂಬು ಕೊಡಿಂದ ಕಣ್ಣ್ ಹಾಯ್‌ಸಿರೆ
ತೇಲ್‌ದಂಗೆ ಕಾಂಬೊದು ನೀಲ ಕಡಲ್ ॥
ಸುತ್ತು ಆವರ್‌ಸಿದ ಸಹ್ಯಾದ್ರಿ ಸಾಲ್‌ಲಿ
ಎದ್ದ್‌ನಿತ್ತ ಮುನಿಸ್ಥಾನ ಬ್ರಹ್ಮಗಿರಿಲಿ ॥

ಪೂರ್ವಕಾಲಂದ ಇಂದಿಗೆ ಮುಟ್ಟ ನಿತ್ಯ
ಹಸ್‌ರ್‌ನ ಕಣ್ಣ್ ಮನ್‌ಸ್ ತಣ್‌ಸುವ ನೆಲೆ
ಮೃಗಪಕ್ಷಿಗಳಿಗೆ ಸೊಗ್‌ಸಾದ ಮರಕಾಡ್
ಮುನಿಗಳ ತಪಸ್‌ಗೆ ನೆಮ್ಮದಿ ಈ ಸನ್ನಿಧಿ ॥

ಬ್ರಹ್ಮನ ಮಾನಸ ಪುತ್ರಿ । ಲೋಪಾಮುದ್ರೆ ಹುಟ್ಟಿದ ಬ್ರಹ್ಮಗಿರಿ
ಕವೇರ ಮುನಿ ದತ್ತ್ ಮಗ್‌ಳಾಗಿ ಬೆಳ್ದ ಕಾವೇರಿ ॥
ಮೂಡು ಬೊಳಿ ಬಾಕನ ಎತ್ತುವೆ ಶುಭದಾರತಿ ॥
ದೀಪದಾರತಿ ನಿನಗ್ಯಾನಲಿ । ಅವ್ವ ಕಾವೇರಿ ॥

ಎತ್ತ ನೋಡ್ರು ಸಾಲ್ ಬೆಟ್ಟಗ । ಬಗ್ಗಿರೆ ಬೀಳುವಂಗೆ
ನಿತ್ತ್ ನೋಡ್ರೆ ಆಕಾಶಕೆ ಏಣಿ ಹತ್ತುವಂಗೆ ॥
ಮೆಟ್ಲ್ ಐನೂರು ಹತ್ತುದೆ ಸ್ವರ್ಗದದಾರಿ ।
ಚಾರಣ ಏರಿದಂಗೆ ತಾದು ಜನಕೆ ಕುಸಿ ॥

ಜಲರೂಪಿಣಿಗೆ ಬಾಗಿನ । ತ್ರಿವೇಣಿ ಸಂಗಮಲಿ
ಹಿರಿಯವ್‌ಕೆ ಪಿಂಡ ಪ್ರದಾನ ಭಗಂಡಕ್ಷೇತ್ರಲಿ ॥
ಲೋಪಾಮುದ್ರೆ ಉದ್ಭವಿಸುವ ಕುಂಡಿಕೆ ಕಲ್ಯಾಣಿ
ತುಲಾ ಮಾಸಲಿ ಕೋಟಿ ಜನಕೆ ಪುಣ್ಯಕ್ಷೇತ್ರ ತಲಕಾವೇರಿ ॥

ಮಂಗಳಂ ಜಯ ಮಂಗಳಂ । ಅವ್ವ ಕಾವೇರಿ ।
ತ್ರಿವೇಣಿ ಸಂಗಮ ಕುಂಡಿಕೆ ದರ್ಶನ ಪಾಪನಾಶಿನಿ
ಮೂಡು ಬೊಳಿ ಬಾಕನ ನೆಲ್ಲಕ್ಕಿ ದೀಪ ಹೊತ್ತಿ
ಗ್ಯಾನ ಮಾಡುವೆ ನಿನ್ನ ಅವ್ವ ಕಾವೇರಿ ॥

* * * * *

ಮುಂಗಾರ್ ಫಸಲ್

ಮುಂಗಾರ್ ಮಳೆಗಾಲ ಬಾತ್‌ನೋಡಿ
ತಿನ್ನ್‌ವಂತ ಹಣ್ಣ್‌ಗಳ ತಾತ್‌ನೋಡಿ॥

ಚೋಳಿಹಣ್ಣ್ ಪೇರ್ಲ ಹಣ್ಣ್ ಕರ್ಮಂಜಿ ಹಣ್ಣ್ ।
ಮಜ್ಜಿಗೆ ಹಣ್ಣ್ ಮಡ್ಕೆ ಹಣ್ಣ್ ಮಾವ್‌ನ ಹಣ್ಣ್ ।

ಹಡ್ಗುಳಿ – ಕಿತ್ತುಳಿ – ಮಾದುಳಿ – ಹೊಟ್ಟುಳಿ
ತಿಂಬಕಂತು ಆದುಲೆ ಇದ್ ಬರೀ ಮಳೆಗಾಲ

ಬಾತ್ ಬಾತ್ ಮಳೆಗಾಲ ಏನೆಲ್ಲಾ ತಾತ್ ನೋಡಿ
ಬ್ಯಾಜರ ಬ್ಯಾಡ ನೀವ್ರುಗೆ । ನಿಮ್ಮ ಚೀಲಭರ್ತಿ ॥

ಜ್ಯೂಸ್, ವೈನ್, ಜ್ಯಾಂ ಬೇಕೆ ಬೇಕು ಬ್ಯಾಸಿಗೆಗೆ
ಎಚ್ಚರಿಕೆಲಿ ಮಾಡಿ ಮಡ್ಕಣಿ ಪುರ್‌ಸೊತ್ ಇರ್‌ಕನ ॥

ತಯಾರ್ಸಿ ಮಡ್ಗಿ ಹೆಣ್ಮಕ್ಕ ಪುರ್‌ಸೊತ್ ಇರ್‌ಕನ.........
ಬ್ಯಾಸಿಗೆಗೆ ಆದು ಅದ್ । ನೆಂಟ್ರ್ ಬಾಕನ ॥

ಕಂಯ್ಯುಳಿ ಜ್ಯಾಂ । ಫೈನಾಪಲ್ ಜ್ಯಾಂ
ಕಿತ್ತುಳಿ ಜ್ಯೂಸ್ । ನಿಂಬುಳಿ ಜ್ಯೂಸ್

ಎಚ್ಚರಿಕೆಲಿ ಮಾಡಿ ಮಡ್ಕಣಿ ಪುರ್‌ಸೊತ್ ಇರ್‌ಕನ ॥
ಏನಾದ್ರ್ ಮಾಡ್ಕಂಡಿರಿ । ಸುಮ್ಮನಂತೂ ಕೂರ್‌ಬ್ಯಾಡಿ ॥

ಗೊರ್ಗ ಆದ್ರು ಆದು ಕುಕ್ಕೆ ನಾದ್ರು ನೈಯ್ಕಂಡಿರಿ
ಹೊತ್ತು ಹೋದೆ............ಗೊತ್ತಾದುಲೆ ನೀವ್‌ಗೆ ! ।

ಮಳೆಗಾಲಂತೂ ವಳ್ಳದಪ್ಪಾ । ಏನೇನ್ ತಾತ್‌ನೋಡಿ ।
ತಿಂಬಕಂತೂ ಕಣ್‌ಲೆ ಕೊಡಿ । ಎಸಂಡ್‌ಮಿೂನ್! ।

ಆದೇಲೆ ತಿಂಬಕಂತೂ ಹಲ್ಸ್‌ನ ಹಣ್ಣ್‌ನ ।
ಕೂಗೆಲೆ ಹಿಟ್ಟ್ ಮಾಡ್ರೆ ಮಾತ್ರ ತಿಂದೆ ಹೋದೆ !

ಕಣ್‌ಲೆ ಗೈಪು ಅಕ್ಕಿರೊಟ್ಟಿ । ತಿಂದ್ ನೋಡಿಯಾ !
ಕೆಂಡದ ಒಲೆಲಿ ಕಾಯ್ಸಿದ ಪೊಕ್ಕುಳ ರೊಟ್ಟಿನಾ

ಆಟಿ ಪಾಯ್ಸ ಕಾಡ್‌ಜೇನ್ । ಹಸ್‌ನ ತುಪ್ಪಾ
ಕೆಸ್‌ನ ಹಿಟ್ಟ್ ಪತ್ರೊಡೆ ತಿಂದ್ ನೋಡಿಯಾ.........

ಬೆಡ್‌ಗ್‌ನ ಸಾರ

ಹಸ್‌ರ್ ಮಲೆಕಾಡ್ ಬೆಟ್ಟಂದ
ಇಳ್‌ದ್ ಹರ್‌ದೊಳೊ ಕವಲ್ ನದಿಗ
ಪ್ರತಿ ಬಿಂಬಿಸಿದೆ ನದಿ ಕಾವೇರಿ
ಬುಡದೆ ಸೊರಿವ ಮಳೆನು
ಬಾನ್ ಮುಟ್ಟುವ ಮರಗಳೂ
ಪ್ರಕೃತಿ ಪೊರ್ಲ್‌ನ ನೆಲೆಬೀಡ್
ಇದ್ ಕಾವೇರಿನ ತೌರೂರು

ಇದೇ ಕೊಡಗ್‌ನ ಬೆಡಗ್‌ನ ಸಾರ
ಶೂರ ವೀರರ ನಾಡ್ ತೇಳ್‌ವ ಹೆಸ್‌ರ್
ಮಲೆ ಕಾಡ್‌ಲಿ ನಡ್‌ದುಟ್ಟು ಆನೆ ಹುಲಿ ಬ್ಯಾಟೆ
ಶೂರ ವೀರರ ನಾಡ್‌ನ ಕೊಡಗ್ ಇದ್
ದಣ್‌ದ ದೇಹಕೆ ಬ್ಯಾಜರದ ಮನ್‌ಸಿಗೆ
ಕುಸಿ ಕೊಟ್ಟದೆ ಈ ಪ್ರಕೃತಿ ಪೊರ್ಲ್
ಇದ್ ಕಾವೇರಿನ ತೌರೂರು.

ದುಡಿವ ಕೈಗ ಮಲೆ ನಾಡ್‌ಲಿ
ದೇವರ ಭಯಭಕ್ತಿ ಆರಾದನೆಲಿ
ಸಂಸ್ಕೃತಿ ಕಲೆ ಬಾಸೆ ಸಂಪ್ರದಾಯಗ
ಮನರಂಜನೆಗೆ ಮೊದುವೆ ವಾಲಗದ ಕೊಣ್ತ
ಸಾಕ್ಷಿ ಆತ್ ಉಡುಪುನ ಪರಂಪರೆ
ಜನಪದ ಪರಂಪರೆ ಈ ಮಣ್ಣ್‌ಗಂಟಿದ ಹಕ್ಕ್‌ತೇಳ್ವಂಗೆ
ಇದ್ ಕಾವೇರಿನ ತೌರೂರು ॥

ಆಳ್ದೊಯಿಲ್ಲಿ ಚೋಳ, ಚೆಂಗಾಳ್ವ, ಕೊಂಗಾಳ್ವರ್
ಇಕ್ಕೇರಿ, ಹಾಲೇರಿ, ಆಂಗ್ಲರ್ ॥
ಬುಟ್ಟ್ ಹೋದೊ ಅವರ ಕಲೆ ಸಂಸ್ಕೃತಿನ
ಇಂದಿಗೂ ಶಾಶ್ವತ ಅದ್ ಕಲೆನ ಹೆಸ್‌ರ್‌ಲಿ
ದೇವರ ಭಕ್ತಿ ಅಂಬಲದಾಟಗ
ಕಲೆಯ ಬೆಡ್‌ಗಿಗೆ ಸಾಕ್ಷಿ ಆತ್ ॥
ಇದ್ ಕಾವೇರಿನ ತೌರೂರು ॥

ಗಿರಿ ಕುಂದ್

ದೂರದ ಗಿರಿ ಕುಂದುಗಳೆ
ಪ್ರಕೃತಿಯ ಮುಕುಟಗಳೇ ॥
ಯುಗಯುಗಂದ ಮೌನಲಿ
ಬಾನಿಗೆ ಏರುವ ಆಶೆಲಿ ॥

ಓಡುವ ಮೋಡದ ಹತ್ರ
ಬೀಸುವ ಗಾಳಿನ ಮುಟ್ಟಿಕೆ ॥
ಹರಿವ ಜಲ ತೊರೆಲಿ
ನೀರ್‌ಲಿ ಮುಳ್‌ಗುವ ಆಶೆಲಿ ॥

ಚಿಲಿಪಿಲಿ ಹಾಡ್‌ವ ಹಕ್ಕಿನ ರಾಗ ।
ಭಗವಂತನ ಹೃದಯ ತಟ್ಟಿರೆ ॥
ಮುಟ್ಟಿಕೆ ಹೋದ ಹಕ್ಕಿಗೆ।
ಹರಿನಾಮ ಪದ ಕೇಳಿ ಕುಸಿಯಾತ್ ।

ಮೋಡಂದ ಬೀಳ್‌ವ ಎಲ್ಲ ಹನಿಗ
ಭೂಮಿ ಸೇರಿಕೆ ಮುಂದೆ ॥
ನಾವೆಲಿ ಕುದ್ದ್ ನಾವೆಲ್ಲಾ ।
ನಾಮನ ಹಾಡ್‌ತಾ ಸಾಗೊನಾ ॥

* * * * *

ಕೊರ್‌ತೆ

ಪ್ರೀತಿ ವಿಶ್ವಾಸ ಒಗ್ಗಟ್ಟ್‌ನ ಕೊರ್‌ತೆ
ಜೀವನ ನಡ್ಸುದು ಹೆಂಗೆ ಕುಟುಂಬಲಿ ?

ಸಾಲ ಸೋಲ ಮಾಡಿ ಮಳೆ ಬಿಸ್‌ಲ್‌ಲಿ
ಸೋತ್ ದುಡ್‌ದ ರೈತನ ಶ್ರಮಕೆ ಪಲಯೆಲ್ಲಿ ?

ಮನ್‌ಸಿಗೆ ಶಾಂತಿಯಿಲ್ಲೆ ಶಾಶ್ವತ ಪರಿಹಾರಯಿಲ್ಲೆ
ಯಾಕಿಂತ ಹೀನಾಯ ಸ್ಥಿತಿ ಬಾತ್ ?

ಜೀವನಲಿ ಘರ್ಷಣೆ ದುಕ್ಕಂದ ಸೋತ್
ಮುಕ್ತಿ ಇಲ್ಲೆನಾ ತೇಳ್‌ವ ಮಂದಿ ಹೆಚ್ಚಾಗೊಳೊ ॥

ಒಂಟಿ ಜೀವನ ಸ್ಥಿತಿ ಕುಟುಂಬಲಿ
ಜೀವನ ನಡ್ಸಿಕಾಗದೆ ಸುಕ ಶಾಂತಿಯಿಲ್ಲದೆ

ಪ್ರೀತಿಯಿಲ್ಲದ ಜೀವನ ಬದ್‌ಕ್ ನಡ್ಸಿಕಾಗದೆ
ದುಕ್ಕಲಿ ಜ್ಞಾನ ಹಿಂದೆ ಹಾಕ್‌ಕನ

ಸೇವೆಲಿ ದೇವ್‌ರ್‌ನ ಕಾಣೊಕು
ಶಕ್ತಿಲಿ ಪ್ರೀತಿನ ಕಾಣೊಕು ॥

* * * * *

ಮನ್ಸ್‌ಲಿ

ಮನ್ಸ್‌ಲಿ ಮಂಜ್ ಕವ್‌ದಿರ್‌ಕನ
ಸಂಸಾರದ ಗೋಳು ಬೇಕಿಲ್ಲೆ ॥

ಮಂಜ್ ಮೋಡದ ಚೆಳಿ ನೊಡುಲೆ
ಯಾರಿಗು ಯಾರ್‍ನ ಕಾಂಬೊದುಲೆ ॥

ಕಾಡ್‌ಲು ಬೆಟ್ಟಲು ಮೋಡಂದ ಬಿದ್ದ ।
ಹನಿಕಂಡ್ ಉತ್ತ್ ಬಿತ್ತಿದ ರೈತ ॥

ಉತ್ತ್‌ಬಿತ್ತಿದ ರೈತ ದಾರಿಯುದ್ದಕಂಡ್ ।
ಪಯಣ ಸಾಗಿತ್ ನಿದ್ದೆನ ಬುಟ್ಟ್ ॥ ಮನ್ಸ್‌ಲಿ ॥

ಪಯಣದ ಅಲೆಲಿ ಹೂವರಳಿ ಬೆಳ್ದ ಬಾಳ್
ಪಯಣ ಸಾಗ್‌ಕನ ಮನ್ಸ್ ಅರ್‌ಳಿತ್ ॥

ಕರಿಮೋಡದ ಅಲೆಲಿ ಮಳೆ ಬಾನ್‌ಲಿ ॥
ಎತ್ತ್‌ಗಳ ಒಡೆಯ ರೈತ........

ನೀ ಉತ್ತ್ ಬಿತ್ತಿದ ಫಸ್‌ಲ್ ।
ನಾವ್‌ಗೆಲ್ಲಾ ಕರುಣೆನ ಕೂಳು ॥

ತಂಗಾಳಿ ಮಳೆಗಾಳಿ ಸುರಾಗಿ
ಹನಿ ಹನಿ ಮಳೆಬಂದ್ ಭೂಮಿ

ಹದ ಆಕನ ಬಿತ್ತಿದ ರೈತ ಅವನ ಕೂಳು ।
ಮಂಜ್ ಮುಸ್‌ಕಿದ ಮೋಡದ ಮಳೆಗೆ

ಸಾಗಿರೆ ದಾರಿನೆ ಕಾಂಬೊದುಲೆ ॥
ನೆಲಕೆ ಮಳೆಯಾದರೇನ್ ಚೆಳಿ ಬಿಸ್‌ಲಾದರೇನ್ ?

ಮನ್ಸ್‌ಲಿ ಮೋಡದ ಮಂಜ್‌ನಂಗೆ
ದಾರಿ ಎಲ್ಲೂ ಕಾಂಬೊದುಲೆ ॥ ಮನ್ಸ್‌ಲಿ ॥

* * * * *

ತೊಡಕ್

ಹಸ್‌ರ್ ಬಿತ್ತಿ ಉಸ್‌ರಾಡ್ದೊ
ಜಡೆ ಬೆಳ್‌ಸಿ ಹೂಮುಡ್ದೊ
ನಷ್ಟ ಕಷ್ಟ ರೈತಂಗೆ ಆತ್ ।
ಕೃಸಿ ಏನೇ ಮಾಡ್ರೊ
ತೊಡಕ್ಕುಟ್ಟು ಅಲ್ಲಿ ॥

ಕೃಷಿ ವ್ಯವಸಾಯ ಯಾಕೆ ?
ಊರ್‌ಬುಟ್ಟ್ ಹೊರ್‌ಟ್
ನೌಕರಿ ಹುಡ್‌ಕಿಕೆ ಊರ್‌ಬುಟ್ಟ್
ನಗರ ಸೇರ್ದೊ ಸಾಕಸ್ಟ್ ॥
ಎಲ್ಲವು ನಗರ ಸೇರ್ದೊ ॥

ಮದುವೆ ಆದ್ರೊ ಸೆರಿ
ಪೂಜೆ ಆದ್ರೊ ಸೆರಿ
ಅಬ್ಬರದ ಬ್ಯಾಂಡ್‌ವಾದ್ಯ
ಎದೆ ನಡ್‌ಗ್‌ಸ್‌ವ ಡಿ.ಜೆ. ಸೌಂಡಿಗೆ
ಮದುವೆ ಗಾದರೂ ಹೋಕು ಯಾಕೆ ?

ಗಡ್‌ಸ್‌ನ ಮೈಕಾಸುರನೆ ಯಾಕೆ ?
ಸೌಮ್ಯ ನಾದ ಇಲ್ಲೆನಾ
ಕಲೆಗೆಲ್ಲಿ ಗೌರವ ಇಂದ್ ?
ಕಲೆ ನಾದವಾದ್ಯ ಯಾಕೆ ಬೇಕಾಗಿ ?
ಇಂಪುನ ನಾದ ಯಾಕಿಲ್ಲೆ.......?

* * * * *

ರೈತ

ಓ ರೈತ ನಿಂಗೆ ಕಾಂಬೊದುಲೆನಾ
ಹಗ್‌ಲಿರ್‌ಳ್ ಉರಿಬಿಸ್‌ಲ್ ಮಳೆ ॥

ನಿತ್ಯ ಹೊತಾರೆ ಎದ್ದಂಗೆ ಹೊಲದೇ ಗ್ಯಾನ
ಇಂದ್ ನನ್ನ ಎತ್ತ್‌ಗಳಿಗೆ ಏನ್ ಕೊಡ್‌ದುತೇಳಿ ॥

ಹೊತಾರೆ ಯೆದ್ದ್ ಕೊಟ್ಟಿಯ ಬಿಸಿ ಗಂಜ್‌ಳ
ಮಧ್ಯಮಧ್ಯ ಕೊಟ್ಟಿಯ ಎತ್ತ್‌ಗಳಿಗೆ ಹುಲ್ಲ್ ನೀರ್ ॥

ಎಲ್ಲಿಟ್ಟು ನಿನ್ನ ಗ್ಯಾನ ? ಆಧುನಿಕತೆನ
ಸೋಂಕು ನಿಂಗಿಲ್ಲೆ । ಪರಿಸರದ ಕಾಳಜಿ ಬೇಕಿಲ್ಲೆ ॥

ಓ ರೈತನೆ, ಹೊಲನೆ ನಿನ್ನ ಅರಮನೆ
ಎತ್ತ್‌ಗಳೆ ನಿನ್ನ ವಾಹನ । ಏನ್ ಬೆಳ್ಸುದು

ವರ್ಷ ವರ್ಷ ಏನ್ ಬೆಳೆ ತೆಗಿಯೊದು
ವರ್ಷದ ಸುರುಗೆ ನಿಂಗೆ ಸುಗ್ಗಿ ಬಾದು ॥

ಆಧುನಿಕತೆ ಸೋಂಕು ನಿಂಗೆ ಬ್ಯಾಡ
ಪರಿಸರದ ಕಾಳಜಿ ಬೇಕಿಲ್ಲೆ..........

ಎಲ್ಲಾ ನಿನ್ನಲ್ಲೇ ಅಡ್‌ಂಗಿಟ್ಟು ಓ ರೈತನೆ,
ಹೊಲವೇ ನಿನ್ನ ಅರಮನೆ ಎತ್ತ್‌ಗಳೆ ನಿನ್ನ ವಾಹನ.........

ನಿನ್ನ ಆತ್ಮ ಎಷ್ಟ್ ಶುದ್ಧ............
ಓ ಪಾಪದ ರೈತನೆ..................

ಎಲ್ಲವರ್ರ ಹೊಟ್ಟೆ ತುಂಬುಸ್‌ವ ನೀನ್
ನೀನ್ ಇರದಿದ್ದರೆ ಲೋಕದ ಜನಕ್ಕೆಲಿ ಬದ್‌ಕ್ ?
ಆಡಂಬರದ ಬದ್‌ಕ್‌ಗು ಬೇಕ್
ನಿನ್ನ ಗೈಮೆ–ಯಿರದಿದ್ದರೆ ಹೆಂಗಿರೊಕು ಜನ ?

* * * * *

ಸ್ಥಿತಿಗತಿ ಅಂದ್ ಇಂದ್

ಮಲೆನಾಡ್ ಕೊಡ್ಗ್‌ತೇಳುವ ಕಾಡ್ ಎಲ್ಲ್ಯುಟ್ಟು ?
ಇಂದ್ ಕೊಡ್ಗ್‌ಲಿ ಕಾಡ್ ಎಲ್ಲ್ಯುಟ್ಟು ॥
ಮಳೆಗಾಲ ಕೊಡ್ಗ್‌ನ ಕೃಷಿ ಕಾರ್ಯ್‌ಲಿ ಭಿನ್ನತೆ ಇಲ್ಲ್ಯುಟ್ಟು ॥
ಸೊರಿವ ಬಾರಿ ಜಡಿ ಮಳೆಲಿ ಶ್ರಮಿಸುವ ರೈತಂಗೆ
ಫಲ ಎಲ್ಲ್ಯುಟ್ಟು ಇಂದ್ ಫಲ ಎಲ್ಲುಟ್ಟು ?
ಯಾಕಾದ್ರೂ ಈ ದನ ಬೇಕಪ್ಪ ದನ ನೋಡ್ವ ಕೆಲ್ಸ ಬೇಕಿಲ್ಲೆ ॥
ತೇಳುವ ಮಂದಿ ಇಂದ್ ಬೇಕಷ್ಟ್ ॥
ರೈತನ ಮಾತ್ ನಿಜನುತಾದೆ । ದನ ಮೇಸಿಕೆ ಜಾಗ ಎಲ್ಲ್ಯುಟ್ಟು ?
ಇಂದ್ ಬಾಣೆ ಜಾಗ ಎಲ್ಲ್ಯುಟ್ಟು ॥ ಎಲ್ಲಾ ಕಾಫಿ ತ್ವಾಟ ಆಗುಟ್ಟು ॥
ದುಡ್ಡು ಕೊಟ್ರೆ ಪ್ಯಾಟೆಲಿ ಗೊಬ್ಬರ ಉಟ್ಟುತ್ತೇಳುವ ಮಂದಿ ರೈತರ್ ಇಂದ್ ಬೇಕಷ್ಟ್॥
ಬ್ರಿಟಿಷ್ ಸಂಸ್ಕೃತಿ ಮುಂದಿಟ್ಟ್ ವಿದ್ಯೆ ಕಲ್ತವು ನಾವು
ಎತ್ತುನು ಬ್ಯಾಡಾ –ಹಸ್‌ನೂ ಬ್ಯಾಡ ತೇಳುವ ಮಂದಿ ಸಾಕಷ್ಟ್ ॥
ಅಂದ್‌ನ ಕಾಲಲಿ ಹಟ್ಟಿಲಿ ಇರ್ತ್‌ದ್ದೊ ಹಿಂಡ್ ದನಗ ಕೊಡ್ತಿದ್ದೊ ಅವ್ಕೆ ॥ ಹಸಿಹುಲ್ಲು
ಬುಳ್‌ಗುಲ್ಲು ತೇಳಿ ॥
ದೊಡ್ಡವು ಮಕ್ಕಳು ಕೂಡಿ ದನ ಹೊಡ್ಕಂಡ್ ಹೋದುಬೆಟ್ಟಕ್ಕೆ ॥
ನೋಡ್ಕನ ಊರಿಗೊಂದು ಕಳೆಯಿತ್ತ್ ॥
ದನಗಳ ಕೊರ್‌ಳ್‌ನ ಮ್ಯೆಂಟೆನ ಸದ್ದ್
ಊರಿಗೆಲ್ಲ ಕೇಳ್‌ತ್ತಿತ್ತ್ ಊರಿಗೇ ಕೇಳ್‌ತ್ತಿತ್ತ್ ॥
ಒಟ್ಟಿಗೆ ವಾಟೆಕೊಳಲ್‌ನ । ಇಂಪ್‌ನರಾಗ ಕೆಮಿಗೆ ಮುಟ್ಟ್‌ತ್ತಿತ್ತ್॥
ಕೆಮಿಗೆ ಮುಟ್ಟ್‌ತ್ತಿತ್ತ್॥
ಗಂಟೆ ಇತ್ತ್‌ಲೆ ಅಂದ್ । ದನಗಳ ಮ್ಯೆಂಟೆನ ಸದ್ದ್ ಕೇಳ್‌ಕನ
ನಾಲ್ಕಂಟೆ ಹೂ ಅರಳ್‌ಕನ ।ಇಸ್ಕೂಲ್ ಮಕ್ಕಳ ಬುಡ್ತಿದ್ದೊ ॥

* * * * *

ಸ್ವತಂತ್ರ ಭಾರತ

ಸಾವ್ರಾರ್ ನದಿಗಳ ಹೆಸ್ರ್‌ಲಿ
ಸ್ವರ್ಗದ ನಾಮ ಪಡ್‌ದಾ ದೇಶ ಭಾರತ ॥
ಮಳೆಯಿಲ್ಲೆ । ಬಿಸ್‌ಲ್ ಕಾದದೆ
ಸಿಂಧೂ ಬಯಲ್‌ನ ಗತ ಇತಿಹಾಸದಂಗೆ ॥
ತೇಜಸ್ಸ್ ಕುಂದಿದ ಹಂಪಿನಂಗೆ ॥
        ಮೇರ್‌ಗಿಲಿಲಿ ರಕ್ಷಣೆಗೆ ವೀರರ ಕಾವ್‌ಲ್
        ಹಸ್‌ರ್ ನೆಲಲಿ ಸೈನಿಕರ ಯುದ್ದನೃತ್ಯ ॥
        ಬಾನ್‌ನ ಲೆಕ್ಕಿಸದೆ ಶಕ್ತಿ ಮಿೂರಿ ಹಾರ್‌ವ ವಿಮಾನಪಡೆ ।
        ಕಡ್‌ಲ್‌ನ ಅಲೆಗಳ ಮಿೂರಿ ಕಾಯ್‌ವ ನೌಕಾಪಡೆ ॥
        ಇದೇ ಸ್ವತಂತ್ರ ಭಾರತದ ಗುಟ್ಟುನ ಶಕ್ತಿ ಭಾರತಾಂಬೆಗೆ ॥
ವಿಂದ್ಯಾ ಅರಾವಳಿ ಹಿಮಾಲಯ ಪರ್ವತ
ಗಿರಿ ಶಿಖರಗಳ್‌ಂದ ತೊರೆಗ ನದಿಗ ಇಳ್ದ್ ॥
ಮರೆಯಕಾಗದ ಮಳೆಧಾರೆ ಆಗಿ ಸೊರ್ದ್ ।
ಹರ್ದ್ ಬೆಳೆವ ಹಸ್‌ರ್ ಈ ನೆಲಲಿ ॥
ಇದ್ ನಮ್ಮ ಸ್ವತಂತ್ರ ಭಾರತಲಿ ॥
        ಕೆಲವರ ತ್ಯಾಗ ಬಲಿದಾನ ಅಹಿಂಸೆಂದ
        ಸ್ವತಂತ್ರ ಪಡ್‌ದಾ ಈ ದೇಶ..............
        ಧರ್ಮ ಸಮಾಜ ಸಂಸ್ಕೃತಿ ಹೆಸ್‌ರ್‌ಲಿ
        ಹಲವು ಸ್ವರಗಳ ರಾಗ ಒಂದಾಗಿ ಕೂಡಿ
        ಹೊಸ ಇತಿಹಾಸ ಭಾರತಲಿ ॥
ಸ್ವಾತಂತ್ರದ ನೆನ್‌ಪುಲಿ ಜಾತಿ ಬ್ಯಾದ ಮರ್ತ್
ನಮ್ಮ ರಾಷ್ಟ್ರ ಧ್ವಜದೊಟ್ಟಿಗೆ ಒಂದಾಗಿ ಪೋಯಿ ।
ಯುವ ಶಕ್ತಿಗೆಲ್ಲ ಕೂಡಿ ನಡಿಯೊನ
ಬನ್ನಿ ನಾವೆಲ್ಲ ಒಂದಾಗಿ ಕೈಜೋಡ್ಸೊನ
ಬನ್ನಿ ಈ ಸ್ವತಂತ್ರ ಭಾರತಲಿ ॥

* * * * *

ನಾಡ್ ನಮ್ಮದ್

ಈ ನಾಡ್ ನಮ್ಮದ್ ಈ ಮಣ್ಣ್ ನಮ್ಮದ್ ।
ಇಲ್ಲಿ ಹರಿವ ನೀರ್ ನಮ್ಮದ್ ॥

        ಬೆವ್ರುರ್ ಹನಿ ಸೊರ್ಸಿ ದುಡ್‌ದಾ ಈ.........
        ನಾಡ್‌ನ ಹಸ್‌ರ್ ಸಿರಿ ನಮ್ಮದ್ ॥ಈ

ದೇಶನ ಕಾಯೊದು ಕುಂದು ಬೆಟ್ಟಗಾ
ಇಲ್ಲಿ ಹುಟ್ಟಿ ಹರಿಯೊದೆ ತುಂಗೆ ಕಾವೇರಿ ॥

        ಇಲ್ಲಿ ಬೆಳ್ದ ಹಸ್‌ರ್ ಸಿರಿ ನಮ್ಮದ್
        ಈ ನಾಡ್ ನಮ್ಮದ್ ಈ ಮಣ್ಣ್ ನಮ್ಮದ್ ॥

ಹಳೆಬೀಡ್ ಬೇಲೂರು ಶ್ರವಣ ಬೆಳ್‌ಗೊಳಾ
ಕಲೆಗಳ ತೌರೂರು ಈ ನಾಡ್‌ಲಿ ॥

        ಶೃಂಗೇರಿ ಕಾವೇರಿ ಧರ್ಮಸ್ಥಳಾ
        ಧರ್ಮ ಕಲೆಗಳ ನೆಲೆಬೀಡಿದ್ ॥

ಕುವೆಂಪು ಬೇಂದ್ರೆ ಮಾಸ್ತಿ ಬಾಳ್ದ................।
ಕವಿ.....ಕೋಗಿಲೆಗಳ ನಾಡ್ ನಮ್ಮದ್ ॥

        ಕನಕ ಪುರಂದರ ಸರ್ವಜ್ಞರ್ ।
        ಹಾಡಿ ಹರ್ಸಿದ ಈ ನಾಡ್ ನಮ್ಮದ್ ॥

ಭತ್ತ ಬೆಳೆವ ನಾಡ್ । ಬೆದ್‌ರ್ ಬೆಳೆವ ನಾಡ್
ಮದ್‌ರಂಗಿ ಬೆಳೆವ । ನಾಡ್ ನಮ್ಮದ್ ॥

        ಉದ್ದು ಬೆಳೆವ ನಾಡ್ । ದ್ರಾಕ್ಷೆ ಬೆಳೆವ ನಾಡ್ ।
        ಬಿಲ್ಪತ್ರೆ ಬೆಳೆವ ಮಲೆನಾಡ್ ನಮ್ಮದ್ ॥

ಇಲ್ಲಿ ನುಡಿವ ಕನ್ನಡ ಭಾಷೆ ನಮ್ಮದ್
ಕನ್ನಡದ ಮೂಲ ಅರೆಭಾಷೆ ನಮ್ಮದ್ ॥ ಈ ॥

* * * * *

ಹಚ್ಚೊನ ಹೊಸ ದೀಪನ

ನೆಲಲಿ ಪಲಯಿಲ್ಲೆತೇಳಿ
ಊರುಬುಟ್ಟ್ ಹೋಗ್‌ಬಡಿ
ಹಚ್ಚೊನ ಹೊಸದೀಪನಾ........ಯಿಲ್ಲಿ
ಬ್ಯಾದ ಬಾವ ಬ್ಯಾಡ ನಮ್ಮಲಿ..., ॥

ಕಾವೇರಿ ಪಯಸ್ವಿನಿ ಸಂಗೀತಲಿ
ಹೊಟ್ಟೆತುಂಬ ಉಣ್ಣುವಸ್ಟಾಗಿ
ಜನ್ಮದಾತೆ ಭೂಮಾತೆ ಒಡಲ್‌ಲಿ
ಸುಕಶಾಂತಿ ಶಾಶ್ವತಕಾಗಿ ॥

ನಾಡ್‌ಕಟ್ಟೊನ ಯುವ ಶಿಲ್ಪಿಗಳೇ
ಧರ್ಮ ಸಮಾಜ ಸಂಸ್ಕೃತಿ ತೇಳಿ
ಹೊಸ ಇತಿಹಾಸ ಪುಟಲಿ
ಕೂಡಿ ಸಾಗೊನ ಒಂದಾಗಿ ॥

ಮರದ ಬುಡ ಒಂದೇ ಕಾಡ್‌ಲಿ
ಕೊಂಬೆಗ ಹಲವಾಗಿ ಹರ್‌ಂಡಿ
ಶಿಲೆನ ಕಂಡ್ ಭೂಮಿಲಿ
ಕಲೆಯಾಗ್ನಿತ್ ರುಸಿವಾಣಿ ॥

ಸತ್ಯ ಶಾಂತಿ ಜ್ಞಾನದ ಸಾಗರಲಿ
ಹೊಸ ಇತಿಹಾಸ ಭಾರತಲಿ
ಮುನಿಗಳ ತಪಸ್‌ನ ರೂಪಲಿ
ಮೊಳ್ಗಿತ್ ನಾಕ್ ವೇದ ಅಂದ್‌ನ ಯುಗಲಿ ॥

ವಿಜ್ಞಾನ ಗೆದ್ದ್ ಬಂದ್
ಅಜ್ಞಾನ ಮೆಟ್ಟಿ ನಿತ್ತ್
ಹೊಸ ಭಾರತ ನಿರ್ಮಾಣಯಿಲ್ಲಿ
ಮಹಾತ್ಮರ ಚೈತನ್ಯದ ಪುಣ್ಯಭೂಮಿಲಿ॥

ಹರಿವ ಹೊಳೆನ ಕಂಡ್
ಉರಿವ ಸೂರ್ಯನ ನೋಡಿ
ಬರ್ದ್ದೊ ಆಧ್ಯಾತ್ಮದ ಕಾಂತಿನ ಯಿಲ್ಲಿ
ವ್ಯಾಸ ಕಾಳಿದಾಸ ಬರ್ದ ಸಾಲ್‌ಯಿಲ್ಲಿ ॥

* * * * *

ರೈತಗೀತೆ

ಹೊತಾರೆ ಮಳೆಗೆದ್ದ್
ಹರ ಹರ ಹೀ ಹಾಡುದೆ
ರೈತನ ರೈತ ಗೀತೆ ॥

ಹರಿಹರತೇಳ್ವ ಎರಡೆತ್ತ್‌ಗಳಿಗೆ
ನೇಗ್‌ಲ್ ನೊಗಕಟ್ಟಿ–ರಾಗಲಿ
ಹಾಡುದೆ ರೈತನ ರೈತಗೀತೆ ॥

ಹಾಡುದೆ ರೈತನ ರೈತಗೀತೆ
ತುತ್ತನ್ನಕ್ಕಾಗಿ ಆಗೀತೆ ॥
ಹಾಡುದೆ ರೈತನ ರೈತಗೀತೆ ॥

ಯಂತ್ರ ತಂತ್ರ ಬಂದ್‌ಆಧುನಿಕತೆ ಕಂಡ್
ಭೂಮಿನ ಹೂಡಿಕೆ ಎತ್ತುನುಯಿಲ್ಲೆ
ರಾಗಲಿ ಹಾಡಿಕೆ ರೈತನೂ.....ಯಿಲ್ಲೆ......॥

ಮಳೆನೆ ನಂಬಿ ಬದ್‌ಕುವ ರೈತಂಗೆ
ನೊಗನೇಗ್‌ಲ್ ಜೀವನಾಧಾರಕೆ ।
ಓ ರೈತಶಿವನೆ । ಭೂಮಿಗೆ ಒಡೆಯನೆ
ನೀ......ಹಾಡ್‌ದ ಗೀತೆನೆ ರೈತ...ಗೀತೆ ॥।

ಹೊತಾರೆ ಮಳೆಗೆದ್ದ್
ಹರ ಹರ ಹೀ ಹಾಡುದೆ
ರೈತನ ರೈತ ಗೀತೆ ॥

* * * * *

ಬೆಟ್ಟ

ಆಚೆ ಬೆಟ್ಟ ಈಚೆ ಬೆಟ್ಟನೊ ಶ್ರೀ ಕೃಷ್ಣಾ
ಕೊತ್ತಲ ಮೊಟ್ಟೆನೊ ಪಣಿಕೆರ್ ಮೊಟ್ಟೆನೊ ?
        ಕಾಡ್ ಮಲ್ಲಿಗೆ ಮಾಲೆಕಟ್ಟಿ ಕೃಷ್ಣಂಗಾರ್ತಿ ಮಾಡ್ಕನ
        ಕಾಂಬೊದದ್ ಕೊತ್ತಲ ಮೊಟ್ಟೆನೊ ಪಣಿಕೆರ್ ಮೊಟ್ಟೆನೊ ?
ಗೊಟ್ಟೆಹಣ್ಣ್ ಅಮೆಹಣ್ಣ್ ಕೊಯ್ದ್ ಬಾಕನ ।
ಕಾಂಬೊದದ್ ಬೆಟ್ಟತ್ ಮಲೆನೋ, ಈರುಳಿಬನನೊ ?
        ವಾಟೆ ಕಣ್ಲೆ ಕೊಯ್ದ್ । ವಾಟೆಕಟ್ಟ್ ಹೊತ್ತ್
        ಬರ್ತಾಯಿರ್ವ ದಾರಿಲಿ ಕಾಂಬೊದದ್ ಬೆಟ್ತೂರೊ?॥
ಬೆಟ್ತೂರ್ ತೇಳ್ರೆ ಹತ್ತಿಕಿಲ್ಲೆ ಇಳಿಯಕಿರ್ದು ।
ಈರುಳಿಬನ ಬೆಟ್ಟತ್ ಮಲೆ ಕಾಂಬೊದಲ್ಲಿಗೆ ॥
        ಬೆಟ್ತೂರ್ಲಿ ಮಳೆಬಂದ್ । ಮಂಜೆಕೊಲ್ಲಿಗೆ ಹರ್ದ್‌ಬಂದ್
        ಕುಂದು ಜಾರಿ ಕೆನೆಮಣ್ಣ್ ತುಂಬಿ ಹೋತಲ್ಲೊ ॥
ಜಾಗ ನೋಡಿ ಗಿಡನೆಡ್ ಜಲನೋಡಿ ಬಾಮಿತೆಗ್ಸ
ಏ ಹೈದಾ । ಮೂಡು ಬಡಗ ಸೀಮೆಯಂವನೆ ॥
        ಆಚೆಬೆಟ್ಟ ಈಚೆ ಬೆಟ್ಟನೊ ಮದೆನಾಡ್ ಝರಿ ಪಾರೆನೊ
        ಮದೆನಾಡ್ ಝರಿ ಪಾರೆನೊ । ಮೊದೂರಪ್ಪನ ನೆಲೆಸ್ಥಾನನೊ?
ಸುಬ್ರಮಣ್ಯ ನೆಲೆನಿತ್ತ ಬೆಟ್ತೂರೊ ।
ಕೃಷ್ಣದೇವ್ರು ನೆಲೆನಿತ್ತ ಅವುಂದೂರೊ? ॥ ಆಚೆ ॥
        ಕಾಡ್ ಮಲ್ಲಿಗೆ ಮಾಲೆಕಟ್ಟಿ ದಾಸಾಳ ಸಂಪಿಗೆ
        ಕೃಷ್ಣ ದೇವ್ರಿಗೆ ಗಂಧ ಧೂಪ ಆರ್ತಿ ಮಾಡ್ಕನಾ
ಕಾಂಬೊದದ್ ಕೊತ್ತಲ ಮೊಟ್ಟೆನೊ । ಪಣಿಕೆರ್ ಮೊಟ್ಟೆನೊ
ಗೊಟ್ಟೆ ಹಣ್ಣ್ ತಿಂಬಕೆ ಕುದ್ದ ಮಕ್ಕಳಗದ್ದೆನೊ । ?
        ಆಚೆ ಬೆಟ್ಟ ಈಚೆ ಬೆಟ್ಟನೊ ಶ್ರೀ ಕೃಷ್ಣಾ ॥
        ಕೊತ್ತಲಮೊಟ್ಟೆನೊ ಪಣಿಕೆರ್ ಮೊಟ್ಟೆನೊ ॥

* * * * *

ಹಬ್ಬದ ಕಟ್ಟ್

ಕಾಡಯ್ಯ ಬನಲಿ ಜೇನ್ ಬ್ಯಾಟೆ
ಊರ್ ಬನಲಿ ಕಿರ್ಕೋಳಿ ಬ್ಯಾಟೆ
ನಾವ್‌ಗ್ಯಾಕೆ ಸಿಕ್ಕುಲೆ ಈ ಬ್ಯಾಟೆ ? ॥

ಐಯ್ಯಪ್ಪ ಕಾಡ್‌ಲಿ ದೊಡ್ಡಜೇನ್
ಗೆರೆಗಾಡ್‌ಲಿ ಕೋಲ್‌ಜೇನ್,
ಕೊಯ್ಯಕ್ಯಾಕೆ ಆದುಲೆ ನಾವ್‌ಗೆ ? ॥

ಪೊಯ್ಯಗದ್ದೆಲಿ ಕೊಯ್ಲೆಮೀನ್
ಗೊಸ್‌ರ್ ಗದ್ದೆಲಿ ಮೊರ್‌ಟೆ ಮೀನ್
ಹಿಡಿಯಕ್ಯಾಕೆ ಸಿಕ್ಕುಲೆ ನಾವ್‌ಗೆ ? ॥

ತ್ವಾಟದೊಳಗೆ ಇಪ್ಪುಲಿ ಹಣ್ಣ್
ಬೇಲಿ ಕರೆಲಿ ರೆಂಜೊಳು ಹಣ್ಣ್
ಕೊಯ್ಯಕ್ಯಾಕೆ ಆದುಲೆ ನಾವ್‌ಗೆ ?

ಕರಿಮರ್‌ಲಿ ಮರದ ಅಳ್‌ಂಬು ।
ಕಲ್ಲ್‌ಗುಡ್ಡೆಲಿ ಕಲ್ಲ್ ಅಳ್‌ಂಬು ।
ಪ್ರಕೃತಿ ಕೊಟ್ಟ ಪೊರ್ಲು ಎಲ್ಲ್ಯುಟ್ಟು ?॥

ಹೊಳೆಕರೆಲಿ ಕಣ್‌ಲೆ ಬ್ಯಾಟೆ ।
ಬಾಣೆ ಮೂಲೆಲಿ ಕೂಮೆಣ್ಣ್ ಬ್ಯಾಟೆ ।
ತೋಡುವಳಗೆ ಎಸಂಡ್ ಬ್ಯಾಟೆ ಯಾಕೆ ಈಗಿಲ್ಲೆ?......॥

* * * * *

ಬೆದ್‌ರ್

ಬೆಳ್‌ದದೆ ಬೆದ್‌ರ್ ಎಲ್ಲೆಂದರಲ್ಲಿ
ನೋಡಿಕೆ ಪೊರ್ಲು ಹೊಳೆಕರೆಗಳ್‌ಲಿ ॥
ಜನಕೆ ಬೇಕ್ ಬೆದ್‌ರ್
ಶುಭಾಶುಭ ಕಾರ್ಯಕು ಬೇಕೆಬೇಕ್ ॥

ಮನೆಅಂಗಳಲಿ ಬೇಕ್‌ಕಂಬ
ನೆಡಿಕೆ ಮೊದುವೆಲಿ ಚಪ್ಪರಕಂಬ
ಬೇಲಿ ಕಟ್ಟಿಕು ಬೆದ್‌ರ್ ।
ಚಪ್ಪರ ಹಾಕಿಕೂ ಬೆದ್‌ರ್ ॥

ಮಳೆಗಾಲ ಎಳೆ ಬೆದ್‌ರ್‌ನ
ಕೊಡಿಕಣ್‌ಲೆ ತಿಂಬಕಾದು ಅಕ್ಕಿರೊಟ್ಟಿಗೆ ॥
ಸೌದೆ ಒಲೆ ಕೆಂಡದ ರೊಟ್ಟಿಗೆ
ತಿಂಬಕೆ ಯಾಗೊಳು ಸಿಕ್ಕುದಾ ನೀವ್‌ಗೆ

ತಿಂಬಕೆ ಸಿಕ್ಕಿಕಿಲೆ ಯಾಗೊಳು
ಬನ್ನಿ ಮಳೆಗಾಲ ನೆಂಟ್ರಾಗಿ ಕೊಡ್ಡಿಗೆ ॥

* * * * *

ಮಲ್ಲಿಗೆ

ಮಲ್ಲಿಗೆ ನೀನ್ ಎಲ್ಲಿಗೆ ?
ಬೇಕ್ ದೇವರ ಮುಡಿಗೆ ॥
ಚುಂಚುಂ ಮಂಜ್‌ನ ಹನಿಗೆ
ಅರ್‌ಳ್‌ದು ಬ್ಯಾಗ ಮಲ್ಲಿಗೆ ।
ಹಸ್‌ರ್ ರಾಶಿಲಿ ಅರ್‌ಳ್‌ರೆ
ಚೆಲ್ಲಿದ ಮೊಸ್‌ರ್‌ನಂಗೆ
ಗಾಧೆ ಯಾಗೊ ಆಗುಟು
ಬಯಲ್ ಸೀಮೆನ ಮಾರುದ್ದ ಜಡೆಗೆಳತಿ
ಬಾ ನಮ್ಮ ಮಲೆನಾಡ್ ಸೀಮೆಗು ॥
        ಮಲ್ಲಿಗೆ ನೀನ್‌ಎಲ್ಲಿಗೆ ?
        ಬೇಕ್ ದೇವರ ಮುಡಿಗೆ
        ಹೊತಾರೆ ಮಂಜ್‌ನ ಹನಿಗೆ
        ಅರ್‌ಳ್‌ದು ಬ್ಯಾಗ ಮಲ್ಲಿಗೆ ॥
ಮಲ್ಲಿಗೆ ತೇಳ್ರೆ ಸಾಕ್
ದಿನಾ ಪೂಜೆಗೆ ಬೇಕ್ ।
ನೆಟ್ರೆ ಅಂಗಳಲಿ ಬೇಕಸ್ಟ್
ಮಂದಿಗೆ ಆದು ಸಾಕಸ್ಟ್ ॥
        ಹಾರ ಕಟ್ಟಿರೆ ಸಾಕ್
        ಅದರ ರೇಟ್ ದುಪ್ಪಟ್ಟ್ ॥
        ಹಬ್ಬ ಮದುವೆಗು ಬೇಕ್
        ದೇವರ ತೇರಿಗೂ ಬೇಕ್ ॥
ದೇವಿ ಮುಡಿಗು ಬೇಕ್ ॥
ಮಾರುದ್ಧ ಜಡೆಲು ಇರೋಕು
ಬಯಲ್ ಸೀಮೆನ ಗೆಳತಿ ಮಲ್ಲಿಗೆ
ಬಾ ನಮ್ಮ ಮಲೆನಾಡ ಸೀಮೆಗೆ ॥

* * * * *

ಪಚ್ಚೆಸಿರಿ

ನಾಕ್‌ನಾಡ್ ಅರಮನೆ ಪವಿತ್ರ ಪಾಡಿಲಿ॥
ಹಾಲೇರಿ ಅರಸರ ಭೂಮಿಲಿ ಹುತ್ತೆರಿ ॥

ಕೊಡಗ್‌ನ ಪಚ್ಚೆಸಿರಿ ನೆತ್ತಿಗೇರಿ ॥
ಮಲ್ಲಳ್ಳಿ ಜಲಪಾತ ನೋಡುಅಲ್ಲಿ ॥

ಲೋಪಾಮುದ್ರೆ ಕಾವೇರಿ ನದಿಯಾಗಿ
ದಕ್ಷಿಣದ ಗಂಗೆತಾಯಿ । ತಲಕಾವೇರಿ ॥ ನಾಕ್ ॥

ತ್ರಿವೇಣಿ ಸಂಗಮ ಭಗಂಡಕ್ಷೇತ್ರಲಿ ॥
ಭಗಂಡೇಶ ನೆಲೆನಿತ್ತ ಪುಣ್ಯಕೇತ್ರಲಿ ॥

ಪ್ರವಾಸಿಗರ ತಾಣಗ ಕುಂದು ಬೆಟ್ಟಲಿ ॥
ದಸರ ಮನರಂಜನೆ ಮಡಿಕೇರಿಲಿ ॥

ಮದ್ದ್‌ಗಿಡ ಭಂಡಾರ ಪುಷ್ಪಗಿರಿಲಿ।
ನಾಡ್ ಮದ್ದ್‌ಗಿಡಗ ಸಿಕ್ಕುದು ಅಲ್ಲಿ ॥

ಕೊಡಗ್‌ನ ಪಚ್ಚೆಸಿರಿ ನೆತ್ತಿಗೇರ್‌ಕನ
ಕಾಂಬೊದು ಧುಮ್‌ಕುವ ಜಲಪಾತಗ ॥

ಹಿಂಗಾರ್ ಮಳೆ

ಹಿಂಗಾರ್ ಮಳೆಬಂದ್ । ಕರಿಮೋಡ ಕವ್‌ದ್ ಕಂಡ್ ।   ಮಾಯದಂತ
ಗಾಳಿ ಮಳೆ । ರಬಸಾಗಿ ಜಡಿ ಮಳೆ ।
ಗುಡ್‌ಗಿ ಗುಡ್‌ಗಿ ಸಿಡ್ಲ್ ಹೊಡ್ದ್ । ಭೂಮಿ ನಡ್‌ಗಿತ್ ।
ಭೂಮಿ ನಡ್‌ಗಿದ ಸದ್ದಿಗೆ ಜನ । ಹೆದ್‌ರಿ ನಡ್‌ಗಿದೊ ॥
        ಮಾಯದಂತ ಜಡಿಮಳೆಗೆ । ಮಾನಿಕರೆ ಬರೆಜರ್ದ್ ।
        ಜೇಡಿಮಣ್ಣ್ ಕ್ಯಾತರೆ ಮಣ್ಣ್। ವೊಂದಾಗಿ ಕೂಡಿ ಬಂದ್ ॥
        ಕಟ್ಟಿದ ಕೆರೆ ಕಟ್ಟೆ ಒಡ್ದ್ ಮೀನ್‌ಗೆಲ್ಲ ವೊಕ್ಕಿ ಹೋಗಿ।
        ಏರಿ ಬರಿಲಿ ಹಾರಿಬಿದ್ದ್ ನೆಗ್ದ್ ಬಿದ್ದೋದೊ ॥
ಕಟ್ಟೆ ಕಟ್ಟಿ ಫಲಯೇನ್? ....ಸರ್ಕಾರದ ದುಡ್ಡ್‌ಲಿ
ಬಾಯಿಗೊಂದು ಮಾತಾಡ್ದೊ – ಹೀನಮಾನ ಬೈಕಂಡೊ॥
ಬಂದ ದುಡ್ಡು ಎಲ್ಲಿಗೋತು? ಓಟುಕೊಟ್ಟ್ ಗೆಲ್‌ಸಿದ್ಯಾಕೆ?
ದುಡ್ಡು ತಿಂದಂವ ಉದ್ದಾರಾಕುಟ್ಟಾ ? ॥
        ಮೂಟೆ ಕಟ್ಟಿ ಪೊಯ್ಯತಂದ್ ಕೊಟ್ಟ್‌ಲಿ ಮಣ್ಣ್ ಎಳ್ದ್ ಎಳ್ದ್ ॥
        ಕುಕ್ಕೆಲಿ ಮಣ್ಣ್ ತುಂಬಿ ತುಂಬಿ । ಸಿಂಪೆ ಮಡ್ಗಿ ಹೊತ್ತ್ ಕಂಡ್॥
        ಹೆಜ್ಜೆ ಹೆಜ್ಜೆಗೆ ಕಲ್ಲ್ ಹಾಸಿ । ಒಗ್ಗಟ್ಟ್‌ಲಿ ಕಟ್ಟಿದೊ ಕಟ್ಟೆ॥
        ಹರ್‌ಕೆ ಹೊತ್ತೊ ದೃಷ್ಟಿಗೆ । ಭೂಮಿಗುಳಿಗಂಗೆ ॥
ಪೂಜೆಮಾಡ್ದೊ ಭಕ್ತಿಲಿ ಭೂಮಿಗುಳಿಗಂಗೆ ॥
ಕಟ್ಟೆ ನಿತ್ತರೆ ಕೋಳಿಕೊಟ್ಟವೆ ತೇಳಿ ಹೇಳ್ ಕಂಡ ॥
ಹರ್‌ಕೆ ತೀರ್ಸಿಕೆ ಅವು .... ದೃಷ್ಟಿ ತೇಳಿ ॥ಕಟ್ಟೆಕೊಡಿಗೆ ....
ಕೂಂಗ್‌ವ ಹೂಂಜನ ಕೊಯ್ದ್ ಹಾರ್ಸಿದೊ ..॥
        ಆಯತಪ್ಪಿ ಹಾರ್‌ದ ಕೋಳಿ । ನೇರ್ಲ ಮರದ ಅಡ್ಡಗೆಲ್ಲ್‌ಲಿ ।
        ಕುದ್ದ ಹೂಂಜ ರೆಕ್ಕೆ ಬಡ್ದ್ ಹೆದರಿ ಕೂಂಗಿತ್ ॥
        ಕುದ್ದ ಹೂಂಜ ರೆಕ್ಕೆ ಬಡ್ದ್ ಹೆದರಿ ಕೂಂಗಿತ್ ॥
        ರೆಕ್ಕೆ ಬಡ್ದ್ ....ಹೆ...ದ್...ರಿ ಕೂಂಗಿ.....ತ್ ॥
                ಕೊಕ್ಕ..........ರೇ........ ಕೋ................ ॥

* * * * *

ಮೊದುವೆ ತಯಾರಿ

ಆಕಾಶದ ಚಪ್ಪರದಡಿಲಿ
ಮೊದುವೆ ಭೂಮಂಡಲಲಿ ....ಸೋಬಾನವೊ॥

ಪುತ್ರಂಗೆ ಲಗ್ನ ವದ್‌ಗಿ ಬಂದ್
ಅರಮನೆಲಿ ತಯಾರಿ ಸುರಾತ್॥ ....ಸೋಬಾನವೊ॥

ಹಾಲೇರಿ ಸೀಮೆಂದ ಹಣ್ಣಡ್‌ಕೆ ತಂದ್
ಸುಳ್ಯದ ಸೀಮೆಂದ ವಿಳ್ಯದೆಲೆ ಬಂದ್... ಸೋಬಾನವೊ॥

ಕಾಸ್ತಾಳಿಗೆ ಹೇಳಿ ತಿಂಗಾತ್‌ತೇಳಿ
ಮೂಡು ಸೀಮೆಂದ ಅರ್‌ಶಣ ತರ್‌ಸಿ.................ಸೋಬಾನವೊ॥

ಮುತ್ತೈದ್ರ್ ಹೋಗಿ ಬೆಲೆಮಾಡಿ ತಂದ್
ಮಣ್ಣ್‌ನ ಕಳ್‌ಸಿಗೆಲಿ ಸೆಕೆ ಬರ್‌ಸಿ ತೆಗ್ದ್................ಸೋಬಾನವೊ॥

ಪಡ್‌ವಣ ಕಮ್ಮಾರನ ಮೆಟ್ಲ್ ಕತ್ತಿ ತೊಳ್ದ್
ಸೀಳಿ ಭಾಗಮಾಡಿ ಒಣ್‌ಗಿಸಿಕೆ ಮುತ್ತೈದ್ರ್............ಸೋಬಾನವೊ॥

ಊರು ಮೇದ ತಂದ ಬೆತ್ತದ ಮೊರಲಿ
ಒಣಗಿದ ಅರ್‌ಶಣ ತಂದೊ ಎತ್ತಿ ....ಸೋಬಾನವೊ॥

ಮೂಡಣ ಬಿಸ್‌ಲ್‌ಲಿ ಒಣ್‌ಗಿಕೆ ಹಾಕಿ
ಪಡುವಣ ಬಿಸ್‌ಲ್‌ಗೆ ಎತ್ತಿ ತಂದ್ ....ಸೋಬಾನವೊ॥

ಬಡಗದ ಬಡ್‌ಗಿ ಕೆತ್ತಿ ತಂದ ವಣ್‌ಕೆಗೆ
ಗಂಧ ಧೂಪ ಹಾಕಿ ಸಿಂಗರಿಸಿದೊ ....ಸೋಬಾನವೊ॥

ಕಲ್ಲ್‌ನ ಒರ್‌ಳ್‌ಲಿ ಮುತ್ತೈದ್ರ್ ಕುಟ್ಟಿ
ಚಿನ್ನದ ಹರಿವಾಣಲಿ ಹೊಡಿ ತುಂಬಿ ....ಸೋಬಾನವೊ॥

ಅರ್‌ಶಣ ಎಣ್ಣೆನ ಕೂಡ್ಸಿ ಕಲ್‌ಸಿದೊ
ಬಣ್ಣಯಾಕೆ ಬಾತ್‌ಲೆ ಇದ್‌ಕ್ಯಾಕೆ ತೇಳ್ದೊ ....ಸೋಬಾನವೊ॥

ಹಿತ್ತ್‌ಲ್‌ಲಿ ಬೆಳ್‌ದ ಅರ್‌ಶಣ ಕೂಡ್ಸಿ ಮುತ್ತೈದ್ರ್
ಮದ್‌ಮಂಜನ ಮೈಗೆ ಬಣ್ಣ ಬರುವಂಗೆ ಉಜ್ಜಿದೊ ....ಸೋಬಾನವೊ॥

* * * * *

ಮೊದುವೆ ಮಂಟಪ

ಕಂಬ ಮೊದುವೆನ ಚಪ್ಪರ ಕಂಬ ।
ಹಲ್‌ಸ್‌ನ ಮರದಾ ಹನ್ನೆರಡ್ ಕಂಬ ।
ಹೆಸ್‌ರ್ ಇದ್‌ಕೆ ಸೀತಾವಳಿ ಚಪ್ಪರತೇಳಿ ॥
        ಕಂಬಗ ಹನ್ನೆರಡ್ ಹಲ್ಸ್‌ನ ಕಂಬ
        ಕಲ್ಲ್‌ನ ಕಂಬಗಳ ಹಂಪಿನ ನೆನ್‌ಪ್‌ನ ಕಂಬ
        ಇದ್ ಕನ್ನಡನಾಡ್‌ನ ಮೊದುವೆ ಮಂಟಪ ॥
ಚಪ್ಪರದ ಅಂಗಳಕೆ ಸೆಗ್‌ಣಿಸಾರ್ಸಿ ।
ಕಂಬದ ಬುಡಕೆ ಮಣ್ಣ್‌ನ ಗುಂಬಮಡ್ಗಿ ।
ಮಾಡ್ಡೊ ಮೊದುವೆ ಚಪ್ಪರ ಕಂಬ ॥
        ನೆಟ್ಟೊ ಹೂಬುಟ್ಟ ಬಾಳೆಗೊನೆ ।
        ಹಾಕಿದೊ ಹಲ್ಸ್‌ನ ಕೊಂಬೆ ಎಲೆಗಳ ಹೊದಿಕೆ ।
        ಮಾವುನೆಲೆ ಕಟ್ಟಿದೊ ಕಂಬದ ಅಲಂಕಾರಕೆ ॥
ಕಟ್ಟಿದೊ ಅದ್ಕೆ ಮಾವ್‌ನೆಲೆ ಕೊಂಬೆ ।
ಸುತ್ತಿ ಕಂಬಕೆ ಬೆಳಿಬಟ್ಟೆ ಶುಭ ತೇಳ್ದೊ ॥
ತೆಂಗ್‌ನಕಾಯಿ ಎಲೆಅಡ್ಕೆ । ಮಂಟಪದ ಮೇಲ್ಕಟ್ಟಿಗೆ ।
        ಇದ್ಕೆ ಪಂಚಪಾಂಡವರ ಗುರ್ತು ತೇಳ್ದೊ ।
        ಚಪ್ಪರದ ಪೊರ್ಲುಗೆ ಸೌತೆಕಾಯಿ ಅಲಂಕಾರಕೆ ।
        ಹೂಬುಟ್ಟ ಬುಡದ ಸ್ಥಾನ ಗಣ್‌ಪತಿಗೆ ॥
ಇದ್ಕೆ ತ್ರಿಮೂರ್ತಿಗಳ ಸ್ಥಾನತೇಳ್ದೊ ತಿಳ್‌ದವು ।
ಎಂಟ್ ಕಂಬಗ ಅಷ್ಟ ದಿಕ್ಪಾಲಕರಾದೊ ।
ಬ್ರಹ್ಮವಿಷ್ಣು ಮಹೇಶ್ವರರ ಸ್ಥಾನ ಆತ್ ಧಾರಾಮಂಟಪ॥
        ಹೆಸ್‌ರಾತ್ ಅದ್ ದೇವಸಭೆತೇಳಿ ।
        ಇದ್ ಮದ್ ಮಕ್ಕಳ ಧಾರೆ ಮಂಟಪ ।
        ಇದ್ ಕನ್ನಡ ನಾಡ್‌ನ। ಅರೆಬಾಸಿಗರ ಧಾರಾಮಂಟಪ॥

* * * * *

ಬಳೆಗಾರ್ತಿ

ಬಾ ಬಾ ಬಳೆಗಾರ್ತಿ ಬಾವ್ವ ನಮ್ಮನೆಗೆ ।
ಮುತ್ತೈದೆ ಬಳೆಬಾತ್ ಬಾಗ್‌ಲ್‌ಗೆ ।

ನಿಮ್ಮೂರ ತಂಪ್ ನಮ್ಮೂರ್‌ನ ಸುಡ್ ಬಿಸ್‌ಲ್ ।
ಏನ್ ಭಾಗ್ಯವ್ವಾ ನಿಮ್ಮೂರ್‌ನ ತಂಪ್ ।

ಬಾಬಾ ಬಳೆಗಾರ್ತಿ ಬಾವ್ವ ನಮ್ಮನೆಗೆ ।
ಮೂಡು ಕೆಂಪಾಗಿ ಎಳೆ ಬಿಸಲ್‌ಗೆ ।

ನಡ್ದ್ ಬಂದೊಳ । ಬಳೆಗಾರ್ತಿ ನಮ್ಮನೆಗೆ ।
ಭಾಗ್ಯದ ಬಳೆ ತೊಡ್ಸ್ ಮೊದುವೆಗೆ ॥ ಬಾ ಬಾ ॥

ಒಳಗೆಂದ ತಂದ್ । ಬಣ್ಣದ ಚಾಪೆ ಹಾಸವ್ವಾ ।
ಬಳೆ ತಂದೊಳೆ ನಾನ್ ಮೊದುವೆಗೆ ॥

ಎಳೆ ಬಿಸ್‌ಲ್‌ಗೆ ಬಂದೊಳ ಬಳೆಗಾರ್ತಿ ।
ಮಿಳ್ಳಿಲಿ ಬಿಸಿಹಾಲ್‌ಕುಡಿ । ನೀನ್ ಬಳೆಗಾರ್ತಿ ॥ ಬಾ ಬಾ ॥

ನಮ್ಮೂರು ಬಯ್ಸ್ ಸೀಮೆ । ಬಿಸ್‌ಲ್ ಬಾಕೆ ಮುಂದೆ ।
ಬೆಳ್ಳಿ ಬೆಳ್‌ಕ್‌ಲೆ । ಬಳೆಹೊತ್ತ್ ತಂದೆ ॥

ನಿಮ್ಮೂರ ತಂಪ್ । ನಮ್ಮೂರ ಸುಡ್‌ಬಿಸ್‌ಲ್ ।
ಏನ್ ಭಾಗ್ಯವ್ವಾ । ನಿಮ್ಮೂರ ಮಂಜ್‌ನ ಜಲನೀರ್ ॥

ನಿಮ್ಮೂರ್‌ಲಿ ಮಳೆಯಿಲ್ಲೆ । ಸುಡುಬಿಸ್‌ಲ್ ತೇಳಿಯ ॥
ಕುಡಿಯಕೆ ತಕನೀನ್। ಮಂಜ್‌ನ ಜಲನೀರ್ ॥ ಬಾ ಬಾ॥

* * * * *

ಕಂಚಿಮಿ

ಕಳಸ ತಕನೀನ್ । ಕಳೆಯಿರುವ ಮುತ್ತೈದೆ ।
ಕಂಚಿಮಿ ಹಿಡಿನೀನ್ ಬಾರವ್ವ ॥

ಕಳೆಯಿರ್ವ ಮುತ್ತೈದೆ ಕಳಸಹಿಡಿನೀನ್ ।
ವರ್ಸಕ್ಕೆ ನೂರು ನಡಿಯಲಿ ಮೊದುವೆ ॥

ಹರ್ಸಿ ತಕ ನೀನ್ । ಅಂದದ ಮುತ್ತೈದೆ ।
ತಿಂಗಳಿಗೆ ಇಪ್ಪತ್ತು ಮದುವೆಗೆ ಹರ್ಸ್ ॥ ಕಳಸ ॥

ನೆನೆಯಕ್ಕಿ ಸೆರ್ಗ್ಲಿ ಗೊನೆಮುರ್ದ ಬಾಳೆಣ್ಣ್
ಗಿಡಕೋಗಿ ಮುತ್ತೈದೆಗ ಹರ್ಸಿ ಬನ್ನಿ ॥

ಕಡ್ಲೆ ಕಾಳ್ನಷ್ಟ್ । ಕಡ್ದ ಮಸಿ ತಕಂಡ್ ।
ಗಂಗೆ ಪೂಜೆ ಮಾಡಿಬನ್ನಿ ಮುತ್ತೈದೆರೆ ॥

ಕಲ್ಪವೃಕ್ಷತೇಳ್ವ ತೆಂಗ್ನ ಮರದಡಿಲಿ
ಫಲತುಂಬಿ ಕೊಡುವ ಹಲ್ಸ್ ಮಾಂವ್ ॥

ಹರಸ್ ಮಾತಾಯಿ । ಕಳಸತಕ ತಾಯಿೂ ।
ಕಂಚಿಮಿ ಹಿಡಿನೀನ್ ಬಾರವ್ವ ॥ ಕಳಸ ॥

* * * * *

ಸೋಬಾನೆ ಲಕ್ಷ್ಮಿಗೆ

ಸೋಬಾನೆ ಹೇಳೊನ । ಸುಗುಣೆ ಶ್ರೀ ಲಕ್ಷ್ಮಿಗೆ ।
ಸೋಬಾನೆ ಹೇಳೊನ । ಸುಮಂಗಳೆ ಇಂದಿರೆಗೆ ॥ಸೋ॥

ಶರಣ್ ಹೇಳೊನ । ಶ್ರೀ ಹರಿನ ಚರಣಕ್ಕೆ ॥
ಶ್ರೀ ಮನ್ನಾರಾಯಣನ ಸಿರಿ ಪಾದಕ್ಕೆ ॥ಸೋ॥

ಸದಾ ಕಾಲ ರಕ್ಷಿಸ್ ವಧು ವರರಂತೇಳಿ ।
ಗರುಡ ವಾಹನಂಗೆ ನಮಿಸೊನಾ ॥ಸೋ॥

ಕ್ಷೀರ ಸಾಗರ ಕಡೆಯಕನಾ......ಉದಿಸಿದ ಲಕ್ಷ್ಮಿ
ಮಾಲಕ್ಷ್ಮಿ ರಕ್ಷಿಸಲಿ ವಧುವರರಾ ॥

ಮುತ್ತಿನ ಮೂಗುಬೊಟ್ಟು ಓಲೆಯ ಮಾಲಕ್ಷ್ಮೀ
ದಿವ್ಯ ಹಾರಗಳ್‌ನ ಧರಿಸಿದ ಜಗನ್ಮಾತಾಯಿ...........॥

ಕಸ್ತೂರಿ ತಿಲಕ ಧರಿಸಿದ ದೇವಿಯೇ............
ಸದಾಕಾಲ ರಕ್ಷಿಸ್ ವಧುವರರ ತಾಯೇ.............॥

ತಾವರೆ ಪೀಠಲಿ ಕುದ್ದಾ ಶ್ರೀ ಲಕ್ಷ್ಮೀ
ದಾರಿದ್ರ ಬಾರದಂಗೆ ಕಾಪಾಡ್ ವಧುವರಾಂತೇಳಿ ॥

ಮಲ್ಲಿಗೆ ಸಂಪಿಗೆ । ಶ್ಯಾವ್‌ಂತಿಗೆ
ಹೂಗಳ ಮುಡ್‌ದಾ...........ಮಾಲಕ್ಷ್ಮಿ ರಕ್ಷಿಸ್ ॥

ಮಾಲಕ್ಷ್ಮಿ ನಿನ ಕೊರಳ್‌ನ । ತಾವರೆನ್ಹಂಗೆ ।
ಅವ್ವಾ ಲಕ್ಷ್ಮೀ ದೇವಿ ರಕ್ಷಿಸೋ ರಕ್ಷಿಸ್........॥ಸೊ॥

* * * * *

ಶ್ರೀನಿವಾಸ ಸ್ವಾಮಿಗೆ ಸೋಬಾನೆ

ಶ್ರೀ ಶೈಲವಾಸ ಶ್ರೀನಿವಾಸ ಸ್ವಾಮಿಗೆ ।
ಏಳ್‌ಗಿರಿಯೊಡೆಯ ಶ್ರೀ ಸ್ವಾಮಿಗೆ ।
ಏಳ್‌ಮಲೆವಾಸಿ ಮಂದಾರಗಿರಿ ಸ್ವಾಮಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ॥

ತ್ರಿಮೂರ್ತಿಗಳೊಡೆಯ ತ್ರಿಕಾಲಜ್ಞಾನಿ ।
ಮಹಾ ವಿಷ್ಣು ನವತಾರ ಶ್ರೀನಿವಾಸಂಗೆ ।
ಸ್ವಾಮಿ ಶ್ರೀಹರಿ ಸ್ವಾಮಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ॥

ಆದಿವರಹಾ ಕ್ಷೇತ್ರಸೇರಿ ಹುಣ್‌ಸೆ ಮರದಡಿ ।
ಹುತ್ತಲಿ ತಪಸ್ಸ್‌ಗೆ ಕುದ್ದಾ ಸ್ವಾಮಿಗೆ ।
ಶ್ರೀ ಶೈಲಗಿರಿವಾಸ ಶ್ರೀನಿವಾಸ ಸ್ವಾಮಿಗೆ ।
ಸೋಬಾನೆ ಹೇಳೊನ ಸೋಬಾನೆ ॥

ಬ್ರಹ್ಮ ಹಸ್‌ಆಗಿ ಶಿವ ಕರ್ ಆಗಿ ।
ಲಕ್ಷ್ಮಿ ಗೊಲ್ಲೆತಿಯಾಗಿ ಮೆರ್‌ದಾ ।
ತ್ರಿಲೋಕ ಜ್ಞಾನಿಗಳಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ।

ಭೂಲೋಕಲಿ ಹುಟ್ಟಿ ಗೊಲ್ಲರ್‌ಂದ ।
ತಿರುಪತಿ ಬಾಗ್ಲ್ ತೆಗ್ಸಿ ಸುರುಗೆ।
ದರ್ಶನ ಕೊಟ್ಟ ವೆಂಕಟಸ್ವಾಮಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ॥

ಅವ್ವ ಬಕುಳಾದೇವಿನ ತೊಳ್ಸಿಮಾಲೆಯಾಗೀ।
ಧರ್‌ಸಿ ಕಂಡ ತ್ರಿಲೋಕ ಸ್ವಾಮಿಗೆ ।
ಶ್ರೀವೆಂಕಟಾದ್ರಿ ವಾಸಿ ಶ್ರೀನಿವಾಸಂಗೆ।
ಸೋಬಾನೆ ಹೇಳೊನ ಸೋಬಾನೆ ।

ಭಕ್ತರ ರಕ್ಷಣೆಗೆ ಶೇಷಾಚಲಲಿ ನೆಲೆನಿತ್ತಾ ।
ಶ್ರೀ ವೆಂಕಟರಮಣ ಸ್ವಾಮಿಗೆ ದ್ವಾಪರದ ಕೃಷ್ಣ ।
ಕಲಿಯುಗದ ವೆಂಕರಮಣ ಸ್ವಾಮಿಗೆ ಸೋಬಾನೆ ।

ಸೋಬಾನೆ ಹೇಳೊನ ಸೋಬಾನೆ ।

ಪದ್ಮಾವತಿ ಮದುವೆಗೆ ಮೂರುಕೋಟಿ ।
ಮೂನ್ನೂರ ಅರವತ್ತನಾಲ್ಕ್ ಕೋಟಿ ।
ರಾಮಕಮಲ ನಾಣ್ಯ ಸಾಲಪಡ್ದ ಸ್ವಾಮಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ।

ಸಾಲಕ್ಕಾಗಿ ಬ್ರಹ್ಮ, ಈಶ್ವರ, ಅಶ್ವಥ ಮರನ ।
ಸಾಕ್ಷಿ ಮಾಡ್ದ ಶ್ರೀನಿವಾಸ ಸ್ವಾಮಿಗೆ ।
ಶ್ರೀಹರಿ ಶ್ರೀ ವೆಂಕಟ ಸ್ವಾಮಿಗೆ ಸೋಬಾನೆ ।
ಸೋಬಾನೆ ಹೇಳೊನ ಸೋಬಾನೆ ।

ಕಲಿಯುಗದ ಅಂತ್ಯಲಿ ಅಸ್‌ಲ್ ಬಡ್ಡಿಸೇರ್ಸಿ
ಮೊತ್ತ ಕೊಟ್ಟನೆತೇಳ್ದ-ಶ್ರೀನಿವಾಸಂಗೆ
ಲಕ್ಷ್ಮೀರೇಖೆ ಹೊಂದಿದ ರಾಜನ ಕರ್ಸಿ
ವಿಶ್ವ ಕರ್ಮನ ಕೈಲಿ ದೇವಸ್ಥಾನ ಮಾಡ್ಸಿದ ಸ್ವಾಮಿಗೆ

ಬ್ರಹ್ಮನ ಕೈಲಿ ಜ್ಯೋತಿ ಬೆಳ್‌ಗಿಸಿ
ಬ್ರಹ್ಮೋತ್ಸವ ಮಾಡ್ಸಿದ ಸ್ವಾಮಿಗೆ
ತಿರುಪತಿಗೆ ಬರ್‌ವ ಭಕ್ತರ್ ಗೆ ಮುಡ್‌ಪು
ಹೊತ್ತ್ ಬಾಕೆ ಅನುಮಾಡ್ದ ಲಕ್ಷ್ಮಿಗೆ ॥

ಹಣ ಅಳ್‌ದ್ ಆಯಾಸಾಗಿ ಬೆಟ್ಟಂದ ಇಳ್ದ್
ಗೋವಿಂದ ಪಟ್ಣಲಿ ವಿಶ್ರಾಂತಿ ಪಡೆವ ಸ್ವಾಮಿಗೆ
ಗೌಡರ ಕುಲದೇವ್ರು ಶ್ರೀ ವೆಂಕಟರಮಣ ಸ್ವಾಮಿಗೆ
ಹರಿಸೇವೆ ಮುಡುಪುಪೂಜೆ ಪಾನಕಪೂಜೆ ಸ್ವಾಮಿಗೆ

ಸೋಬಾನೆ ಶ್ರೀ ಶ್ರೀನಿವಾಸ ಸ್ವಾಮಿಗೆ ।
ಸೋಬಾನೆ ಪದ್ಮಾವತಿ ತಾಳಿ ಭಾಗ್ಯಕೆ ।
ಮಂಗಳಂ ಜಯಮಂಗಳಂ ಸೋಬಾನೆ।
ಮಂಗಳಂ ಮಂಗಳಂ ಜಯಮಂಗಳಂ ।3।

ಸೋಬಾನೆ ಮಂಗಳಂ ಸೋಬಾನೆ ಮಂಗಳಂ ।

* * * * *

ಗ್ಯಾನ

ಬಾರದ ಮಳೆರಾಯಾ ಬಾಕೆಮುಂದೆ ಹೋಕುತೇಳಿ
ಅಣ್ಣಯ್ಯ ಹೊರ್‌ಟತ್ ತಂಗೆ ಮನೆಗೆ ॥
ಬಸ್‌ರಿ ತಂಗೆ ಗೂಡೆಗೆ ಏನೇನ್ ಆಸೆವುಟ್ಟೊತೇಳಿ
ಅವ್ವಾ ಬುತ್ತಿ ಒಂದು ಕೊಡುಬ್ಯಾಗ ತೇಳ್‌ಕನ
ಹೈದ ಬುತ್ತಿ ಕೇಳ್ತಾವುಟ್ಟಲಾ ಅಂವನ ಮಾತ್ ಕೇಳಿ
ಕುಸಿಯಾತ್ ಅವ್ವಂಗೆ .....ತಂಗೆನ ಕಂಡ್ರೆ ಎಷ್ಟ್ ಪ್ರೀತಿ ಅಣ್ಣಂಗೆ?
ಮನ್ಸೊಳಗೆ ಕುಸಿ ಆತ್ – ಏನೇನ್ ಕೊಡಕುತ ಗ್ಯಾನಮಾಡ್ತ್ !

ಓಡೋಡಿ ಹೋತು ಹಲ್ಸ್‌ನ ಹಣ್ಣ್ ತಾತ್,
ಕೂಗಲೆ ಹಿಟ್ಟ್ ಮಾಡ್ತ್ ಕಳ್‌ಸಿಗೆಲಿ ಬೇಯ್ಸಿತ್.
ಅಲ್ಲೆಲ್ಲಾ ಹುಡ್‌ಕಾಡಿ ಗಿಣಿಕೆ ಸೊಪ್ಪು ತಾತ್.
ಹೊರ್ದ್ ಪಲ್ಯ ಮಾಡ್ತ್. ಮತ್ತೊಮ್ಮೆ ಓಡಾಡಿ
ಅಳ್‌ಂಬುನು ತಾತ್. ಅವ್ವನ ಮನ್ಸಿಗೆ
ಸ್ವಲ್ಪ ನೆಮ್ಮದಿ ಆತ್. ಕೂಸಿಗೆ ಸ್ವಲ್ಪಾರ್ ಕುಸಿ ಆದುತ ॥

* * * * *

ಬಸ್‌ರಿ ಆಶೆ

ಒಂದು ತಿಂಗಳಿಗೆ ಏನೇನ್ ಬಯಸಿತ್ ।
ಪೊರ್ಲಾಗಿ ಬೆಳ್ದಾ ಎಳೆನೆಲ್ಲೀ............
        ಎರಡ್ ತಿಂಗಳಿಗೆ ಎರಡರ್‌ನ ಬಯ್‌ಸಿತ್ ।
        ಎಡ ಕೈಲುಪ್ಪು ಎಳೆಹುಣ್‌ಸೆಕಾಯಿ ॥
ಮೂರ್ನೆ ತಿಂಗಳಿಗೆ ಅವುಳೇನ್ ಬಯ್‌ಸಿತ್ ।
ಮೂಡಲ ದಿಕ್ಕ್‌ನ ಮಿಡಿಮಾಂವ್ ॥
        ನಾಲ್ಕನೆ ತಿಂಗಳಿಗೆ ಅವುಳೇನ್ ಬಯ್‌ಸಿತ್ ।
        ಕಿತ್ತುಳಿ ಹಣ್ಣ್‌ನ ಕೈತುಂಬಿ ॥
ಐದನೆ ತಿಂಗಳಿಗೆ ಅವುಳೇನ್ ಬಯ್‌ಸಿತ್ ।
ಮುಡಿತುಂಬಾ ಕೊಯ್ದು ಮಲ್ಲಿಗೆ ॥
        ಆರೆಂಬ ತಿಂಗಳಿಗೆ ಅವುಳೇನ್ ಬಯ್‌ಸಿತ್ ।
        ಆರಿದ ಅನ್ನ ಕೆನೆ ಮೊಸ್‌ರು ॥
ಏಳೆಂಬ ತಿಂಗಳಿಗೆ ಯಾರನ್ನ ಬಯಸಿತ್
ಹೇಳಿ ಕಳ್ಸಿ–ಕೆ ತವುರಿಲ್ಲೆ ಮಗಳಿಗೆ ॥
        ಒಂಬತ್ತು ತಿಂಗಳಿಗೆ ಫಲವಂತಿಕೆ
        ಹೆಣ್ಣಿಗೆ ಶಿವನಂತ ಕೂಸು ಹುಟ್ಟಿ ಬರ್‌ಲಿ ॥

ಬಾಣಂತಿ ಮೀಯಕೆ ಉಪಯೋಗಿಸುವ ಸೊಪ್ಪುಗ

****

ತಿಮರೆ ಸೊಪ್ಪು, ನೀಲಗಿರಿ ಸೊಪ್ಪು, ಬೇವ್‌ನ ಸೊಪ್ಪು, ಸೀತಾಫಲ ಸೊಪ್ಪು, ಆಡುಸೋಗೆ ಸೊಪ್ಪು,ಅಂಕೋಲೆ ಸೊಪ್ಪು, ತುಂಬೆ ಸೊಪ್ಪು, ಅಮೃತ ಬಳ್ಳಿ, ಹುಣ್‌ಸೆ ಸೊಪ್ಪು, ಇವುಗಳ್‌ನ ನೀರಿಗೆ ಹಾಕಿ, ಬಿಸಿ ಕಾಯಿಸಿ ಸ್ನಾನ ಮಾಡಿರೆ ಮೈ,ಕೈ ಬ್ಯಾನೆ, ಮಂಡಿಬ್ಯಾನೆ, ಇದ್‌ಕೆಲ್ಲಾ ಉತ್ತಮ ಪರಿಹಾರತ ಅನುಭವಸ್ಥರ ಮಾತ್.

ಹರಿಸೇವೆ

ಸಣ್ಣ ಸಣ್ಣ ನಾಮ ಸಣ್ಣ ನೀಲಿಯ ನಾಮ
ಎಷ್ಟೊಂದು ನಾಮ ಹರಿನಾಮ ॥ ಎಷ್ಟೊಂದು ನಾಮ
ಹರಿನಾಮ ವೆಂಕಟನಾಮ ಹಳ್ಳದ ಸಾಲ್‌ಲಿ ಹರಿಸೇವೆ ॥
        ಹಳ್ಳದ ಸಾಲ್‌ಲಿ ಹರಿಸೇವೆ ವೆಂಕಟನಾಮ
        ಶನಿವಾರದ ಶಂಖ್ ನುಡ್‌ದುಟ್ಟು । ಶನಿವಾರದ
        ಶಂಖ್ ನುಡ್‌ದುಟ್ಟು ವೆಂಕಟರಮಣ ।ಗಿರಿ ಮ್ಯಾಲೆನ ಹರಿಸೇವೆ॥
ಗಿರಿ ಮೇಲಾದ ಹರಿಸೇವೆ ವೆಂಕಟರಮಣ
ಶನಿವಾರದ ಶಂಖ್ ನುಡ್‌ದುಟ್ಟು। ಶನಿವಾರದ
ಶಂಖ್ ನುಡ್‌ದುಟ್ಟು ವೆಂಕಟರಮಣ॥ ಅಣ್ಣ ವಾಲಾಡಿ ಬಂದವೆ॥
        ಅಣ್ಣನ ಗಿರಿ ಮ್ಯಾಲೆ ಬಣ್ಣ ಒಂದೆರಡಿಕ್ಕೊನ
        ಬಣ್ಣ ತುಂಬೊನ ಗಿರಿಗೆಲ್ಲಾ ಬಣ್ಣ ತುಂಬೊನ
        ಗಿರಿಗೆಲ್ಲ ತಕುನ್ನೈನ ಹೊನ್ನು ತುಂಬೊನ ಕಳ್‌ಸಕ್ಕೆ ॥
ಹೊತ್ತು ಹೊತ್ತುನಾ ಸ್ವಾಮಿೊ ಯಾಕಾಗಿ ಹೋದರಿ ಸ್ವಾಮಿ ?
ಅಣ್ಣನ ಮನೆನಾ ಕುಲಸ್ವಾಮಿ ? ಅಣ್ಣನ ಮನೆನಾ
ಕುಲಸ್ವಾಮಿ ವೆಂಕಟರಮಣ ಕೊಪ್ಪು ತುಂಬೊನ ಕಳ್‌ಸಕ್ಕೆ ಗೋಲಾಡಿ ಬಂದವೆ॥
        ಸಂಜೆನ ಹೊತ್ತ್‌ಲಿ ಯಾಕಾಗಿ ಹೋದರಿ ಸ್ವಾಮಿೊ
        ಅಪ್ಪನ ಮನೆನಾ ಕುಲಸ್ವಾಮಿೊ ? ಅಪ್ಪನ ಮನೆನಾ
        ಕುಲಸ್ವಾಮಿೊ ಮುತ್ತು ತುಂಬಿ ತಂದವೆ ಕಳ್‌ಸಕ್ಕೆ
ಹಾಲ್ ಕಾಸ್ಯೊಳೊ ಹರಿವಾಣ ಬೆಳ್‌ಗ್ಯೊಳೊ
ಕಿತ್ತುಳಿ ಹಣ್ಣ್ ಮಡ್‌ಗ್ಯೊಳೊ ॥ ಕಿತ್ತುಳಿ ಹಣ್ಣ್
ಸುಲ್‌ದೊಳೊ ವೆಂಕಟರಮಣ ಕಿಚ್ಚೆದ್ದ್ ಬರ್‌ವ ಪರಿಸೆಗೆ ॥
        ತುಪ್ಪ ಕಾಸ್ಯೊಳೊ ಕೊಪ್ಪುನ ಬೆಳ್‌ಗ್ಯೊಳೊ ಬಾಳೆಯ
        ಹಣ್ಣ್ ಸುಲ್‌ದೊಳೊ॥ ಬಾಳೆಯ ಹಣ್ಣ್ ಸುಲ್‌ದೊಳೊ
        ವೆಂಕಟರಮಣ ಮಿಂದೆದ್ದ್ ಬರ್‌ವ ಭಕ್‌ತರಿಗೆ॥

ಸ್ವಾಮಿನ ಪೂಜೆಗೆ ಏನೇನ್ ತರೋಕು ?
ಕರಿಯ ಕಬ್ಬ್‌ನ ಜಲ್ಲೆ ಎಳೆಯ ತೆಂಗ್‌ನಕಾಯಿ। ಯಾಲಕ್ಕಿ ಬೆಲ್ಲ ವಳ್ಳೆಮೆಣ್‌ಸ್
ಯಾಲಕ್ಕಿಬೆಲ್ಲ ವಳ್ಳೆಮೆಣ್‌ಸ್ ಸ್ವಾಮಿನ ಪೂಜೆಗೆ ಘನವಾದೊ॥
ಸ್ವಾಮಿ ಗುಂಡದ ಮುಂದೆ ಘನವಾದೊ ॥

ಸ್ವಾಮಿನ ಮೊದುವೆಗೆ ಭೂಮೆಲ್ಲ ಚಪ್ಪರ
ಯಾಲಕ್ಕಿ ಕಂಬ ತಳವೂರ್ದೊ। ಯಾಲಕ್ಕಿ ಕಂಬ
ತಳವೂರ್ದೊ ಸ್ವಾಮಿಗೆ। ಸ್ವಾಮಿಯ ಮೊದುವೆ ಶನಿವಾರ॥
ಶನಿವಾರದಾ ಶಂಖ್ ನುಡ್‌ದುಟ್ಟು॥

ಎಲ್ಲಾ ದೇವ್‌ರಿಗೆ ಎಣ್ಣೆಲಿ ದೀವಿಗೆ ನಮ್ಮೊಡೆಯ
ತಿಮ್ಮಪ್ಪಂಗೆ ತುಪ್ಪದ ದೀವಿಗೆ ಉರ್‌ಸಿದೊ
ಎಣ್ಣ್‌ಲಿ ಜ್ಯೋತಿ ಬೆಳ್‌ಗಿದೊ ॥

ಶನಿವಾರದ ಶಂಖ ನುಡ್‌ದುಟ್ಟು ॥
ಸ್ವಾಮಿ ಗುಂಡದ ಮುಂದೆ ಆರತಿಯೆತ್ತಿ
ತುಪ್ಪದ ದೀವಿಗೆ ಉರ್‌ಸಿದೊ ಎಣ್ಣೆಲಿ ಜ್ಯೋತಿ ಬೆಳ್‌ಗಿದೊ

ಹಾರ್‌ಕಚ್ಚೆ ಹಾಕಿ ಜರಿ ಮುಂಡಾಸ್ ಕಟ್ಟಿ
ಮೂರು ನಾಮನ ಧರ್‌ಸಿದೋ ಮೂರು– ನಾಮನ
ಧರ್‌ಸಿದೊ ನಮ್ಮ ಸ್ವಾಮಿ, ಜೋಳಿಗೆ ಹಿಡ್‌ದ್

ಜೋಳಿಗೆ ಹಿಡ್‌ದ್ ಬೆಟ್ಟದ ಮ್ಯಾಲೆ ಹೊರ್ಟೋಅವು
ಗಿರಿನ ಹತ್ತಿಕಂಡ್ ಕಿರ್ ಬೆವ್‌ರ್ ಒರ್ಸಿಕಂಡ್
ಎಡಬಲದ ಶಂಖ್ ನುಡ್‌ಸಿಕಂಡ್

ಎಡಬಲದ ಶಂಖ್ ನುಡ್ಸ್‌ವ ಸ್ವಾಮಿಗೆ
ಗಿರಿಯ ಮೇಲೊಂದು ಹರಿಸೇವೆ......ಸ್ವಾಮಿಗೆ.........
ಮಂಗಳಾರತಿ ಜಯ ಮಂಗಳಾರತಿ....,

* * * * *

ಹಾಡೊನ ತೊಟ್ಲ್‌ಗೆ

ಹಾಡೊನ ರಾಗಲಿ ತೂಗೊನ ದೀಪಗಳಾ ।
ತೂಗೊನ ದೀಪಗಳ ಸಾಲ್ ಸಾಲ್ ॥

ಸಾಲಾಗಿ ಬಂದ್ ತೂಗೊನ ದೀಪಗಳ ।
ಜೋತೇಳಿ ತೊಟ್ಲ್‌ನ ತೂಗೊನಾ ॥

ಚಿನ್ನದ ತೊಟ್ಲ್‌ಲಿ ಬಣ್ಣದ ಬಟ್ಟೆಹಾಸಿ ।
ಜೋ ಜೋ ಹಾಡ್ತಾ ತೂಗೊನಾ ॥

ಶಿವರಾತ್ರಿದಿನ ಜನಿಸಿದ ನಿಂಗೆ
ಶಿವನಾಮ ನಿಂಗೆ ಪೊರ್ಲಲ್ಲೊ ॥

ತೂಗೊನ ತೊಟ್ಲ್‌ನ ಜೋಹೇಳಿ
ತೂಗೊನ ತೊಟ್ಲ್‌ನಾ ಪದಹೇಳಿ ॥

ಜೋಹೇಳಿ ತೂಗ್‌ಕನ ಬೆಳ್ಗಿದ ಜ್ಯೋತಿಗೆ
ಜೋ ಹೇಳಿ ಹಾಡೊನ ನಾವೆಲ್ಲಾ ॥

ಏಳೇಳ್ ಮಡಿವಾಳ್ತಿ ನೀನ್
ತೊಟ್ಲ್‌ಗೆ ಹೊಸಬಟ್ಟೆ ತಂದ್ಹಾಸ್ ॥

ಎಲ್ಲವೂ ಬನ್ನಿ ತೊಟ್ಲ್‌ಗೆ ಕೈಜೋಡ್ಸಿ ।
ಹಾಡೊನ ರಾಗಗಳ ಜೋತೇಳಿ ॥

ತೂಗೊನ ದೀಪಗಳ ಸಾಲಾಗಿ
ಹಾಡೊನ ರಾಗಗಳ ತೊಟ್ಲ್‌ಗೆ ॥

* * * * *

ವೈಭವದ ಏಳ್‌ನಾಡ್

ಏಳ್‌ನಾಡ್ ವೈಭವ ಯಾಲಮಲೆ ಹೊರಮಲೆ
ಹಾವುನ ಕಣ್ಣ್ ಹಾಲೇರಿ ಮೂಲೆಹೂ ಮುತ್ತ್‌ನಾಡ್
ಕೆತ್ತ್‌ಂಗಲ್ಲ್ ಗಡಿನಾಡ್ ಏಳ್‌ನಾಡ್ ವೈಭವ ॥
ಬಾಳ್‌ಬದಿಗೇರಿ ಉಕ್ಕಂಬ್ ಮಡಿಕೇರಿ
ಸುತ್ತುಂಗೇರಿ ಸೂರ್ಲಬ್ಬಿ ಏಳ್‌ನಾಡ್ ವೈಭವ
ಯಾಲಮಲೆ ಹೊರಮಲೆ ಗಾಳಿಬೀಡ್ ಮಲೆ ॥

ಕೂಜಿಮಲೆ ಕಡಮಕಲ್ಲ್ ಮೊಣ್ಣಂಗೇರಿ ಅರೆಕಲ್ಲ್
ಕೊಲ್ಲಿಮಲೆ ಚಾಮುಂಡಿ ಬುಟ್ಟಬಾಣ ಮೊಣ್ಣಂಗೇರಿ
ಆನೆಕೆರೆ ಚಪ್ಪಂಡಕೆರೆ ವಿಹಾರಧಾಮ ಅರಸುಗೆ
ಅವಶೇಷ ಅರಮನೆದ್ ಕಲ್ಲ್ ಕಲ್ಲ್‌ಗೂ ಕತೆ ।
ಹತ್ತು ಕೊಟ್ಟರು ಬುಡ್‌ದುಲೆ । ಮುತ್ತು ಸೊರಿವ ನಾಡ್‌ನ
ನುಡಿ ಒಂದು ಅರಸನದ್ ಏಳ್‌ನಾಡ್‌ಲಿ ॥

ಅರೆಕಲ್ಲ್ ಐಯ್ಯಪ್ಪ ಕೊಟ್ಟಮಲೆ ಚೌಂಡಿ
ಹೊರಮಲೆ ಭದ್ರಕಾಳಿ ಮಲೆದೇವಿ ಚಾಮುಂಡಿ
ಕಾರೆರಬ್ಬಿ ಕ್ವಾಟೆಅಬ್ಬಿ ಅಬ್ಬಿ ಜಲಧಾಮ ॥
ಪ್ರವಾಸಿಗರ ದಂಡ್ ಅಲ್ಲಿ ನಿತ್ಯ ನೂತನ
ಪಟ್ಟಿ ಮಂದಿ ಪರ್‌ಂಬು ಮಾಂದಲಪಟ್ಟಿ ಪರ್‌ಂಬು
ಏಳ್‌ನಾಡ್ ವೈಭವಲಿ ಪೊರ್ಲುನ ಪಟ್ಟಿ ಪರ್‌ಂಬು ॥

ನಾಡ್ ತಕ್ಕ ಊರುತಕ್ಕ ದೇವ ತಕ್ಕರ ನಾಡ್
ತಕ್ಕಾಮೆಲಿ ನ್ಯಾಯಸಮ್ಮತ ನುಡಿಗ
ಮ್ಯಾದನ ಪರೆ ವಾದ್ಯನೆ ವೇದ ವಾಲಗ
ಹಿತ್ತಲ್‌ಲಿ ಕದೊಳಿಬನ ಕಣಿವೆಲಿ ಯಾಲಕ್ಕಿಬನ
ಆನೆ ಮೇವಿಗೆ ವಾಟೆ ಬೆದ್‌ರ್ ಕಾಟಿ ಕಡವೆಗೆ ದರ್ಬೆಹುಲ್ಲು
ಏಳ್‌ನಾಡ್ ವೈಭವಲಿ ಯಾಲಮಲೆ ಹೊರಮಲೆ

* * * * *

ಕೃಷ್ಣನ ನೆಲೆ ವೈಭವ

ಭೂದೇವಿನ ಕೈಕಲೆ ಕೌಶಲ್ಯನ
ಹೆಂಗೆ ವರ್ಣಿಸುದು ಪ್ರಕೃತಿನ ಈ ಸೊಬಗ್ ನಾ ?
ಮನೆ ಮನೆಲಿ ಕರಿತೊಳ್‌ಸಿ ಬೆಳಿ ತೊಳ್‌ಸಿ,
ಶ್ವೇತಾಂಬರಿನಂಗೆ ಬೆಳಿ ಉಮ್ಮತ್ತ ತುಂಬೆ ।
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಶುಭದಾರತಿ ॥

ಬಾನ್‌ನ ಮುಟ್ಟುವಂಗೆ ನಿತ್ತಿರ್‌ವ ಮರಗ
ಕಂಗೊಳ್‌ಸಿದೆ ಅಡ್‌ಕೆ ಬಾಳೆನ ನೋಟ
ಗುಂಡಿತಟ್ಟ್ ಬರೆಮಾನಿ ಗದ್ದೆಗಳ ಸಾಲ್
ನೆಕ್ಕಿ ಚಾಕಟೆ ಸಂಪಿಗೆ ಹಾಲ್ ಹಲ್‌ಸ್
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಅಕ್ಕಿ ಆರತಿ ॥

ಎತ್ತನೋಡಿರು ಅತ್ತ ಹಸ್‌ರ್ ತುಂಬಿದಕಾಡ್
ಸುತ್ತಮುತ್ತ ಕುಂದು ಬೆಟ್ಟಗಳ್‌ದೆ ಸಾಲ್
ಮಾನಿಕೆರೆಲಿ ಹೆಡೆಯೆತ್ತಿದ ನಾಗನ ಹಂಗೆ
ಶಾಂತಿ ಪ್ರಿಯ ಕೊಳಲ್‌ನ ಗೋಪಾಲಕೃಷ್ಣ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ವೀಳ್ಯದಾರತಿ ॥

ಇತಿಹಾಸ ಪೂರ್ವಲಿ ಅಮ್ಮ ಕೊಡವರ ಸ್ಥಾನಯಿದ್ ।
ವೈರಿಗಳ ದಾಳಿಗೆ ಅವರ ಕುಳ ನಾಶ ಆಕನ
ದೇಶ ಕೊಡಗ್‌ನ ಅಮರ ಸುಳ್ಯಂದ ತಂದ್
ರೈತ ಸೈನಿಕರ್‌ನ ಕೂರ್ಸಿದೊ ಹಾಲೇರಿ ಅರಸ್‌ರ್
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಕರ್ಪೂರದಾರತಿ ॥

ಕೀರ್ತಿಯಿದ್ ಅರಸ್ ದೊಡ್ಡ ವೀರಪ್ಪಂಗೆ
ಕೊಡಗ್ ದೇಶದ ಜಮ್ಮ ಹಿನ್ನೆಲೆಯ ಚರಿತ್ರೆ

ಐಗೂರು ಸೀಮೆಂದ ನೆಲೆಗೆ ಬಂದವು
ಬಲ್ಲ್ಯೆರಿ ದೇವ್ಯೆರಿ ಮಣ್ಣ್‌ನ ಈಗನ ಸಂತತಿ ॥
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಫಲದಾರತಿ ॥

ಇಪ್ಪತ್ತು ಒಕ್ಕಲ್‌ತೇಳಿ ಪ್ರಖ್ಯಾತಿ ಈ ಊರಿಗೆ
ಕುಂದುಗಳಡಿ ಒಗ್ಗಟ್ಟ್ ಶ್ರಮ ಸಾಧನೆ
ಉದ್ಭವ ಮೂರ್ತಿಂತೇಳಿ ಹೆಸ್‌ರ್ ಕೃಷ್ಣಂಗೆ
ನೆಲೆನ ಎಡಬಲ ಚೌಂಡಿ ಸಾರ್ತಾವು
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಶುಭದಾರತಿ ॥

ಭೂಮಿಗೆ ನೇಗ್‌ಲ್‌ಸೇವೆ ಬಿಸು ಸಂಕ್ರಮಣಕೆ
ಕೃಷ್ಣನ ಗುಡಿಸುತ್ತು ಬೆಳ್‌ಕಾಟಲಿ ಜನಸೇವೆ ॥
ಕೃಷ್ಣ ಜನ್ಮಾಷ್ಟಮಿ ದೀಪಾವಳಿಗೆ ಊರುಸೇವೆ
ಕದೊಳಿ ಬಾಳೆಫಲ ಹಾಲ್ ನೈವೇದ್ಯ ಪಾಯ್‌ಸಕ್ಕೆ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಧೂಪದಾರತಿ ॥

ಉತ್ತರಾಯಣ ಪುಣ್ಯಕಾಲ ಮಕರ ಸಂಕ್ರಾಂತಿಗೆ
ಹೊಸಅಕ್ಕಿ ನೈವೇದ್ಯ ರೈತ ಬಂಧುಗಳಿಗೆ
ರಾತ್ರೆ ಕಾಡಯ್ಯ ಐಯ್ಯಪ್ಪ ಬ್ಯಾಟೆ ತೆರೆಗ
ಬ್ಯಾಟೆ ಯಾಟಲಿ ಮನ ರಂಜ್‌ಸ್‌ವೆ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಗಂಧದಾರತಿ ॥

ಹುತ್ತೆರಿ ಕದ್‌ರ್ ಕೃಷ್ಣಂಗೆ ಪ್ರಥಮಕೆ
ಈಡ್‌ಕಾಯಿ ಕೋಲಾಟ ಇಗ್ಗುತ್ತಪ್ಪಂಗೆ
ಜೋಡಿಜೋಗಿ ಕೊಣ್ತ ಮನೆಹಾಡ್ ಊರ್‌ಗೆ
ತಂಬಿಟ್ಟ್ ಬಾಳೆಣ್ಣ್ ಹುತ್ತೆರಿ ಜೋಗಿಗೆ

ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಹೂವುನಾರತಿ ॥
ದೇಶ ಕೊಡಗ್‌ನ ಸಂಸ್ಕೃತಿ ಕಣಕಣಲು
ಸಂಸ್ಕೃತಿ ಅಳ್‌ದರೂ ಮಾಸದ ನೆನ್‌ಪುಯಿಲ್ಲಿ ॥
ಗೋವುಗಳ ಸಂಬಂಧ ವಾಟೆ ಕೊಳಲ್‌ನ ದೊನಿ
ಚರಿತ್ರೆಯಾತ್ ಹೇಳೊವರ ಮಾತ್‌ಲಿ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಶುಭದಾರತಿ ॥

ವಾರ್ಷಿಕ ಬಾರಣೆ ಚೌಂಡಿ ಬನಲಿ
ದೇವರ ರಕ್ಷಣೆಗೆ ಜೋಡಿ ಭೂಮಿ
ಮಲೆಕಾಡ್‌ಂದ ಇಳಿವ ಜಲ ನೀರ್
ಹರಿಯೊದು ದಕ್ಷಿಣದ ನದಿ ಕಾವೇರಿ ಸೇರಿಕೆ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಶುಭದಾರತಿ ॥

ಬೆಟ್ಟಗಳ ಸಂಪತ್ತ್ ಗೊಟ್ಟೆ, ಅಮೆ, ಇಡ್‌ಂಜಿ
ಚೀಪೆ ಕೂಮತಿ ಹಣ್ಣ್ ಪ್ರಾಣಿ ಪಕ್ಷಿಗಳ ಬದ್‌ಕಿಗೆ
ಕಾಡ್ ಪ್ರಾಣಿಗಳ ಹುಲಿ ಆನೆ ಕಡವೆ ಕಾಟಿ
ಕುರೆಂಗಿ ಕಬ್ಬೆಕ್ಕ್ ಬರಿಕ, ಮೊಲ ಮುಳ್ಳು ಹಂದಿ ॥
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಫಲದಾರತಿ ॥

ಹೆಬ್ಬಾವು ಕರನಡ ಪಚ್ಚೆಮಂಡಲ ಕಟ್ಟ್
ಕೇರೆ ನಾಗ, ಕಾಳಿಂಗ ಸರ್ಪಯಿರ್‌ವ ವನಯಿದ್॥
ಕಾಡ್ ಕೋಳಿ ಕ್ವಾಂಬಕ್ಕಿ ಹೊಟ್ಟಕ್ಕಿ ಚೋರೆ ಕುರುಳಿ
ಗಿಳಿ ಕೋಗಿಲೆ ಕೊಟ್ಟು ಮುಡ್‌ಚ ಕಾಗೆ ಚೊಂಬುಕ ಹಕ್ಕಿ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ದೀಪಾರತಿ ॥

ನಾಗಬನ, ಕಾಡಯ್ಯಬನ, ಐಯ್ಯಪ್ಪ ಚೌಂಡಿಬನ
ಹಂದಿಪಾರೆ, ಝುರಿಪಾರೆ, ಹುಲಿಪಾರೆ ಮೊಸಳೆಪಾರೆ॥
ಹಿಂಡ್ ಕೋತಿಗಳ ವಾಸದ ಅಂಜನಾಪಾರೆ
ನಿಸರ್ಗದ ಅದ್ಭುತ ಕಾಡ್ ಕಲ್ಲ್‌ಗಳಿಗೆ ಹೆಸ್‌ರ್ ಹಿಂಗೆ॥
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಪುಷ್ಪದಾರತಿ ॥

ಗೊಸ್‌ರ್ ಗದ್ದೆಲಿ ಮೊರ್‌ಟೆ ಕೊಯ್‌ಲೆ ಮೀನ್
ಕೊಲ್ಲಿ ತೋಡ್‌ಗಳ್‌ಲಿ ನುಲಿ, ಬಾನ, ಎಸಂಡ್॥
ನಿಸರ್ಗದ ಜಲಮೂಲಕೆ ಬೆತ್ತವಾಟೆ ಬುಡಗ
ತಿಳಿಯೊಕು ಇಲ್ಲಿ ಕೃಸಿ ಗುಡಿ ಕೈಗಾರಿಕೆಗಳ್‌ನ
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಹೂನಾರತಿ ॥

ಪಟ್ಟೆ ಪೀತಾಂಬರ ಕೈಲಿ ಕೊಳೆಲ್‌ನಂಗೆ
ದನಗಳ ಮೆಂಟೆನ ಸದ್ದ್ ಕೊಳಲ್‌ನ ದನಿಗೆ
ಇಳಿವ ಜಲಧಾರೆ ಧುಮ್‌ಕುವ ಜಲಪಾತಗ
ಹರಿಯೊದು ಕಾವೇರಿ ಮಡಿಲ್ ತುಂಬುವಂಗೆ ॥
ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಫಲಪುಷ್ಪದಾರತಿ ॥

ಶ್ರೀ ಕೃಷ್ಣನೆ ಎತ್ತುವೆ ನಿಂಗೆ ಗಂಧ ಧೂಪದಾರತಿ ॥
ಶ್ರೀ ಕೃಷ್ಣನೆ ಎತ್ತುವೆ ಜಯ ಮಂಗಳಾರತಿ ॥

* * * * *

ಕೆರೆಗೆ ಹಾರ

ಹೇಳ್ನೆ ಕೇಳಿ....ಹೊನ್ನಮ್ಮನ ಕತೆನ ಪದನ ರೂಪಲಿ.......
ಆಲ್‍ಸಿ ಕೇಳಿ....ಜನರೆ ಕೇಳಿ ....ಆಲ್‍ಸಿದ
ಜನಕೆ ಸೌಭಾಗ್ಯ ಸಂಪತ್ತ್ ಬಂದದೆತೇಳಿ ॥ ಆಲ್‍ಸಿಕೇಳಿ ॥
        ಕೆರೆವೊಂದು ತೋಂಡ್‍ಸಿದೊ, ಜನರ್ನೆಲ್ಲಾ ಕರ್ಸಿದೊ
        ಊರ್‍ಜನ ಕೇರಿಗಿಲ್ಲೆ ದನಕರ್‍ಗೆ ನೀರಿಲ್ಲೆ..................॥
        ದೊಡ್ಡ ಮಳ್ತೆ ಗ್ರಾಮದ ಊರ್ ಗೌಡರ್ ॥
ಚಿಂತೆನ ಮಾಡ್ದೊ । ಹೆಣ್ಣ್‍ನ ಜೊತೆಕೂಡಿ
ಜ್ಯೋತಿಷ್ಯನ ಕೇಳ್ದೊ । ಕೆರೆಗೆ ಹಾರ ಆಕು !
ಕೆರೆಗೊಂದು ಹಾರ ಹೆಣ್ಣ್‍ನದೆ ಬೇಕುಂತೇಳಿ ॥
        ತಳಮಳ ಪಟ್ಟೊ । ಊರುಗೌಡ ಮಲ್ಲಯ್ಯ
        ಅತ್ತಂದಿತ್ತ ನಡ್ದೊ ಮನ ಶಾಂತಿ ಸಿಕ್ಕಿತ್‍ಲೆ ।
        ಕೆರೆಗೊಂದು ಹಾರನೊ ಹೆಣ್ಣ್‍ನದೇ...... ಬೇಕುಂತೇಳಿ ॥
ಕಿರಿ ಸೊಸೆ ಹೊನ್ನಮ್ಮನೆ ಬೇಕುಂತೇಳಿ
ನೀರು ತುಂಬಿ ತುಂಬಿ ಬಂದದೆತೇಳಿ ॥
ಊರಿಗೆ ಪುಣ್ಯ ಕಾರ್ಯ ಒಪ್ಪೊಕು ತೇಳಿ ॥
        ಗೌಡ ಗೌಡ್ತಿ ಮಾತ್‍ಕೇಳಿ ಸಣ್ಣ ಹೈದ
        ಬಸುವಣ್ಣ । ಅಂಜಿ ಅಳ್‍ಕಿ ಓಡ್ತಂವ
        ಕಿರಿಸೊಸೆ ಹೊನ್ನಮ್ಮ ಕೆರೆಗೆ ಹಾರ ಆಕುಂತೇಳಿ ॥
ಮಾತ್‍ಕೇಳಿ ಹೊನ್ನಮ್ಮ ಮನ್ಸ್‍ಲೆ ಅಂಜಿತ್ ।
ಗಟ್ಟಿಮನ್ಸ್ ಮಾಡ್ತವ್‍ಳು ಶಿವನನ್ನೆ ನೆನ್‍ತವಳು
ವಿಧಿ ಬರ್‍ಹತೇಳಿ ತೌರಿಗೆ ಹೊರ್‍ಟತವುಳ್ ॥
        ಮನ್‍ಸೊ ಅಳ್‍ತಿತ್ ಚಿಂತೆನೆ ಮಾಡ್ತಿತ್
        ನಾ.........ಕೆರೆಗೆ ಹಾರಾಗಿ ಹೋನೆ ।
        ನಾ.........ಊರಿಗೆ ನೀರ್‍ನ ತುಂಬಿನೆ ॥
        ಸರಸರ ಹೋಗಿ ಬ್ಯಾಗನೆ ಬಾರವ್ವಾ

ಅತ್ತೆಗೊಂದು ಮಾತ್‌ಹೇಳಿ ತೌರಿಗೆ ಹೊರ್ಟತ್ ।
ಗದ್ದೆ ಏರಿ ಮ್ಯಾಲೆ ಅವುಳ್ ಅಪ್ಪನ ಕಂಡತ್ ॥
ಅಪ್ಪ.........ಯಾಕಾಗಿ ಮಗ್‌ಳೆ ಬಿಸ್‌ಲ್‌ಗೆ ಬಂದೊಳ ?
ಬಾಡ್‌ದ ಮೊಕ ಯಾಕೆ ಹೊತ್ತ್ ಬಂದೊಳ ?
ಹೊ.........ಹಂಗೇನ್ ಇಲ್ಲೆಪ್ಪ ನಿಮ್ಮ ಮೊಕನೊಮ್ಮೆ ನೋಡಿಕಂಡ್
ಬಂದ ಹಾದಿಲೆ ನಾನ್ ಬ್ಯಾಗ ಹೋನೆಪ್ಪಾ ॥
ಅವ್ವ............ಎಂದೊ ಬಾರದ ಹೊನ್ನಮ್ಮಾ–ಇಂದೇಕೆ ಬಸ್‌ಲ್‌ಲಿ
ಕಣ್ಣೀರ್ ಸೊರ್ಸಿಕಂಡ್ ಬಂದ ಮಗಳೆ ?
ಹೊ...........ಬಾರಿ ದಿನ ಆತ್ ನಿನ್ನ ನೋಡಿ ನನ್ನವ್ವಾ
ನಿನ್ನ ನೋಡಿಕೆ ತೇಳಿ ನಾನ್ ಬಂದೆವ್ವ ॥ ....॥
ನಿರೂಃಪಕ
ತೌರುನ ತುತ್ತ್‌ನ ತಿಂದತ್ ಹೊನ್ನಮ್ಮ
ಅಂಗಳಕೆ ಸೆಗ್‌ಣಿ ಸಾರ್ಸಿ ತೊಳ್ಸಿಗಿಡ ನೆಟ್ಟತ್ ॥
ಬ್ಯಾಗ ಬ್ಯಾಗ ಬಂದ ದಾರಿಲೇ..............ಹಿಂದೆ ನಡ್ತ್‌ವ್‌ಳ್ ॥
ಹಂಗೆ.......ಬಂದ ಹಾದೀನೆ ಒಮ್ಮೆ ತಿರ್‌ಗಿ ನೋಡ್ತ್ ಹೊನ್ನಮ್ಮಾ.......
(ಹೊನ್ನಮ್ಮ ಮನೆಗೆ ಬಂದ್)
ಅಕ್ಕೀನ ಸೋಸಿತ್ । ಉಕ್ಕಿತ್ ಕಣ್ಣೀರ್ ।
ಬ್ಯಾಗ ಬ್ಯಾಗ ಮಿೊಕಂಡ್ ಬಂದೇ ಬುಡ್ತ್ ಹೆಣ್ಮಗಳ್ ! ।
ಬಿಲ್‌ಪತ್ರೆ ಸೊಪ್ಪ್ ತಂದ್ ಹುಲ್ಲ್‌ನ ಸಿಂಪೆನ ಮಾಡ್ತವಳ್
ಗಂಗೆ ಪೂಜೆ ಮಾಡಿಕೆ ವಿಭೂತಿ ಧರ್ಸಿತ್ ॥
ಸೀರೆ ಸೆರ್‌ಗ್ ಬಿಗಿಕಟ್ಟಿ ಹೂನ ಮಾಲೆ ಮುಡ್ಕಂಡ್
ಕೆರೆ ಕಡೆಗೆ ಹೋಕೆ ಪೂಜೆ ತಟ್ಟೆ ಹಿಡ್ಕಂತ್ । ....
ಸರ ಸರ ಸದ್ದ್‌ಯಿಲ್ಲದೆ ಮೆಟ್ಟಲ್ ಇಳ್ತವ್‌ಳ
ಗಟ್ಟಿ ಮನಸ್ ಮಾಡಿ ಶಿವನನ್ನೆ ನೆನ್ತವಳ್ ॥

ಮಡ್ಗಿತ್ ಹೊನ್ನಮ್ಮಾ ಸುರುನ ಹೆಜ್ಜೆ ।
ಮಾಡ್ತವ್ಳು ಕಿರಿಸೊಸೆ ಗಂಗೆಪೂಜೆ ॥
ಬಂದವರ್ದ್ ಉಂಡಾತ್ ನೈವೇದ್ಯ ಪಾಯ್ಸ
ಅವರವರ ಬಟ್ಟಲ ಕೈಲೇ ಹಿಡ್ಕಂಡ್
ಹೊನ್ನಮ್ಮ ಗಂಗೆ ಪೂಜೆ ಮಾಡ್ಕಾಕನ
ಕೆರೆಲಿ ಜಲ ವುಕ್ಕಿ ವುಕ್ಕಿ ಬಂದೋತು
ಬೇಕ್ಂತ ಬೆಳ್ಳಿ ಬಟ್ಲ್ನ ಕೆರೆಲೆ ಬುಟ್ಟ್‌ಬಂದೊ
ಯಾರೊ ಹೇಳ್ದೊ ಬೆಳ್ಳಿ ಬಟ್ಲ್ ಅಲ್ಲೆ ಬುಟ್ಟ್‌ಹೋತು
ಮನೆಯವು :ನಾಗವ್ವಾ ನಾಗವ್ವಾ ನೀರ್‌ಗಿಳ್ದ್ ಹೋಗವ್ವಾ
ಬೆಳ್ಳಿ ಬಟ್ಲ್ನ ಹೋಗಿ ತಕಬಾರವ್ವಾ ॥ ನಾಗವ್ವ :
ಅಯ್ಯಯ್ಯಪ್ಪೊ ಅವ್ವನವ್ವೆ ನಂಗೆ ಹೋಕಾದುಲ್ಯೊ
ನೀರ್ ತುಂಬಿ ಬರ್ತಾವುಟ್ಟು ನಂಗಂತು ಹೆದ್ರಿಕೆ ಆದೆವ್ವ............
ಜಲವುಕ್ಕಿ ಬರ್ತಾವುಟ್ಟು ಜೀವದ ಭಯ ಆಗ್ತಾವುಟ್ಟು
ನಂಗಾದುಲೆ ಅವ್ವಾ । ಶಿವ ಶಿವಾ ನಂಗಾದುಲೇ.....
ಎರ್‌ಡನೆ ಮೆಟ್ಲ್‌ಗೆ ಮೊಣ್‌ಕಾಲ್ ಮುಚ್ಚಿತ್ ನೀರ್
ಮೂರ್ನೆ ಮೆಟ್ಲ್ ಏರಿಕೆ ಹೋತು ಹೊನ್ನಮ್ಮಾ...........
ಸೊಂಟಕ್ಕೆ ಬಾತವ್ವ ರಭಸಂದ ಗಂಗವ್ವ ತಾಯಿ
ನಾಲ್ಕನೆ ಮೆಟ್ಲ್‌ಗೆ ಕುತ್ತಿಗೆಗೆ ನೀರವ್ವ............
ಐದನೆ ಮೆಟ್ಲ್‌ಗೆ ಕಿರಿ ಸೊಸೆ ಹೊನ್ನಮ್ಮಾ
ನೀರ್‌ನ ಸುಳಿಗೆ......ನೀರ್‌ನ....ಸುಳಿಗೆ.......ಸಿಕ್ಕಿ ಹೋತು ಹೊನ್ನಮ್ಮಾ
ನೀರ್‌ನ ಸುಳಿಯೊಳಗೆ ಹಾರಆಗಿ ಹೋತವ್ಳ್ ॥
ಊರ್‌ಜನ ಕೇರಿ ಜನ ನೋಡ್ತಾ ನೋಡ್ತಾಯಿರ್‌ಕನೆ
ಗಂಗೆ ತಾಯಿ ಸುಳಿಲೆ ಎಳ್ಕಂಡೋತವಳ್‌ನಾ ॥

* * * * *

ಭಾಗ–2

ಗಂಡ ಮಾದೇವಂಗೆ ಕನ್ಸೊಂದು ಕಟ್ಟಿತ್
ಕಟ್ಸಿದ ಮನೆಮುರ್ದ್ ಬಿದ್ದಂಗೆ ॥
        ಬೆಳಿ ಕುದುರೆ ಏರಿಕಂಡ್ । ಜೀನನ ಎಳ್ಕಂಡ್
        ತಕ್ಷಣ ಊರಿಗೆ ಓಡಿ ಬಾತ್ ಮಾದೇವಾ ॥
ದೂರ ಅಂಗಳಲಿ ಅಪ್ಪವ್ವನ ಕಂಡತಂವ !
ಮೊಕಯೆತ್ತಿ ಮಾತೇ ಆಡ್ತ್ಲೆ ಮಂಜನೊಟ್ಟಿಗೆ......॥
        ಕಾಲ್ತೊಳೆಕೆ ನೀರೂಯಿಲ್ಲೆ ಕುಡಿಯಕೆ ಹಾಲೂಯಿಲ್ಲೆ
        ಮೊಕ ಎಲ್ಲಾ ಬಾಡಿದಂಗಿತ್ತ್ ! ಬಾಡಿ...........ದಂಗಿತ್ತ್ ॥
ಅವ್ವಾ ಅಪ್ಪಾ ಕನಸೊಂದ ಕಂಡೆನವ್ವಾ
ಹೊನ್ನಮ್ಮಳೆಲ್ಲಿ ಹೋತು ಎಲ್ಲಿಗೆ ? ಅಷ್ಟೊತ್ತಿಗೆ !
        ತಮ್ಮ ಬಸುವಯ್ಯ ಹೇಳ್ದ ಮಾತ್‌ಕೇಳಿ
        ಮೈಗೆಲ್ಲಾ ಮುಳ್ಳು ಕುತ್ತಿದಂಗಾತ್ ॥
ಓಡ್ತಂವ ಮಾದೇವಾ ಕೆರೆದಂಡೆಗೆ
ಹಾರ ಕೆರೆತುಂಬಿ ಸುಳಿಯುವ ಸುಳಿನ ಕಂಡ್
        ಬೇಡಿ ಬೇಡಿ ಕರ್ತಂವ ಹೆಣ್ಣ್‌ನ ಮಾದೇವಾ ॥
        ಕೆರೆ ತುಂಬಿ ತುಳ್‌ಕ್‌ತಾಯಿತ್ತ್
        ಸುಳಿಯೊಂದು ಸುತ್ತ್‌ತ್ತಾಯಿತ್ತ್
        ನೀರ್‌ಲಿ ಸೂರ್ಯ ಕಾಣುವಂಗಿತ್ತ್ !!!
ಲಕ್ಷಕ್ಕೊಂದು ಸಿಕ್ಕದಂತ ಹೆಣ್ಣ್ ಹೊನ್ನಮ್ಮಾ !
ಮುತ್ತುನ ಓಲೆ ತಂದೊಳೆ ಧರ್‌ಸೊ ಭಾಗ್ಯ ನಿಂಗಿಲ್ಲೆ..................
        ಕಣ್ಣೀರ್ ಕೋಡಿ ಹರ್ಸಿತ್ ಮಾದೇವಾ
        ದಂಡೆಮ್ಯಾಲೆ ಓಡಾಡ್ತ್ ಬೀಸ್‌ಕತ್ತಿ ಬೀಸ್ ಕಂಡೇ.............
ಊರು ಜನ ಕೇರಿಜೆನ ನೋಡ್ತಾ ನೋಡ್ತಾಯಿದ್ದಂಗೆ
ಬಾರದ ಹೆಣ್ಣ್‌ನ ಸೇರಿಕೆತೇಳಿ..........ಹಾರ್ತ್ ಕೆರೆಗೆ ಮಾದೇವಾ..........
ಗಂಗೆ ತಾಯಿ ಸುಳಿಲೆ ಹೊನ್ನಮ್ಮನ ಕೂಡಿಕಣ್ತ್ ಮಾದೇವಾ ॥
        ಹಾರ್ತ್ ಕೆರೆಗೆ ಮಾದೇವಾ ಗಂಗೆ ತಾಯಿ ಸುಳಿಲೆ
        ಕೂಡಿಕಣ್ತ್ ಮಾದೇವಾ.........॥ ಕೂಡಿ ಕಣ್ತ್ ಮಾದೇವಾ ॥

ಹುತಾತ್ಮರ ನೆನ್‌ಪುಲಿ

ಸ್ವತಂತ್ರ ಹೋರಾಟಗಾರ ಕ್ರಾಂತಿವೀರ ॥
ಗುಡ್ಡೆ ಮನೆ ಅಪ್ಪಯ್ಯ ಗೌಡರ ॥
ಸಂಸ್ಮರಣೆ ದಿನತೇಳಿ ಕರ್‍ದೊ – ಹುತಾತ್ಮರ ನೆನ್‌ಪ್‌ಲಿ ॥

ನೆಹರು ಪಾರ್ಕ್‌ ಸುದರ್ಶನ ವೃತ್ತಕೆ ಗಣ್ಯರ್
ಬಂದೊ ಶಿಸ್ತ್‌ಲಿ ನಿತ್ತೊ ॥
ಹೂಗುಚ್ಚ ಮಡ್‌ಗಿ ನಮಿಸಿದೊ ಗೌರವಂದ ॥

ಭಾರತ ಸೇವಾದಳ ಮಕ್ಕ ನಮನ ಹಾಡ್‌ದೊ ॥
ಹುತಾತ್ಮ ಸೇನಾನಿಗಳ ಸಂಸ್ಮರಣೆ ಗೀತೆನ ॥

ತ್ಯಾಗ ಬಲಿದಾನದ ಗುರ್‌ತು ಸಂಸ್ಮರಣೆ ದಿನ ॥
ಸ್ಮಾರಕ ಭವನ ನಿರ್ಮಾಣದ ಸಂಕಲ್ಪ ಅಂದ್ ॥

ಆಂಗ್ಲರ ವಿರುದ್ದದ ಹೋರಾಟಕ್ಕೆ ಸಂಘಟನೆ
ಅನಿವಾರ್ಯ ಆಗಿತ್ತಂದ್
ಅದ್ಕಾಗಿ ಸಂಘಟನೆ ವಿಸ್ತಾರ ಸ್ವರೂಪದಾಗಿತ್ತ್ ॥

ಹೋರಾಟ, ಶೌರ್ಯ, ತ್ಯಾಗ ಬಲಿದಾನದ ಗುರ್‌ತಾಗಿ
ಸಾರ್‌ವಂತಾಗಲಿ ದೇಶದ ಮೂಲೆ ಮೂಲೆಗಳಲಿ ॥

ವಾರ್ತಾ ಇಲಾಖೆ , ಕನ್ನಡ ಸಂಸ್ಕೃತಿ ಇಲಾಖೆ ॥
ಒಂದಾಗಿ ಕೂಡಿ ಸಂಸ್ಮಾರಕ ಭವನ ನಿರ್ಮಾಣಕ್ಕೆ ಸಂಕಲ್ಪ ॥

ರೈತದಂಗೆ ಹೋರಾಟಲಿ ಹುತಾತ್ಮರಾದ
ಹದಿಮೂರು ಜನರ ಸಂಸ್ಮರಣೆ ಆದಿನ ॥
(31–10–1837)

* * * * *

ತ್ಯಾಗ

ಪ್ರಕೃತಿಸಿರಿ ಪೊರ್ಲುನ ಕೊಡ್ಲ್‌ನ ಮೂಲೆ । ದೊಡ್ಡ ಮಳ್ತೆ ಗ್ರಾಮಲಿ
ಜನಪದ ಇತಿಹಾಸದ ಕೆರೆಕತೆವೊಂದು ॥

ಕನ್ನಡ ಕುಲದ ಹೊನ್ನಮ್ಮನ ತ್ಯಾಗ ಬಲಿದಾನದ ಕತೆ
ಕಣ್ಣೀರ್‌ನ ಕತೆ ಆತ್ – ತುಂಬಿದ ಕೆರೆ ನೀರಾತ್ ॥

ತುಂಬಿದ ಕೆರೆ ಹೊನ್ನಮ್ಮನ ಕೆರೆನ ನೋಡಿಕೆ ಪೋಯಿ ॥
ಸ್ವಾಮಾರ ಪ್ಯಾಟೆನ ದೊಡ್ಡಮಳ್ತೆ ಗ್ರಾಮದ ಹೊನ್ನಮ್ಮನ ಕೆರೆಗೆ ॥

ಅಲ್ಲಿರ್‌ವ ಪ್ರಕೃತಿ ಸಿರಿ ಸೊಬಗ್‌ನ ಕಣ್ ತುಂಬ್ಲೊನ ॥
ಬೆಟ್ಟ ಹತ್ತಿ ಕೊಡಿಲಿ ನಿತ್ತ್ ಪೊರ್ಲು ನೋಡೊನ ದೂರಕೆ ಮುಟ್ಟ॥

ಅತ್ತ ಗವಿಬೆಟ್ಟ ಜಲನೀರ್ ಗುಹೆ ಒಳಗೆಂದ ॥
ಇತ್ತ ಮೋರಿಬೆಟ್ಟ ವನವಾಸದ ಕಲ್ಲ್‌ಗ ॥

ಪಾಂಡವರ ವನವಾಸದ ಕಲ್ಲ್‌ನ ಮನೆಗತೇಳ್ವ
ಕುರುಹುಗಳ ಗುರ್‌ತು ಅಲ್ಲಿ ॥

ಹೆಣ್ಣ್‌ನ ಕಾಣದ ಪತಿರಾಯಾ ಓಡಿ ಬಂದ ರಭಸಕ್ಕೆ
ಕುದುರೆನ ಹೆಜ್ಜೆಗುರ್ತಾತ್ ತೇಳ್ವ ಮಾತುಟ್ಟು ಕಲ್ಲ್‌ಮ್ಯಾಲೆ ॥

ತುಂಬಿದ ಕೆರೆ ನೀರ್ ರೈತಜನಕೆ
ದೇವಿ ಸ್ವರೂಪ ಹೊನ್ನಮ್ಮನ ಕೆರೆಗ ॥

ಬಾಗಿನ ಪೂಜೆ ಹೊನ್ನಮ್ಮಂಗೆ ಕೆರೆಲಿ
ಮುತ್ತೈದೆರ ಪೂಜೆ ಸತಿ ಹೊನ್ನಮ್ಮಂಗೆ ॥

ತುಂಬಿದ ಕೆರೆ ನೀರ್ ತ್ಯಾಗದ ಭೂಮಿಲಿ
ತೆನೆತುಂಬಿ ಬೆಳ್‌ದದೆ ಪೈರ್ ಅಲ್ಲಿ ॥

* * * * *

ಹುತಾತ್ಮ (ರೂಪಕ)

ಸ್ವತಂತ್ರ ಪೂರ್ವದ ಹೋರಾಟಗಾರ ನಮ್ಮ
ಗುಡ್ಡೆಮನೆ ಅಪ್ಪಯ್ಯಗೌಡ ॥ 31–10–1837
ಈ ಮಣ್ಣ್‌ನ ಸ್ವತಂತ್ರಕೆ ಹೋರಾಡ್ದ
ವೀರನ ಹೆಸ್‌ರ್ ಅಳ್ಡ್ ಹೋಗಿತ್ತಲ್ಲಾ....... ಆಹಾ ಅಳ್ಡ್ ಹೋಗಿತ್ತಲ್ಲಾ॥
ಸ್ವತಂತ್ರ ಪೂರ್ವದ ವೀರಯೋಧನೆ
ಎಲ್ಲಿ ಅಣ್‌ಗಿದ್ದಾ ?
ಆಂಗ್ಲರ ದರ್ಬಾರಿಗೆ ನೀನ್ ಕಂಟಕ ಆಗಿದ್ದ್ಯಲ್ಲಾ ?.............
ಆಹಾ ಕಂಟಕ ಆಗಿದ್ದಲಾ॥
ವೀರನ ಮರಣನ ಕಣ್ಮುಂದೆ ಕಂಡ್.......
ಕಣ್ಣೀರ್ ಸೊರ್ಸಿದವೆಷ್ಟೊ? ।
ನಿನ್ನಹಿಡಿವ ಆಸೆಗೆ ಹತ್ತ್ ಸಾವಿರ ಕಂತೆನ ಕಟ್ಟಿದೊ............
ಆಹಾ ಕಂತೆನ ಕಟ್ಟಿದೊ॥
ಆ ಸಾಹಸ ಕತೆ ಇಂದೂ ಉಟ್ಟಲ್ಲೊ.............................
ಆಹಾ ಇಂದೂ ಉಟ್ಟಲ್ಲೊ?

ಮಂದಿ ಕೂಡಿ ಕ್ರಾಂತಿಗಿಳ್ದ್ । ಗಲ್ಲ್ ಶಿಕ್ಷೆ ಆತಲ್ಲೊ............
ಆಹಾ ಗಲ್ಲ್ ಶಿಕ್ಷೆ ಆತಲ್ಲೊ ॥
ಆಂಗ್ಲರ ಅಧಿಕಾರದ ಕೇಡ್‌ಗರ ಕೈಗೆ ಸಿಕ್ಕಿ ....
ಆಹಾ –ಹಾರ ಆದ್ಯಲ್ಲೊ..............
ಮಡ್ಕೆರಿ ಕ್ವಾಟೆ ಎದ್‌ರ್ ॥ಗಲ್ಲ್ ಬಾಮಿನ ನೇಣ್ ಕಂಬಕೆ॥
ನಿನ್ನ ದೇಹ ಶರಣ್ ಆತಲ್ಲೊ ....
ಆಹಾ ಶರಣ್ ಆತಲ್ಲೊ॥
ನಿನ್ನ...........ಸಾಹಸಕತೆ ಹಂಗೆ ಅಳ್ದ್ ಹೋತಲ್ಲೊ.....॥ (ಮಾತ್‌ಲಿ)
1837 ಸಾವಿರದ ಎಂಟುನೂರ ಮೂವತ್ತೇಳ್ ಅಕ್ಟೋಬರ್ 31 ಹಾಡ್–
ಕ್ರಾಂತಿನ ಕಿಡಿ ಒಂದು ಆರಿಹೋತಲ್ಲೊ ....॥

ಆಹಾ ಆರಿಹೋತಲ್ಲೋ॥

ಗಲ್ಲ್ ಕಂಬದ ನೇಣ್ ಬಾಮಿಗೆ !

ಶರಣಾಗಿ ಹೋತಲ್ಲೋ........ಆಹಾ ಶರಣಾಗಿ ಹೋತಲ್ಲೋ ॥

ಕಿಡಿ ಒಂದು ಆರಿ ಹೋತಲ್ಲೋ......

ಆಹಾ ಆರಿ ಹೋತಲ್ಲೋ॥

ಕೇಳ್ದನಾನ್.....!...!....ಕೇಳ್ದ ನಾನ್ ಪದ್ಯದ ರೂಪಲಿ ।

ಕೋ.ಸ. ಕಾರ್ಯಪ್ಪ ಅವರಾ ॥ ಗಂಟಲ್ ದೊನಿಂದಾ...........

ಆಹಾ ಗಂಟಲ್ ದೊನಿಂದಾ॥

(ಮಾತ್‌ಲಿ) ಅಪ್ಪಯ್ಯಗೌಡನ ಇತಿಹಾಸ ತಿಳಿಯದ ನಾನ್ ಕೇಳ್ತಾಕುದ್ದಿದ್ದೆ.

ಅವರ ಹಾಡ್‌ನ ಅಭಿನಯ ಕಂಡ್ ನಂಗೆ ನೆಗೆನೆ ಬಂದ್!

ಒಳಗಡೆ ಬಂದ್ ನೆಗಾಡ್ದೆ.

......ಆದರೆ ಅಪ್ಪಯ್ಯ ಗೌಡ ಗಲ್ಲಿಗೇರ್‌ದ ಕತೆನ

ಪದ್ಯದ ಅರ್ತ ಗೊತ್ತಾಗಿ ನಂಗೆ ದುಕ್ಕ ಆಗೋತು

ಬಾರಿ ದುಕ್ಕ ಆಗೋತು ॥

ಅದ್ಕೂ ಹಿಂದೆ ಸುರುಗೆ ಓದಿದ್ದೆ ಗೌಡದೊನಿತೇಳ್ವ 1970

ಪುಸ್ತಕ ಒಂದರ್ಲಿ. ಆಹಾ! ಅದರ್ಲಿತ್ತ್ ಅರೆಬಾಸೆ ಗೌಡ ಕ್ರಾಂತಿವೀರ

ಅಪ್ಪಯ್ಯಗೌಡ ಸ್ವತಂತ್ರ ಹೋರಾಟಗಾರನ ಸಾಹಸ ಕತೆ

ಕ್ರಾಂತಿ ವೀರ ಅಪ್ಪಯ್ಯಗೌಡನ ಕತೆಯಿತ್ತ್!

ಆಹಾ ಅದರ್ಲಿ ಕತೆಯೊಂದಿತ್ತ್ ಕಣ್ಣೀರ್ ಕತೆಯಿತ್ತ್!

ಮತ್ತೊಮ್ಮೆ ಓದಿದ್ದೆ (1997) ಕೊಡಗ್ ಸಂಗಾತಿ ತೇಳ್ವ

ಅರೆಭಾಷೆ ಪತ್ರಿಕೆನಾ। ಓಹೋ ಅರೆಬಾಸೆ ಪತ್ರಿಕೆನಾ!

ಗೌಡದೊನಿ ಎಬ್ಬಿಸಿತ್। ದೊಡ್ಡ ದೊನಿನಾ ।......... ॥

ಸಂಗಾತಿ ಮೂಡ್ಸಿತ್ ಜಾಗೃತಿನಾ............................. ॥

ಇತಿಹಾಸ ಪೂರ್ವದ ಗೌಡ ಧೀರನ ನೆನ್‌ಪುನಾ........ಓ........ಓ.......

ಇತಿಹಾಸ ಪೂರ್ವದ ಧೀರನ ನೆನ್‌ಪುನಾ ॥

ಅವಸ್ಯ ಬೇಕಾತ್ ।ನಾಟಕ ಒಂದು !
ಬೇಕಾತ್ ನಮ್ಮಾ ಮಹಿಳಾ ಕೂಟಕ್ಕೆ ॥ಆಹಾ
ಆಗಲೆ ಬರ್ದೆ!!! ನಾಟಕ ರೂಪಲಿ ಅಚ್ಚುನು ಹಾಕ್ಸಿದೆ
ಅಕ್ಷಯ ಕೃತಿಲಿ । ಬುಡುಗಡೆಆತ್
ವಿದ್ಯಾ ಸಂಘದ ಶತಮಾನೋತ್ಸವಲಿ
ಆಹಾ.....................................॥
ಪ್ರಸಾರನು ಮಾಡ್ದೊ ಹುತಾತ್ಮರ ದಿನಕೆ ಅಕ್ಟೋಬರ್31
ಮಡ್ಕೇರಿ ಬಾನುಲಿ ಅರೆಬಾಸೆ ವಿಬಾಗಲಿ
ಆಹಾ ಅರೆಬಾಸೆ ವಿಬಾಗಲಿ............॥
ಅಡಂಗಿಕೆ ಬುಟ್ಟತ್‌ಲೆ ಮಂದಿ ಮಹನೀಯರ್‌ಗಾ
ಆಹಾ......ಮಂದಿ ಮಹನೀಯರ್‌ಗಾ ॥
ಅಡಂಗಿಕೆ ಬುಟ್ಟತ್‌ಲೆ ಮಂದಿ ಮಹನೀಯರ್‌ಗಾ
ಸ್ಮಾರಕ ಬೇಕುತೇಳಿ ದೊನಿನೂ ಹೊರ್ಡಿಸಿದೊ ॥
ದೃಷ್ಟಿನು ಸೆಳ್ದೊ ಸರ್ಕಾರದ್ !! ಆಹಾ ಜಾಗನು ನೋಡಿಟ್ಟೊ !
ಮಡ್ಕೇರಿ ನಗರದ ಸುದರ್ಶನ ವೃತ್ತಲೆ॥
ಸ್ಮಾರಕದರ್ಶನ ಎಲ್ಲವುಕು ಸಿಕ್ಕೊಕುತೇಳಿ
ಸುದರ್ಶನ ವೃತ್ತದ ಹಕ್ಕಲೆ !
ಗೌಡ ಸಮಾಜದ ದಾರಿಲೊಂದಿತ್ತ್ ಈ ಹೆಸರ್‌ನ ಬರಹದ ಶಿಲೆಯೊಂದಿತ್ತ್.
ಅದ್......ಕೇಡ್‌ಗರ ಕಲ್ಲ್‌ನ ಪೆಟ್ಟಿಗೆ ಗುರಿ ಆತಲ್ಲೊ..........ಆಹಾ........
ಅನ್ಯಾಯ ಆತಲೆ!!! ಅನ್ಯಾಯ ಆತಲೆ !
ಸ್ವತಂತ್ರ ಹೋರಾಟಗಾರ ವೀರನ
ಹೆಸ್‌ರಿಗೆ ಅನ್ಯಾಯ ಆತಲ್ಲಾ..........ಆಗ.............!!!

ಎಚ್ಚರಾದೊ ಜನ ಹೇಳ್ದೊ ಹಿಂಗಾತಲಾ ಅನ್ಯಾಯ ಆತಲೆ ಗೌಡಂಗೆ !
ಅವನ ಹೆಸರ್‌ರಿಗೆ ನ್ಯಾಯಸಿಕ್ಕಿತ್‌ಲೆ
ಹೌದು ....ನ್ಯಾ......ಯಾ.......ಸಿಕ್ಕೊಕು !

ಮಂದಿ ಮಹನೀಯರ್ ಕೊಡ್ದೊ
ಸರ್ಕಾರದ ಗಮನ ಸೆಳ್ದೊ–ಕಡೆಗೂ ಈ ನೆಲದ ದೀರರ ಸಾಲ್‌ನ
ಸುರುನ ಸ್ವತಂತ್ರ ಹೋರಾಟಗಾರನ ಹೆಸರ್ ಸ್ಥಿರಾಗಿ ಉಳ್ತಲ್ಲೊ ॥
2011 ಮಡಿಕೇರಿ ನಗರದ ಸುದರ್ಶನ ವೃತ್ತದ ಹಕ್ಕಲೆ
ಸ್ಮಾರಕನು ಆತ್–ಅರೆಬಾಸೆಗೊಂದು ಅಕಾಡೆಮಿನು ಆತ್ ।
ಈ ಕತೆಗೆ ಪದ್ಯನು ಬರೆಕಾತ್ ಆಹಾ..........ಪದ್ಯನು......ಬರೆಕಾತ್।
ತಲೆಗೆ ಮುಂಡಾಸ್ ಬಿಗ್ದ್ ಕೈಲಿ ಒಡಿಕತ್ತಿ ಹಿಡ್ದ್
ಕುದುರೆಲಿ ಕುದ್ದ್ ಚಿನ್ನದ ರಂಗ್‌ಲಿ ಮಿಂಚ್‌ತ್ತಿರ್‌ವ
ಕ್ರಾಂತಿವೀರ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ
ಅಪ್ಪಯ್ಯಗೌಡನ
ನೆನ್‌ಪು ಯಾಗೊಳು ಇಲ್ಲ್ಯಟ್ಟು ! ಆಹಾ............
ಯಾಗೊಳು ಇಲ್ಲ್ಯಟ್ಟು ಮಾತ್‌ಲಿ
ಸ್ಮಾರಕ ಆತ್ ಅರೆಬಾಸೆ ಅಕಾಡೆಮಿ ಬಾತ್
ಮುಖ್ಯ ಮಂತ್ರ ಪಟ್ಟಲಿ ಕುದ್ದ್ ಉದ್‌ಗಾಟನೆ
ಮಾಡ್ದಂತ ಧೀರಗಂಡ್ ಕನ್ನಡ ಜಿಲ್ಲೆನ
ದೇವರ ಗುಂಡ ಸದಾನಂದ ಗೌಡರ್ ॥
ಅರೆಬಾಷೆ ಬೆಳ್ಸಿಕೆ ಕೈಸೇರ್ಸಿದೊ
ಸ್ಪೀಕರ್ ಪಟ್ಟಕೇರ್ದ ಕೊಡ್ಗ್‌ನ ಮಂಜ
ಕೊಂಬಾರನ ಬೋಪಯ್ಯನವ್........ಹಾಡ್
ಅರೆಬಾಷೆ ಸಂಸ್ಕೃತಿ ಬೆಳ್ಸೊನ ।
ಸಾಹಿತ್ಯರೂಪಲಿ ಉಳ್ಸೊನ ॥ ಸಾಹಿತ್ಯ ರೂಪಲಿ ಉಳ್ಸೊನಾ ॥
ಪ್ರೀತಿ ವಿಶ್ವಾಸ ಒಗ್ಗಟ್ಟ್ ಬೆಳ್ಸೊನ
ಮುಂದೆನ ಭವ್ಶ್ಯನ ಕಾಯೋನಾ ॥

* * * * *

ದಾನಿಗಳ ನೆನ್‌ಪು

ಪ್ರಕೃತಿ ಸಿರಿ ವನರಾಶಿನ ಕೊಡಗ್ ನಾಡ್
ವಿಶಿಷ್ಟ ಸಂಸ್ಕೃತಿಯ ಈ ನಾಡ್
ಹೊಳೆತೋಡು, ಕುಂದುಬೆಟ್ಟಗಳ ಸಾಲ್
ವೀರ ಪರಂಪರೆನ ಈ ನಾಡ್ ॥

ಇಗ್ಗುತಪ್ಪ ಪಾಲೂರಪ್ಪ ತಮ್ಮ ಮಾದೂರಪ್ಪ
ತಂಗೆ ಪನ್ನಂಗಾಲತಮ್ಮೆ ದೇವತೆಗ
ನೆರೆರಾಜ್ಯ ಕೇರಳಂದ ಬಂದ್ ಈ ನಾಡ್‌ಲಿ
ನೆಲ್‌ಸಿದೊ ತೇಳ್ವ ಕತೆ ಹಿಂದೆನದ್ ॥

ಇಲ್ಲಿನ ಆಚಾರ ವಿಚಾರಧಾರೆ ಚಿಂತಕರಿಗೆ
ನೆಲೆಯಾತ್ ಅಂದ್‌ನ ಕಾಲ ಘಟ್ಟಲಿ
ಜನ ಅಂತೂ ಇಷ್ಟಿತ್ತ್‌ಲೆ ಆದರೂ ವಿದ್ಯೆತೇಳ್ದು
ಬೆರಳ್ ಲೆಕ್ಕಕ್ಕೂ ಕಮ್ಮಿ ಅಂದ್ ಯಿತ್ತ್ ॥

ಹಿಂಗಿರ್‌ಕನ ವಿದ್ಯೆನ ಅವಶ್ಯಕತೆನ ಕಂಡ್
ಆಂಗ್ಲರ್ ನೆಲ್‌ಸಿದ್ದ ಕೊಡಗ್‌ನಾಡ್‌ಲಿ
ಚಿಂತನ ಶೀಲರ್ ಕೂಡಿ ಚಿಂತಿಸಿದೊ
ಆಗ ಗೊತ್ತಾತ್ ಅವ್‌ಕೆ ವಿದ್ಯೆ ತೇಳುವ ಬೆಳ್‌ಕ್ ॥

ಹಿಂಗೆ ಮನ್ಸ್‌ಲಿ ಹರ್‌ದ್ ಬಾಕನ
ಕಾರ್ಯ ರೂಪಕ್ಕಿಳ್ದೊ –ಏಳ್ ಊರುಗಳ ಒಡೆಯ
ಶ್ರೀ ಪಾಲೂರಪ್ಪ ನೆಲ್‌ಸಿದ ರಾಜ ಮಾರ್ಗದ ಬರಿಲೆ
ಬೆಟ್ಟೆಗೇರಿ ತೇಳ್‌ವ ಊರ್‌ನ ಮಧ್ಯಭಾಗಲಿ ॥

ಮುಂದೆನ ಪೀಳಿಗೆ ವಿದ್ಯಾವಂತರಾಗಿ ದೇಶದ
ಸತ್ಪ್ರಜೆಗ ಆಕುತೇಳಿ ಭಾರತದ ಹಿರಿಮೆನ ಹೆಚ್ಚ್‌ಸಿಕೆ
ಜ್ಞಾನಾರ್ಜನೆ ಬೇಕೆಬೇಕುತ ಅನ್ಸ್‌ಕನ
ಮುಂದೆ ಬಂದೊ ಒಬ್ಬ ದಾನಿ
ಮುಂದಾದೊ ಅವು ನಾನೊಂದು ಇಸ್ಕೂಲ್ ಕಟ್ಟಿಸಿನೆತ
ಪಟ್ಟಡ ಮನೆ ಬಿದ್ದಪ್ಪ ತೇಳೊವು ಇಗ್ಗುತ್ತಪ್ಪನ ತಮ್ಮ
ಮಾದೂರಪ್ಪ ನೆಲ್‌ಸಿದ ನೆರೆವೂರು
ಹೆರ್‌ವನಾಡ್ ತೇಳ್‌ವಲ್ಲಿಂದ॥
ಕೈ ಜೋಡ್‌ಸಿದೊ ಜಾತಿ ಬ್ಯಾದನ ಮರ್‌ತ್
ಕೈಲಿಕಾಲ್‌ಲಿ ಮಣ್ಣ್‌ನ ಕಲ್‌ಸಿ ಗ್ವಾಡೆ ಕಟ್ಟಿದೊ,
ಸೂರುಹೊದ್‌ಸಿದೊ ಹುಲ್ಲ್ ಕಂತೆಗಳ್‌ನ ಹಾಸಿದೊ
ಅಲ್ಲಿ ಕುದ್ದ್ ವಿದ್ಯೆ ಕಲ್ತೊ ಶಿಸ್ತ್‌ಲಿ ॥
ಮಾತ್‌ಗೊಂದು ನ್ಯಾಯ ಹೊತ್ತಿದ್ದ ಬಿದ್ದಪ್ಪ
ಇವು ಕುದ್‌ರೆ ಮ್ಯಾಲೆ ಒಡಾಡ್ತ ಯಿದ್ದ ಕಾಲ
ಹಾಲೇರಿ ಅರಸರ ಪ್ರಭಾವ ಆಂಗ್ಲರ ದಬ್ಬಾಳಿಕೆ
ಮಡಿಕೇರಿ ಕ್ವಾಟೆಲಿತ್ತ್ ಅದ್ ಇನ್ನೂ ಜೀವಂತಯಿತ್ತ್ ॥
ಆರಂಬಾದ ಇಸ್ಕೂಲ್‌ಗೆ ಇಬ್ಬೊರು ಶಿಕ್ಷಕರ್
ಅಂದ್‌ನ ಸಂಬಳ ಅವುಕೆ ಎಷ್ಟ್ ಇತ್ತ್ ಗೊತ್ತುಟಾ ?
ಬರಿ ಹನ್ನೆರಡ್ ಆಣೆ ತೇಳೆ ಈಗನ 75 ಪೈಸೆಗ ಮಾತ್ರ
ಅದರ್‍ನ ಆ ದಾನಿಗ ಅವರ ಜೋಬುಂದ ಕೊಡ್ತಾಯಿದ್ದೊ
ಅಂತ ಒಬ್ಬ ಧೀಮಂತ ನಿಷ್ಠೂರವಾದಿ ಇವು ತೇಳಿ ಜನ ಹೇಳ್ತಾಯಿದ್ದೊಗಡ.
ಶತಮಾನ ದಾಟಿತ್ ಇಂದಿಗೆ 105 ವರ್ಷಾತ್

ಇಂದಿಗೂ ಸಾರಿ ಹೇಳ್ತಾವುಟ್ಟು ನೋಡುಗರ ಕಣ್ಣಿಗೆ
ಶಿಲಾ ಫಲಕ ಇಂದೂ ಉಟ್ಟಲ್ಲಿ ಮೂಲ ಪಟ್ಟಡ ಸ್ಕೂಲ್ 1911
ಇಂದ್ ಇದ್ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಆಗುಟ್ಟು
ಕಲ್ತೊ ವಿದ್ಯೆ ವಿದ್ಯೆನ ಲಕ್ಷಕ್ಕೂ ದಾಟಿ
ಸೇರ್ದೊ ಸಾವ್ರಾರ್ ಸೈನ್ಯಕ್ಕೆ ಉನ್ನತ ಪದವಿಗೆ
ರಾಜಕಾರಣಿಗಾದೊ ಸಾಧನೆಗೈದೊ ಹಲವು
ಹಳೆ ವಿದ್ಯಾರ್ಥಿಗ ಮೆಲ್‌ಕುವ ದಿನ ಅದ್ ॥
ಬೆಟ್ಟಗೇರಿ ಮಾದರಿ ಶಾಲೆ ಆಚರಿಸಕಂಡತ್
ಅದರ ಶತಮಾನೋತ್ಸವನ ಕಳೆಗೂಡಿತ್ತಂದ್
ವಾತಾವರಣ ಕಾಂದಿತ್ತಂದ್ ಕಣ್ ತುಂಬಿನೋಡಿಕೆ
ಹಳೆ ವಿದ್ಯಾರ್ಥಿಗ ಬಂದೊ ಕುಸಿ ಪಟ್ಟೊ ಗಲಗಲ ಸದ್ದ್ ಮಾಡ್ದೊ ॥
ಬಂದೊ ಇಲ್ಲಿಗೆ ಗಣ್ಯಪುರ್‌ಷರ್
ಸ್ಪೀಕರ್ ಪಟ್ಟಕೇರ್‌ದ ಕೊಂಬಾರನ ಬೋಪಯ್ಯನವು
ಅವರ ಕೈಯಿಂದ ಗುದ್ದಲಿ ಪೂಜೆ ಮಾಡ್ದೊ
ರಂಗ ಮಂಟಪಕ್ಕೆ ತೇಳಿ ಮೂಡು ದಿಕ್ಕ್‌ಲಿ ॥
ವೀರ ಪರಂಪರೆನ ಕೊಡಗ್‌ನಾಡಲಿ
ಶತಮಾನದ ಕಂಪ್ ಹರ್‌ಂಡಲಿ ಮೂಲೆ ಮೂಲೆಗಳ್‌ಲಿ
ಹಿರಿಯರ ಮಾರ್ಗ ದರ್ಶನದಂಗೆ ಕಿರಿಯೊವು
ಮುನ್ನುಗ್ಗಿ ಮೇಲೆಳಲಿತೇಳಿ ಹಾರೈಸೊನ ॥

ಜೈ ಶಾರದಾಂಬೆ
ಜೈ ಕನ್ನಡಾಂಬೆ

* * * * *

ಜಲಕ್ರೀಡೆ

(ನೀರಾಟ)

ಯಮುನೆ ದಡಲಿ । ಇಂದುವದನೆಗ ಬಂದ್ ।
ಸೀರೆಗಳ ಬಿಚ್ಚಿ ದಡಲಿಟ್ಟ್ । ಗುಂಪಾಗಿ
ನಾರಿಮಣಿಗ ನೀರಿಗಿಳ್ದೋ................
        ಗುಂಪಾಗಿ ನಾರಿಮಣಿಗ ನೀರಿಗಿಳಿಯಕನಾ
        ಕಂಠಲಿದ್ದ ಮುತ್ತು ಹೊಳೆಯ್‌ಕನಾ ।
        ಅಚ್ಯುತಾನಂದನ ಸ್ಮರಣೆ ನಾ ॥
ಅಚ್ಯುತಾನಂದನ ಸ್ಮರಣೆ ಮಾಡಿಕಂಡ್
ಮುಡಿಗಳ ಬಿಚ್ಚಿ ನೀರಿಗಿಳ್ದೊ –ಜಲಕ್ರೀಡೆ
ಆಟನ ಆಡಿಕಂಡ್‌ರ್‌ಕನಾ ॥
        ಎಲ್ಲಿಂದಲೊ ಬಂದಾ ಕೃಷ್ಣ ಅಂವ'
        ಸೀರೆ ರೌಕೆಗಳ ಕದ್ದ್‌ತಂದ್ । ಮರಏರಿ
        ಕುದ್ದ್ ನೆಗಾಡುವವನೆ ಕೃಷ್ಣಾ ॥
ಜಲಕ್ರೀಡೆ ನೋಡ್ತಾ ಜಲಜಾಕ್ಷ ಮರಲಿಕುದ್ದ್ ।
ಜಲಕ್ರೀಡೆ ಮುಗ್‌ಸಿ ಕಾಂತೆಗ । ಬಂದ್‌ನೋಡ್ರೆ
ಬಿಚ್ಚಿಟ್ಟ ಒಡವೆ ವಸ್ತ್ರ ಅಲ್ಲಿಲ್ಲೇ................ ॥
        ಒಯ್ದಂವ ಯಾರಂವ ? ಬಿಚ್ಚಿಟ್ಟ ವಸ್ತ್ರಅಲ್ಲಿಲ್ಲೆ...........
        ಯಾವ ಮೂರ್ಕನಂವ ? ನಮ್ಮಗಳ ವಸ್ತ್ರೆಲ್ಲಿ ?
        ಬಲ್ಲಿದಾ ರಂಗಾಃ ತೇಳಿ ಮರನಾ...................॥
ತಲೆಯೆತ್ತಿ ಮರ ನೋಡ್‌ಕನಾ ನೆಗಾಡ್ತ
ಕುದ್ದಾ ಕೃಷ್ಣನ ಕಂಡೋ ॥ ಕಳ್ಳಕೃಷ್ಣನೆ
ನಮ್ಮ ಒಡವೆ ವಸ್ತ್ರಗಳ ಕೊಡೊ..................ಕೃಷ್ಣಾ ॥

* * * * *

ಕ್ರಿಕೆಟ್ ಮ್ಯಾಚ್

ವಿಶ್ವಕಪ್ ಮುಗ್‌ದಂಗೆ ಕೊಡ್ಗ್‌ಲಿ ಕಪ್ಪ್‌ಗ ಸುರಾದೊ।
ಮನೆ ಮನೆವೆಲ್ಲಾ ಸೇರ್ದ್ರೊ ಒಗ್ಗಟ್ಟ್ ಬೇಕು ನಮ್ಮಲಿತ ॥

ಮ್ಯಾನ್ಸ್ ಕಾಂಪೌಂಡ್ ಮೈದಾನಲಿ "ಕ್ರಿಕೆಟ್ ಮ್ಯಾಚ್" ಉಟ್ಟುತೇಳಿ
ಊರ್‌ನಾಡ್ ಗೌಡುಗಯೆಲ್ಲಾ ಸೇರಿದ್ದೊ ಅಲ್ಲಿ ॥

ಗಣ್ಯರ್ ಬಂದೊ ವೇದಿಕೆಗೆ । ಮಡ್ಗಿದ ದೀಪನ ಬೆಳ್ಗಿದೊ
ದೀಪದ ಹಂಗೆ ಕ್ರಿಕೆಟ್ ಮ್ಯಾಚ್ ಬೆಳ್ಗೊಗಕುತೇಳಿ ಹರ್ಸಿದೊ ॥

ಮೈದಾನ ಸುತ್ತ –ಕುದ್ದ –ಜನ್ರ ಕಣ್ಣೆಲ್ಲ ಗ್ರೌಂಡ್‌ಲಿತ್ತ್.......
ವಿಕೆಟ್ ಬ್ಯಾಟ್‌ಗಳ ಮ್ಯಾಲೆ ದೃಷ್ಟಿ ನೆಟ್ಟಿತ್ತ್ ॥

ಗೂಡೆಗಳು ಬಂದೊ । ಹೈದಂಗಳೊ ಬಂದೊ
ಚಾಂಪಂಗ ಬಂದೊ ಬ್ಯಾಟುನು ಹಿಡ್ದೊ ॥ ವಿಶ್ವ॥

ಅಜ್ಜಿಕ ಪಿಳ್ಳಿಕಳ ಕರ್‌ಕಂಡ್ ಬಂದೊ
ಕುಪ್ಪಿಲಿ ನೀರ್ ಬ್ಯಾಗ್‌ಲಿ ತಿಂಡಿ ಕಟ್ಟಿಕಂಡ್ ಬಂದಿದ್ದೊ ॥

ಮೊದುವೆಗೆ ಬಂದಂಗಾತ್ । ಮ್ಯಾಚ್‌ನು ನೋಡ್ದಂಗಾತ್
ಹೆಣ್ಮಕೆಲ್ಲಾ ವಳ್ಳೊಳ್ಳ ಸೀರೆ ಉಟ್‌ಕಂಡ್ ಬಂದಿದ್ದೊ ॥

ಓಡಿ ಓಡಿ ರನ್ನರ್ಸ್ ಆದೊ । ಬಾರ್ಸಿ ಬಾರ್ಸಿ ಸಿಕ್ಸರ್ಸ್ ಮಾಡ್ದೊ
ನಾವೂ ನೀವೂ ಎಲ್ಲವು ನೋಡ್ದೊ । ಕ್ರಿಕೆಟ್ ಮ್ಯಾಚ್‌ನ ॥

ಮನೆಮನೆಗೊಂದು ತಂಡ । ಕ್ರಿಕೆಟ್ ಮ್ಯಾಚ್ ತಂಡ
ವರ್ಸಕೊಮ್ಮೆ ಕೆದ್‌ಂಬಡಿ ಬಾಣೆಲಿ । ಮನೆ ಮನೆತಂಡಗ ॥

ಸುರುಗೆ ನಡ್ತ್ ಊರೂರ್ ಕಪ್ಪ್‌ಗ । ಕೆದ್‌ಂಬಡಿ ಬಾಣೆಲಿ
। ಮನೆಮನೆ ಕಪ್ಪ್‌ಗ ಸುರಾದೊ ಮ್ಯಾನ್ಸ್ ಕಾಂಪೌಂಡ್ ಮೈದಾನಲಿ ॥

ಬರ್ತಾವುಟ್ಟು ಹೊಸದೊಂದು ತಂಡ । ನಡ್ಸುವೆ ನಾವೂ ತೇಳಿ ।
ಕಾವೇರಿ ಕ್ರಿಕೆಟ್ ಹಬ್ಬದ ಹೆಸ್‌ರ್‌ಲಿ ಮೈಸೂರು – ಬೆಂಗ್ಳೂರ್ ತಂಡ॥

ಕಾವೇರಿ ಕ್ರಿಕೆಟ್ ಹಬ್ಬ । ಕುಸಿಲಿ ಪೊರ್ಲಾಗಿ ನಡೆಲಿ
ಒಟ್ಟಿಗೆ ಕುಸಿಲಿ ಒಟ್ಟಾಗಿ ನಡೆಲಿ । ಕ್ರಿಕೆಟ್ ಮ್ಯಾಚ್ ಹಬ್ಬ॥

ಕ್ರಿಕೆಟ್ ಹಬ್ಬ ನಡ್ಸ್‌ವ್‌ಕು ನೋಡ್ದವ್‌ಕು ಕುಲದೇವ್ರು
ವೆಂಕಟರಮಣ ಸ್ವಾಮಿ ಹರ್ಸಲಿ ತೇಳಿ ಬೇಡೊನ ॥

ವೆಂಕಟರಮಣ ಸ್ವಾಮಿನ ಎಲ್ಲವು ನೆನಿಯೊನ ।
ಊರುನಾಡ್ ಗೌಡುಗಯೆಲ್ಲಾ ಕೂಡಿ ಬೇಡೊನ ॥

ನಾವೂ ನೀವೂ ಕೂಡಿಪೋಯಿ । ಕ್ರಿಕೆಟ್ ಹಬ್ಬನ ನೋಡಿಕೆ ಪೋಯಿ
ಕೂಡಿ ಆಡಿ ಕುಸಿಲಿ ಕೊಣ್ಡ್ । ಕಪ್ಪ್‌ನ ತಕಂಬಕೆ ಬನ್ನಿ ಪೋಯಿ ॥

* * * * *

ಗಣ್‌ಮಕ್ಕಳ ಹುತ್ತೆರಿ ಕೋಲಾಟ

ಇಗ್ಗುತಪ್ಪನ ಹುತ್ತೆರಿ ಕೋಲಾಟ
ಬೈತೂರಪ್ಪನ ಕೋಲುನ ಕೊಣ್ತ.............
ಪೊಯ್‌ಲೆ................ಪೊಯ್‌ಲೆ ॥

ಕಾವೇರಮ್ಮಂಗೆ ಕೋಲಾಟ ಕೊಣ್ತ
ಇಗ್ಗುತಪ್ಪನ ಕೋಲುನ ಕೊಣ್ತ.............
ಪೊಯ್‌ಲೆ..................ಪೊಯ್‌ಲೆ ॥

ಕೊಡ್‌ಗ್‌ನ ಮಣ್ಣ್‌ಲಿ ಬೆಳ್‌ದಂತ ಭತ್ತಾ
ತೆನೆ ತುಂಬಿ ಬಾಂಗಿ ಜೂಂಗಿ ನಿತ್ತುಟ್ಟು

ಪಾಲೂರಪ್ಪನ ಕೋಲಾಟ ಕೊಣ್ತ
ಮಾದುರಪ್ಪನ ಕೋಲುನ ಕೊಣ್ತ.............
ಪೊಯ್‌ಲೆ.................ಪೊಯ್‌ಲೆ ॥

ಅಂಬಲ ಬಾಣೆಲಿ ಎಲ್ಲವು ಕೊಡ್ಯೊಳೊ
ಗೆಜ್ಜೆನ ಕಟ್ಟಿದ ಕೋಲುನ ತಂದೊಳೊ

ತಕ್ಕರ್ ಎಲ್ಲವು ಕೋಣಿಯಕೆ ಬನ್ನಿ
ಊರವು ಮಕ್ಕಳು ಎಲ್ಲವು ಕೂಡಿ ॥ ಪೊಯ್‌ಲೆ......................ಪೊಯ್‌ಲೆ ॥

ಕೊಟ್ಟುರಾ..........ಮ್ಯಾದ ಹೊಡ್‌ದವೆ ಕೋಲು
ಮ್ಯಾದನ ಕೊಟ್ಟ್‌ಗೆ ಕೋಣಿಯೆನಿ ನೀವು ॥

ಬೆಟ್ಟತ್ತ್ ಮಲೆಂದ ತರ್‌ಸಿದ ಕೋಲು
ಪಾತೂರ ಬೆತ್ತದ ಕೋಲುನ ಪೊರ್ಲು ॥
ಪೊಯ್‌ಲೆ...................ಪೊಯ್‌ಲೆ ॥

ಗೆಜ್ಜೆ ಕೋಲುನ ಬೀಸುವ ಸದ್ದ್
ಗಿಲಿ ಗಿಲಿ ಕೇಳ್ದೆ ಗೆಜ್ಜೆನ ಸದ್ದ್

ಹುತ್ತೆರಿ ಹಬ್ಬಕ್ಕೆ ಜೋಗಿನು ಬೇಕು
ಪೊರ್ಲ್ಲಲಿ ಕೊಣಿಯಕೆ ಸಾಲ್‌ಲಿ ಇರೊಕು ॥
ಪೊಯ್‌ಲೆ................ಪೊಯ್‌ಲೆ ॥

ಕಿಗ್ಗಟ್ಟ್ ನಾಡ್‌ನ । ಕೊಂಗಣ ಜೋಗಿಗೆ
ತಿಂಬಕೆ ಬೇಕು ತಂಬಿಟ್ಟ್ ಮುದ್ದೆ ॥

ನೂರಾರ್ ಜೆನ ಕೊಣಿತಾ ವಳೊ
ನೂರಾರ್ ಹೆಣ್ಮಕ್ಕ ನೋಡ್ತಾ ವಳೊ ॥
ಪೊಯ್‌ಲೆ........................ಪೊಯ್‌ಲೆ ॥

ಬಾ..........ಬಾ........ಹುತ್ತೆರಿ ಬರೊರ್ಸ ಬಾ
ನೆಲ್ಲಕ್ಕಿ ದೀಪ ಬೆಳ್‌ಗ್‌ತಾ ಯಿದ್ದದೆ ॥

ಇಗ್ಗುತ್ತಪ್ಪನ ಕೋಲಾಟ ಕೊಣ್ತ್......................
ಕಾವೇರಮ್ಮಂಗೆ ಕೋಲಾಟ ಕೊಣ್ತ್...............
ಪೊಯ್‌ಲೆ..................ಪೊಯ್‌ಲೆ ॥

* * * * *

ಹೆಣ್ ಮಕ್ಕಳ ಹುತ್ತರಿ ಕೋಲಾಟ

ಪೊಲಿ ಪೊಲಿ ಪೊಲಿ ದೇವ । ಪೊಲಿ ಪೊಲಿ ಪೊಲಿ ದೇವ ॥
ಪೊಲಿ ಪೊಲಿ ಪೊಲಿ ದೇವ । ಪೊಲಿ ಪೊಲಿ ಪೊಲಿ ದೇವ ॥

ಹುತ್ತರಿ ಹುತ್ತರಿ ಕೋಲು । ಯಾರಿಗೆ ಹುತ್ತರಿ ಕೋಲು?
ಪಾಡಿಲಿರ್ವ ಇಗ್ಗುತ್ತಪ್ಪಂಗೆ ಹುತ್ತರಿ ಹಬ್ಬದ ಕೋಲು ॥ ಹುತ್ತರಿ ॥2॥

ಕದ್‌ರ್ ಪೂಜೆ ನೆರೆಪೂಜೆ । ಇಗ್ಗುತ್ತಪ್ಪಂಗೆ
ಈಡ್‌ಕೋಲು ನಾಡ್‌ಕೋಲು ಇಗ್ಗುತಪ್ಪಂಗೆ ॥ ಹುತ್ತರಿ ॥

ಇಗ್ಗುತಪ್ಪಂಗೆ ಕೋಲು । ಕೊಡ್ಗ್‌ಲೆಲ್ಲಾ ಕೋಲು
ಅಂಬಲಮಾನಿಲಿ ಕೋಲು । ಬಾಣೆಲಿ ವಾಡೆಲಿ ಕೋಲು
ಬಾಣೆಲಿ ವಾಡೆಲಿಕೋಲು । ಆಲದ ಮರದಡಿ ಕೋಲು
ತಡಿಯಂಡ ಮೊಳ್ ಎದ್‌ರಿಗೆ ಕುದ್ದ ।ಇಗ್ಗುತ್ತಪ್ಪಂಗೆ ಕೋಲು
॥ ಹುತ್ತರಿ ॥2॥

ಮನೆಮನೆ ಬಾದು ಜೋಗಿ । ಹುತ್ತರಿ ಹಬ್ಬದ ಜೋಗಿ
ಅಂಗರೆಕೋಲು ಬಾಳೆಲೆ ತೊಪ್ಪಿ । ಗಣ ಗಣ ಗಂಟೆಸದ್ದ್‌ನ ಜೋಗಿ
॥ಹುತ್ತರಿ॥2॥

ಮ್ಯಾದನ ಕೊಟ್ಟ್‌ಗೆ ಕೊಣಿವ ಜೋಗಿ
ಪೊರ್ಲುನ ಜೋಗಿ ಕೊಣಿಯೊದು ನೋಡಿ ॥
ನಮ್ಮೂರ ಕೋಲಾಟ ಕೊಣ್ತುದ ಜೋಗಿ
ತಂಬಿಟ್ಟ್ ಬಾಳೆಣ್ಣ್ ತಿಂಬೊದು ನೋಡಿ ॥ ಹುತ್ತರಿ॥2॥

ಹುತ್ತರಿ ಹುತ್ತರಿ ಕೋಲು ಯಾರಿಗೆ ಹುತ್ತರಿ ಕೋಲು ?
ಪಾಡಿಲಿರ್ವ ಇಗ್ಗುತಪ್ಪಂಗೆ । ಹುತ್ತರಿ ಹಬ್ಬದ ಕೋಲು ॥2॥

ಹುತ್ತರಿ ಹುತ್ತರಿ ಕೋಲು । ಯಾರಿಗೆ ಹುತ್ತರಿ ಕೋಲು?
ಕೊಡ್ಗ್‌ನ ದೇವಿ..... ಕಾವೇರಮ್ಮಂಗೆ । ಹುತ್ತರಿ ಹಬ್ಬದ ಕೋಲು ॥2॥

* * * * *

ವನವಾಸಲಿ ಪಾಂಡೊವು

ಕಿನ್ನರಿ ಕಿರ್‌ಗೆಜ್ಜೆ ಕೈಲಿ ನುಡಿಸ್ಕಂಡ್
ಕಿನ್ನ್‌ರಿ ಮ್ಯಾಲೆ ಕಿರ್ ಗೆಜ್ಜೆ । ತಾನಂದನೊ ತಾನನೊ ತಂದನ್ನಾನೊ...
ಮಂಟಪದ ಮನೆಕಟ್ಟಿ । ಪಾಂಡೊವು ಜೂಜಾಡಿ ।
ಸೋತ್ ಹೋದೊ ಅವು ರಾಜ್ಯನ್ನೆಲ್ಲಾ ....
ಕರಿಯಪುರ ಪಟ್ಣಲಿ ಪಾಂಡೊವು ಕೌರವು ।
ಧರಣಿನೆ ಒತ್ತೆಮಡ್ಗಿ ಜೂಜಾಡ್ದೊ ....
ಪಾಪಿ ಕೇಡಿ ಶಕುನಿ ಅಂವ । ಪಾಪನೆ ತುಂಬಿ ಕಂಡವ ।
ಪಾಂಡವ ಧರ್ಮರಾಯ ದ್ರೌಪದಿನೆ ಸೋತ್ ಕಂಡ್। ತಾನಂದನೊ..
ಭೂಮಿ ಕಾಣಿ ಮನೆ ಮಾರೆಲ್ಲಾ
ಆನೆ ಕುದುರೆ ಒಂಟೆ ಸಾಲ್ ಗಳಾ ॥
ಬ್ಯಾಡ ಬ್ಯಾಡ ತೇಳ್ರು ಅಂವ ಕಜಾನೆ ತರ್ಸಿತ್ ।
ಸೋತ್ ಹೋದ ಸುದ್ದಿ ಕೇಳಿ ಮುದ್ದು ಮೊಕದ ॥
ಮುದ್ದು ಮೊಕದ ದ್ರೌಪದಿನಾ
ಮುಂದೆ ಮಾಡಿ ಎಳ್ದ್ ತಂದೊ ಮಾನವ ತೇಳ್‌ವ ರಕ್ಕಸರ್
ಅವ್ವಾ ಕೇಳ್– ನಮ್ಮ ಅರಸರ್ ಹೆಮ್ಮೆಂದ
ಧರ್ಮರಾಯಂಗೆ ಸೋಲ್ ತೇಳ್ವ ಸುದ್ದಿ ಕೇಳಿ ತಾನಂದನೊ...
ಧರ್ಮರಾಯಂಗೆ ಸೋಲ್ ತೇಳ್ವ ಸತ್ಯ ತಿಳ್ದ ಅವ್‌ಳು
ಭೂಮಿ ತಾಯಿಗೆ ಮೊಕಮಾಡಿ ತಗ್ಗಿ ನಿತ್ತೋತು...........
ಭೀಮ ಧರ್ಮರಾಯಂಗೆ ವನ ವಾಸ ಬಾಕನ
ಬೆರ್‌ಣಿ ತಟ್ಟಿ ಎದರ್ ಹೊಡ್ದ್ ತಾನಂದನೊ
ಪಾಂಡವರ ಬದ್‌ಕ್ ಏನಾತೊ ಎಂತಾತೊ ?
ಉಣ್ಣುವ ತಟ್ಟೆ ತಾವರೆ ಎಲೆ ಆದೊ ....
ತಟ್ಟೆ ಚೊಂಬು ತುಂಬೆ ಗಿಡ ಆದೊ
ಕರೆವ ಹಸ್ ಕಾಡ್ ಮೃಗ ಆದೋ..........ತಾನಂದನೊ
ಕಲ್ಲ್ ಕಡುಬು ಮಾಡಿ ಮುಳ್ಳು ಸ್ಯಾವಿಗೆ ಹೂಡಿ
ತಾನಂದನ್ನೋ ತಾನನೊ ತಂದಾನನೊ

ಬನ್ನಿ ಮರದಡಿಲಿ ಪಾಂಡೊವು.
ಅತ್ತಿ ಮರದಾ ಕೆಳ್ಗೆ ಅಡ್ಗೆಮಾಡಿ । ಅನ್ನ
ಉಂಡ್ । ಹೋದೊ ಅವು ವನವಾಸಾ ....ತಾನಂದನೊ
ಅತ್ತಿ ಮರದಾ ಕೆಳ್ಗೆ ಅಡ್ಗೆ ಮಾಡಿ । ಉಂಡ್ ಹೋದವು
ಅತ್ತಿ ಕಾಯಿ ಒಲೆ ಹೂಡಿ ಪಾಂಡೊವು ॥ ತಾನಂದನೊ
ಕುಂತಿ ಕೊಟ್ಟಾಣ ಕುಟ್ಟಿ ಭೀಮ ಭಿಕ್ಷಾ ಬೇಡಿ ।
ಎಂತವುಕೆ ಎಂತಾಗತಿ ಬಾತಪ್ಪ? ಸತ್ಯಕ್ಕೆ ಬೆಲೆ ಎಲ್ಯುಟ್ಟು! ತಾನಂದನೊ
ಕುಂತಿನ ಮಕ್ಕ ದನಗಳ ಕಾದೊ
ಕುಂತ್ಯವ್ವ ಶೋಕ ಮಾಡ್ತ್ ಮನ್ಸ್‌ಲೇ
ಅಷ್ಟೆಂಬಾ ಹೊತ್ತ್‌ಲಿ .... ;; ತಾನಂದನೊ
ಒಪ್ಪ ಜಾಜಿ ಚಪ್ಪರ ಹೂಡಿ ರೆಪ್ಪೆ ಮುಚ್ಚಿ
ತೆಗೆಕೆ ಮುಂದೆ ಒಂದು ಬೆಡ್‌ಗ್ ಆಗೆಹೋತು(ತೆಗೆಕೆ ಮುಂದೆ)
ಒಂದು ಬೆಡಗ್ ಆಗೆಹೋತು
ಹರಿನೆ ಅವುಗಳಿಗೆ ದರ್ಶನ ಕೊಟ್ಟ್ ಕೇಳ್ದ ತಾನಂದನೊ
ಅರಮನೆಲಿರ್‌ವ ಪಟ್ಟೆ ಕಂಬ ಸಾಲ್ ಮನೆಯವೇ
ಪಟ್ಟಣ ಬುಟ್ಟ್ ಬಂದರಿ ಯಾಕೆ ನೀವು ? ॥ ತಾನಂದನೊ
ಪಟ್ಟಣ ಬುಟ್ಟ ಬಗೆಯೆನ್ ನೀವ್
ಅತ್ತೆವ್ವ – ಕುಂತ್ಯವ್ವಾ ಹೇಳಿ ನೀವ್ ..... ತಾನಂದನೊ
ಅತ್ತೆವ್ವ ಕುಂತ್ಯವ್ವಾ ತಂಗ್ಯಮ್ಮ ದ್ರೌಪದಿ
ಅಕ್ಷಯ ಪಾತ್ರನ ತಲೆ ಮ್ಯಾಲೆ ತಾನಂದನೊ
ಅಕ್ಷಯ ಪಾತ್ರನ ತಲೆಮ್ಯಾಲೆ ಮಡ್ಲಿಕಂಡ್
ಭಾವ ರೈವರಿಗೂ ಉಣ ಬಡ್ಸ್ ತಂಗ್ಯವ್ವಾ ತಾನಂದನೊ
ಸತ್ಯಲಿರುವ ಪಾಂಡೊವು ಸತ್ತೋತಾ ಹೇಳ್ ಬ್ಯಾಡಿ
ಬಿತ್ತಿ ಹೋದೊ ... ಅವು ಹೊಲ ತುಂಬಾ ಅವರೇನಾ
ತಾನಂದನ್ನಾ ತಾನನೊ......... ತಂದಾನ್ನಾನೊ ....

* * * * *

ಜಲಕ್ರೀಡೆ (ನೀರಾಟ)

ಯಮುನೆ ದಡಲಿ । ಇಂದುವದನೆಗ ಬಂದ್ ।
ಸೀರೆಗಳ ಬಿಚ್ಚಿ ದಡಲಿಟ್ಟ್ । ಗುಂಪಾಗಿ
ನಾರಿಮಣಿಗ ನೀರಿಗಿಳ್ದೋ................
        ಗುಂಪಾಗಿ ನಾರಿಮಣಿಗ ನೀರಿಗಿಳಿಯಕನಾ
        ಕಂಠಲಿದ್ದ ಮುತ್ತು ಹೊಳೆಯ್‌ಕನಾ ।
        ಅಚ್ಯುತಾನಂದನ ಸ್ಮರಣೆ ನಾ ॥
ಅಚ್ಯುತಾನಂದನ ಸ್ಮರಣೆ ಮಾಡಿಕಂಡ್
ಮುಡಿಗಳ ಬಿಚ್ಚಿ ನೀರಿಗಿಳ್ದೊ –ಜಲಕ್ರೀಡೆ
ಆಟನ ಆಡಿಕಂಡ್‌ರ್‌ಕನಾ ॥
        ಎಲ್ಲಿಂದಲೊ ಬಂದಾ ಕೃಷ್ಣ ಅಂವ'
        ಸೀರೆ ರೌಕೆಗಳ ಕದ್ದ್‌ತಂದ್ । ಮರಏರಿ
        ಕುದ್ದ್ ನೆಗಾಡುವವನೆ ಕೃಷ್ಣಾ ॥
ಜಲಕ್ರೀಡೆ ನೋಡ್ತಾ ಜಲಜಾಕ್ಷ ಮರಲಿಕುದ್ದ್ ।
ಜಲಕ್ರೀಡೆ ಮುಗ್‌ಸಿ ಕಾಂತೆಗ । ಬಂದ್‌ನೋಡ್ರೆ
ಬಿಚ್ಚಿಟ್ಟ ವಡವೆ ವಸ್ತ್ರ ಅಲ್ಲಿಲ್ಲೇ................. ॥
        ಒಯ್ದಂವ ಯಾರಂವ ? ಬಿಚ್ಚಿಟ್ಟ ವಸ್ತಅಲ್ಲಿಲ್ಲೆ...........
        ಯಾವ ಮೂರ್ಕನಂವ ? ನಮ್ಮಗಳ ವಸ್ತ್ರೆಲ್ಲಿ ?
        ಬಲ್ಲಿದಾ ರಂಗಾಃ ತೇಳಿ ಮರನಾ...................॥
ತಲೆಯೆತ್ತಿ ಮರ ನೋಡ್‌ಕನಾ ನೆಗಾಡ್ತ
ಕುದ್ದಾ ಕೃಷ್ಣನ ಕಂಡೋ ॥ ಕಳ್ಳಕೃಷ್ಣನೆ
ನಮ್ಮ ಒಡವೆ ವಸ್ತ್ರಗಳ ಕೊಡೊ...................ಕೃಷ್ಣಾ ॥

* * * * *

ದ್ರೌಪದಿನ ಸೀರೆ ಎಳ್‌ಯೊದು

ತನುಮನನಾ ಹರಿಗೆರ್ತ್ ದ್ರೌಪದಿ
ಹರಿಕೃಪೆಂದ ಸೀರೆಗಳ ಸೊರಿಮಳೆ ॥

ಸುಲ್ಬಾಗಿ ಎಳ್ತಂವ । ಭರ ಭರ ಸೀರೆನ ।
ದ್ರೌಪದಿ ನಿತ್ತುಟ್ಟು ಇನ್ನೂ ಸೀರೆಲೆ ॥

ಬೆರ್‌ಗಾಗಿ ನೋಡ್ತಂವ । ಎಳ್‌ದಾ ಸೀರೆನಾ ।
ಸೀರೆ ರಾಶಿ ಕಂಡ್ । ಕೈಮುಗ್ದೊ ಹರಿಗೆ ॥ ತನು ॥

ನಾನಾ ಬಣ್ಣದ ಕಳ್ಳಿ ಕಳ್ಳಿ ಸೀರೆ
ನಾನಾ ಬಣ್ಣ ಬೆಳ್‌ಗುವ ಸೀರೆ

ಹರಿ ಕೃಪೆಂದಾ ಸೀರೆಗಳ ಸೊರಿಮಳೆ ।
ಸರಸ್ವತಿವುಡುವಾ । ಬೆಳಿ ಬಣ್ಣದ ಸೀರೆ ॥

ಭರ್ಜರಿ ಬಟ್ಟೆಯ ಕುಸುಮದ ಸೀರೆ ।

ಪಾರ್ವತಿವುಡುವಾ । ಪಚ್ಚೆ ಬಣ್ಣದ ಸೀರೆ ॥
ಅಹಲ್ಯೆ ಕಟ್ಟಿದ ಆನಂದದ ಸೀರೆ ।
ಪಂಕಜಮುಖಿ ಹಚ್ಚಡಯಿರ್‌ವಾ ಸೀರೆ ॥

ಶುಕಮುನಿ ಕೊಡ್‌ಸಿದ ಈ ಸೀರೆ ।
ಹರಿಕೃಪೆಂದ ಸೀರೆಗಳ ಸೊರಿಮಳೆ ॥

ನೋಡಿ ನಡ್‌ಗಿತ್ ಸಭೆಯ ಜೆನ
ಸೀರೆ ರಾಶಿ ಕಂಡ್ ಕೈ ಮುಗ್ದೊ ಹರಿಗೆ ॥
ಸೀರೆ........ರಾ........ಶಿ.......ಕಂಡ್......ಕೈಮುಗ್ದೊ ಹರಿಗೆ ॥

* * * * *

ನೆರಿ ಪೊರ್ಲು

ಮೂಡಣ ಮಂಟಪ ಪೊರ್ಲು ಮೂಡಣ ಮೆಟ್ಟ್ ಪೊರ್ಲು ।
ಚಳ ಚಳ ಬರ್‌ವಾ ಹೊಳೆ ಪೊರ್ಲು ॥ ಪಾರ್‌ವತಿ
ನಿನ್ನ ಕೇದಿಗೆ ಬಣ್ಣದಸೀರೆ ನೆರಿಪೊರ್ಲು ॥

ಮೂಗು ಬೊಟ್ಟು ಮುಂಭಾರ । ಜಡೆಗಂಟ್ ಹಿಂಭಾರ
ಐದೆಳೆ ಗುಂಡುಸರ ಎದೆಭಾರ ॥ ಪಾರ್‌ವತಿ
ನಿನ್ನ ಕೆಂಪುನ ಸೀರೆ ನೆರಿಪೊರ್ಲು ॥

ಸ್ವಾತಿ ಮಳೆ ಬಂದ್ ಮಂಜ್‌ನ ಹೊಗೆ ತುಂಬಿ
ತಾಯಿ ಪಾರ್‌ವತಿ ಜಲ್‌ಕವಾಡಿ ॥ ಬಾಕನ
ಗಂಧಧೂಪ ಹೊಗೆ ಕವ್‌ದೋತು ॥

ಹೂಕಟ್ಟ್ ಮುಡಿಗೇರ್ಸಿ ವಿಭೂತಿ ಧರ್ಸಿಕಂಡ್
ಶಿವನ ಭುಜನ ಒರ್‌ಗಿಕುದ್ದ್ ॥ ಪಾರ್‌ವತಿ
ಬೀದಿನ ತೇರ್‌ಲಿ ಮೆರಿತಾವುಟ್ಟು ॥

ಕೆರೆಸುತ್ತು ಕಟ್ಟೆ । ಕತ್ತುದ್ದ ನೀರುಟ್ಟು ।
ಪಟ್ಟೆ ಸೀರೆಯಾ ಪಾರ್‌ವತಿ ॥ ತೆಪ್ಪಾ
ಬಂದುಟ್ಟು ದಯ ಮಾಡವ್ವಾ ॥

ಮಾವುನ ಮಿಡಿ ಸುದ್ದಿ । ಮಾತಾಡ್ತ ಬಾಕನ
ಮಾವುನ ಮರದಾ ಸುಳಿಕೊಡಿಲಿ ॥ ಕುದ್ದ
ಗಿಳಿ ಹಿಂಡ್ ನೋಡ್ದೆ ಪಾರ್ವತಿ ॥

ತೇರ್ ನಂಜುಂಡಂಗೆ ತೆಪ್ಪ ಪಾರ್‌ವತಿಗೆ
ಪಲ್ಲಕ್ಕಿ ಯೊಳಗಿರ್‌ವ ಗಿರಿಜವ್ವ । ಪಾರ್‌ವತಿ
ತೆಪ್ಪ ಬಂದುಟ್ಟು ದಯಮಾಡವ್ವಾ ॥

ಬಿಸ್‌ಲ್‌ನ ಜಳಕೆ ಬಾಡ್‌ದ ಶ್ರೀಗೌರಿ
ಎಳನೀರ್ ನಿಂಗೆ ಅಭಿಷೇಕ ॥ ಕುಡಿಯಕೆ
ಬಾಗಿನದೊಟ್ಟಿಗೆ ಬಾಯಾರಿಕೆ ॥

* * * * *

ಬಾಗ್‌ಲ್ ತಡಿಯೊದು

ಬಾಗ್‌ಲ್ ತಡ್‌ದೊವು ಬಂಗಾರದ ಮೊಕದವು
ನೀವು ತಡ್‌ದ ಬಾಗ್‌ಲ್ ಬುಡಿ ಬೇಗ॥
        ನೋಡಿ ರಂಗಗಾಳಿ । ಮಾಣಿಕದ ಪೊರ್ಲು ನೋಡಿ
        ಚೆಂದ ಚಿತ್ರದ ಬಾಗ್‌ಲ್ ಬುಡಿ ಬೇಗ॥
ಹಸ್‌ನ ಕೊಟ್ಟವೆ ಕರ್‌ಬುಟ್ಟ್ ಕುಡಿಯಕೆ
ನೀವು ತಡ್‌ದ ಬಾಗ್‌ಲ್ ಬುಡಿಬೇಗ॥
        ನೋಡಿ ರಂಗಗಾಳಿ । ಮಾಣಿಕದ ಪೊರ್ಲುನಗಾಳಿ
        ವಾಲೆ ವಾಲೆಗೆ ವಜ್ರದ ಓಲೆ ಕೊಟ್ಟನೆ
ನೀವು ತಡ್‌ದ ಬಾಗ್‌ಲ್ ಬುಡಿ ಬೇಗ ರಂಗಯ್ಯ
ಬಾಗ್‌ಲ್ ತಡ್‌ದೊವು ಬಂಗಾರದ ಮೊಕದವು

* * * * *

ನೀರ್ ಮೊದುವೆಲಿ

ಚಿನ್ನದುಂಗ್‌ರ ನಿಂಗೆ ಮತ್ತಷ್ಟ್ ಭಾಗ್ಯ ನಿಂಗೆ
ಚಿನ್ನದ ಉಪ್ಪರಿಗೆ ಮನೆ ನಿಂಗೆ ಮಗಳೆ॥
        ಚಿನ್ನದ ಉಪ್ಪರಿಗೆ ಮನೆ ನಿಂಗೆ ಏ ಮಗ್‌ಳೆ
        ಉಪ್ಪರಿಗೆ ವೊಳಗೆ ಗಿಲಿ ಗಿಲಿ ಕಾಲ್‌ಗೆಜ್ಜೆ॥
ನಿನ್ನ ಚಿನ್ನದುಂಗ್‌ರಕೆ ಎಲ್ಲ ಭಾಗ್ಯನು ಬರ್‍ಲಿ
ಉಪ್ಪರಿಗೆ ಮನೆಲಿ ಕೊಪ್ಪರಿಗೆ ಹಣನೋಡಿ॥
        ಅಳಿಯ ರಂಗಯ್ಯನ ಗುಣಕಂಡ್ ಮಗಳ್‌ನ
        ಉಪ್ಪರಿಗೆ ಮನೆಗೆ ಸತಿನ ಧಾರೆಯೆರ್‍ದೊ॥
ಹಾಸುವ ಹಾಸಿಗೆ ಕಂಡ್। ತೂಗ್‌ವ ಮಂಚನಕಂಡ್
ಅಳಿಯ ರಂಗಯ್ಯನ ಗುಣಕಂಡ್॥
        ಮೇಲಾಗಿ ಮಗಳಾ ಸುಕಕಂಡ್
        ಉಪ್ಪರಿಗೆ ಮನೆಗೆ ಮಗಳಾ ದಾರೆಯೆರ್‍ದೊ॥

* * * * *

ಕೃಸಿ ಹಾಡ್

ಓ ಹೊಯ್ಯಾ........ ಓ..ಹೊ...........ಹೊಯ್ಯಾ॥

ಕಡ್‌ಕೆಲಿ ಮಡ್‌ಗಿ ಕಟ್ಟಿದ ಭತ್ತ............
ಕೆಂಬೆತ್ತ್ ವಾಲಾಡಿ ಬೆಳ್‌ದಂತ ಭತ್ತ ॥ ಓ ಹೊಯ್ಯಾ ॥

ಚಿನ್ನದ ಕತ್ತಿಲಿ ಕೊಯ್‌ದಂತ ಬೆಳೆನ..............
ರನ್ನದ ಹಗ್ಗಲಿ ಹೊರೆಕಟ್ಟಿ ತಂದ್ ॥ಓ ಹೊಯ್ಯಾ॥

ನಾರಾಯಣ ಶಿವತೇಳ್‌ವ ಎರಡೆತ್ತ್‌ಲಿ..........
ಹೂಡ್‌ದಂತ ಗದ್ದೆಲಿ ಬೆಳ್‌ದಂತ ಅಗೆನ ॥ಓ ಹೊಯ್ಯಾ॥

ಕಳಿ ಕಳಿ ನಾಟಿ ಕಾವೇರಮ್ಮಂಗೆ................
ಕಳಿ ಕಳಿ ನಾಟಿ ಇಗ್ಗುತ್ತಪ್ಪಂಗೆ ॥ಓ ಹೊಯ್ಯಾ॥

ಕಾವೇರಮ್ಮನ ಮನ್‌ಸ್‌ನ ಹಂಗೆ...........
ಇಗ್ಗುತ್ತಪ್ಪನ ಬೆಟ್ಟದ ಹಂಗೆ ॥ಓ ಹೊಯ್ಯಾ॥

ಏರಿಗು ಬಾರಿಗು ಮುಟ್ಟಿಕಂಡ್ ಬೆಳೆಯಲಿ.........
ಬೆಳದಂತ ಭತ್ತ......ಸಮಾಪಾಲ್ ॥ಓ ಹೊಯ್ಯಾ॥

ನಂಗೂ ದೇವ್‌ರಿಗು ಸಮಾಪಾಲ್.........
ನಂಗೂ ನಿಂಗೂ ಸಮಾಪಾಲ್ ॥ಓ ಹೊಯ್ಯಾ॥

* * * * *



ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವು ಅವಂದೂರು ಗ್ರಾಮದ
ಪಟ್ಟಡ ಮುತ್ತಣ್ಣ ಮತ್ತೆ ನೀಲಮ್ಮ ದಂಪತಿಗಳ ಮಗ್‌ಳ್,
ಇವು ಪಾಲೂರಾನ ಬೈತಡ್ಕ ಬೆಳ್ಯಪ್ಪ ಇವರ ಮದುವೆ ಆದೊ.
ಈಗ ಕೃಷಿಕ ಆಗಿರ್ವ ಇವರ ಗಂಡ ಬೆಳ್ಯಪ್ಪ
ವಾಯುಪಡೆ ಮತ್ತೆ ಜೀವವಿಮಾ ಕಂಪೆನಿಲಿ ಚಾಕ್‌ರಿ ಮಾಡಿ ನಿವೃತ್ತಿ ಹೊಂದಿಯೊಳೊ

ಗೃಹಿಣಿಯಾದ ಇವು ಇಬ್ಬೊರು ಗಂಡ್‌ಮಕ್ಕ ಹಂಗೆ
ಪಿಳ್ಳೆಕಳೊಟ್ಟಿಗೆ ಮಡಿಕೇರಿಲಿ ನೆಲೆನಿತ್ತೊಳೊ.
ಜಾನಕಿ ಬೆಳ್ಯಪ್ಪನವು ಮೂಲತ ಸಾಹಿತಿ, ಜನಪದ ಕಲಾವಿದೆನೂ ಹೌದು.
ಅಳಿತಾ ಇರುವ ಸಾಹಿತ್ಯ ಕಲೆಗಳ್‌ನ ಸಂಗ್ರಹಿಸುದು ಇವರ ಹವ್ಯಾಸ.
ಜಿಲ್ಲೆ ಮತ್ತೆ ರಾಜ್ಯಂದ ರಾಜ್ಯ ಪ್ರಶಸ್ತಿ, ಗೌರಮ್ಮ ಪ್ರಶಸ್ತಿ,
ರಾಜ್ಯೋತ್ಸವ ಪ್ರಶಸ್ತಿ ಅಲ್ಲದೆ ಹಲವಷ್ಟ್ ಪ್ರಶಸ್ತಿಗಳ್‌ನ ಇವರ ಸೆರ್‍ಗ್‌ಲಿ ಇಸಿಕಂಡ್
ಅರೆಭಾಷೆ ಬೆಳವಗಣಿಗೆಗೆ ಪ್ರಯತ್ನಿಸ್‌ತೊಳೊ.

ಈಗಾಗಲೇ ಇವು 'ಹಸೆಮಣೆ' ಮತ್ತೆ 'ಅಕ್ಷಯ' ಅಂತೇಳುವ ಎರ್‌ಡ್ ಕೃತಿಗಳ್‌ನ ಪ್ರಕಟಿಸಿಯೊಳೊ.
'ಬೇರ್‌ಲಿ ಚಿಗ್‌ರ್' ಇವು ಬರ್ದ ಮೂರನೇ ಕೃತಿ.
ಇದ್ ಕರ್ನಾಟಕ ಅರೆಭಾಷೆ ಅಕಾಡೆಮಿಂದ ಪ್ರಕಟ ಆಗ್ತಾ ಉಟ್ಟು.

ಸಲಹಾ ಸಮಿತಿ.

ಬೇರ್‌ಲಿ-ಚಿಗ್‌ರ್

ಬೈತಡ್ಕ ಜಾನಕಿ ಬೆಳ್ಯಪ್ಪ